ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 16 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 208 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

International Year of Cooperatives 2025
Cooperatives Build a Better World

NABARD KSCHF


ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,

ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಅಖಿಲ ಭಾರತ 72 ನೇ ಸಹಕಾರ ಸಪ್ತಾಹ 2025



ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಸಪ್ತಾಹ ಧ್ಯೇಯ: "ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು"

ಸಹಕಾರ ಇಲಾಖೆಯ ಗುರಿ ಹಾಗೂ ಸಾಧನೆಗಳು - 2025

- **ಕೃಷಿ ಸಾಲ:** 2025-26 ನೇ ಸಾಲಿನಲ್ಲಿ 37 ಲಕ್ಷ ರೈತರಿಗೆ ರೂ.28,000 ಕೋಟಿಗಳ ಕೃಷಿ ಸಾಲ ವಿತರಿಸಲು ಗುರಿ ಹೊಂದಿದ್ದು, ಅಕ್ಟೋಬರ್ 2025 ರ ಅಂತ್ಯಕ್ಕೆ 14.94 ಲಕ್ಷ ರೈತರಿಗೆ ರೂ.13973.09 ಕೋಟಿ ಕೃಷಿ ಸಾಲ ವಿತರಿಸಲಾಗಿದೆ.
- ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ಬೆಳೆ ಸಾಲ ಬಡ್ಡಿ ಸಹಾಯಧನ ಯೋಜನೆಗೆ 1591.73 ಕೋಟಿ ರೂ.ಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು, ಇದುವರೆಗೆ 5.40 ಲಕ್ಷ ರೈತರಿಗೆ ರೂ.397.93 ಕೋಟಿಗಳ ಅನುದಾನವನ್ನು ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆ. ಸರ್ಕಾರದಿಂದ ಎರಡನೇ ಕಂತಿನ ಮೊತ್ತ 397.93 ಕೋಟಿ ರೂ.ಗಳ ಅನುದಾನ ಬಿಡುಗಡೆಯಾಗಿದೆ.
- **ಮಹಿಳಾ ಸಬಲೀಕರಣ:** 87,619 ಸ್ತ್ರೀಶಕ್ತಿ/ಸ್ವಸಹಾಯ ಗುಂಪುಗಳನ್ನು ರಚನೆಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ಸೆಪ್ಟೆಂಬರ್-2025 ರಂತ್ಯಕ್ಕೆ 6958 ಗುಂಪುಗಳಿಗೆ ರೂ.342.37 ಕೋಟಿಗಳ ಸಾಲ ವಿತರಿಸಲಾಗಿದೆ.
- ಸ್ವಸಹಾಯ ಗುಂಪುಗಳ ಸಾಲದ ಬಡ್ಡಿ ಸಹಾಯಧನ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ಸರ್ಕಾರ 108.26 ಕೋಟಿ ರೂ. ಗಳ ಆಯವ್ಯಯ ಅವಕಾಶವನ್ನು ನೀಡಿದೆ.
- ಲ್ಯಾಂಪ್ಸ್ ಸಹಕಾರ ಸಂಘಗಳ ಮಾರುಕಟ್ಟೆ ಮೂಲ ಸೌಕರ್ಯಗಳ ಸ್ಥಾಪನೆಗಾಗಿ ಪ್ರಸಕ್ತ ಸಾಲಿಗೆ ರೂ.1 ಕೋಟಿ ಆಯವ್ಯಯ ಕಲ್ಪಿಸಿದ್ದು, ಈ ಪೈಕಿ 46 ಲಕ್ಷ ರೂ.ಗಳ ಅನುದಾನವನ್ನು ಎರಡು ಲ್ಯಾಂಪ್ಸ್ ಗಳಿಗೆ ಬಿಡುಗಡೆ ಮಾಡಲಾಗಿದೆ.
- ಯಶಸ್ವಿನಿ ಸಹಕಾರ ಸದಸ್ಯರ ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ 2024-25 ನೇ ಸಾಲಿಗೆ ಒಟ್ಟು 46 ಲಕ್ಷ ಸದಸ್ಯರು ನೊಂದಾಯಿಸಿಕೊಂಡಿರುತ್ತಾರೆ. ಇದುವರೆಗೆ ಒಟ್ಟು 57,500 ಸದಸ್ಯರು ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದು ಇದರ ಮೊತ್ತ ರೂ.109 ಕೋಟಿಯಾಗಿರುತ್ತದೆ.
- 2017-18 ನೇ ಸಾಲಿನ ರೂ.50,000 ಗಳ ಸಾಲಮನ್ನಾ ಯೋಜನೆಯಡಿ ಬಾಕಿ ಇದ್ದು, ರೂ.131.26 ಕೋಟಿಗಳ ಅನುದಾನವನ್ನು ದಿನಾಂಕ:27-03-2024 ರಂದು ಡಿಸಿಸಿ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗಿದೆ.
- ಡಿಸಿಸಿ ಮತ್ತು ಪಿಕಾರ್ಡ್ ಬ್ಯಾಂಕುಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಸುಸ್ತಿ ಸಾಲಗಳ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಮಾರ್ಚ್ 2024 ರ ವರೆಗೆ 36,146 ರೈತರಿಂದ ರೂ.287.98 ಕೋಟಿ ವಸೂಲಾಗಿದ್ದು, ರೂ.239.26 ಕೋಟಿ ಬಡ್ಡಿ ಮನ್ನಾ ಸೌಲಭ್ಯ ದೊರೆತಂತಾಗಿದೆ.
- ರೈತರಿಗೆ ಕೃಷಿ ಸಾಲ ವಿತರಿಸುವ ಸಲುವಾಗಿ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು ಇವರು ನಬಾರ್ಡ್ ಮೂಲಕ ಪುನರ್ಧನ ಪಡೆಯಲು ರೂ. 2000 ಕೋಟಿಗಳ ಮೊತ್ತಕ್ಕೆ ಸೀಮಿತಗೊಳಿಸಿ 2025-26 ನೇ ಸಾಲಿಗೆ ರಾಜ್ಯ ಸರ್ಕಾರದ ಖಾತರಿಯನ್ನು ವಿಸ್ತರಿಸಿ ದಿನಾಂಕ: 04-06-2025 ರಂದು ಸರ್ಕಾರವು ಆದೇಶ ಹೊರಡಿಸಿರುತ್ತದೆ.

ದಿನಾಂಕ: 14.11.2025 ರಿಂದ 20.11.2025 ರವರೆಗೆ
ದಿನವಾರು ಕಾರ್ಯಕ್ರಮಗಳ ವಿವರಗಳು

ದಿನಾಂಕ	ದಿನದ ವಿಷಯಗಳು	ಸ್ಥಳ
14.11.2025 ಶುಕ್ರವಾರ	ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು.	ಬೆಂಗಳೂರು
15.11.2025 ಶನಿವಾರ	ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ: ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ	ರಾಯಚೂರು
16.11.2025 ಭಾನುವಾರ	ಸಹಕಾರ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಯ ಬಲವರ್ಧನೆ	ಮಂಗಳೂರು
17.11.2025 ಸೋಮವಾರ	ರಾಷ್ಟ್ರೀಯ ಸಹಕಾರ ನೀತಿಯ ಪರಿಸರ ವ್ಯವಸ್ಥೆ ಭಾರತದ ಸಹಕಾರ ಸಂಸ್ಥೆಗಳಿಗೆ ರಚನಾತ್ಮಕ ಮಾರ್ಗಸೂಚಿ	ಹೊಸಪೇಟೆ
18.11.2025 ಮಂಗಳವಾರ	ಸಹಕಾರಿ ಉದ್ಯಮಶೀಲತೆಯಿಂದ ಯುವಜನ, ಮಹಿಳಾ ಮತ್ತು ಅಬಲ ವರ್ಗದ ಸಬಲೀಕರಣ (ಕರಕುಶಲ, ಕೈಮಗ್ಗ, ಕಾರ್ಮಿಕ, ಮೀನುಗಾರಿಕೆ ಇತ್ಯಾದಿ)	ಹಾವೇರಿ
19.11.2025 ಬುಧವಾರ	ಪ್ರವಾಸೋದ್ಯಮ, ಆರೋಗ್ಯ, ಹಸಿರು ಇಂಧನ, ಪ್ಲಾಟ್‌ಫಾರಂ ಸಹಕಾರಿ ಸಂಸ್ಥೆಗಳು, ಕಿಚನ್ ಸಹಕಾರ ಸಂಘಗಳು ಮತ್ತಿತರ ಉದಯೋನ್ಮುಖ ಸಹಕಾರ ಸಂಘಗಳನ್ನು ಅನುಕೂಲಕರ ಪ್ರದೇಶಗಳಿಗೆ ವಿಸ್ತರಣೆ	ಕೊಪ್ಪಳ
20.11.2025 ಗುರುವಾರ	ಜಾಗತಿಕ ಸ್ಪರ್ಧಾತ್ಮಕತೆಗಾಗಿ ನವನಾವೀನ್ಯತೆಯ ಸಹಕಾರಿ ವ್ಯವಹಾರದ ಮಾದರಿಗಳು	ಚಾಮರಾಜನಗರ

ಸಹಕಾರ ಮಹಾಮಂಡಳದ ಕಾರ್ಯಚಟುವಟಿಕೆಗಳು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಕಳೆದ 100 ವರ್ಷಗಳಿಂದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ನೀಡುತ್ತಿದೆ. ಪ್ರತಿವರ್ಷ ಸದಸ್ಯ ಶಿಕ್ಷಣ, ಕ್ಲಸ್ಟರ್ ಮಾದರಿ, ಜಿಲ್ಲಾ ಮತ್ತು ರಾಜ್ಯಮಟ್ಟದ ಕಾರ್ಯಕ್ರಮಗಳನ್ನು ಏರ್ಪಡಿಸಿ, 50000 ಜನರಿಗೆ ಶಿಕ್ಷಣ-ತರಬೇತಿ ನೀಡಲಾಗುತ್ತಿದೆ. 8 ಸಹಕಾರ ತರಬೇತಿ ಕೇಂದ್ರಗಳಲ್ಲಿ ರೆಗ್ಯೂಲರ್ ಮತ್ತು ದೂರಶಿಕ್ಷಣ ತರಬೇತಿ ಮೂಲಕ ವಾರ್ಷಿಕ 3000 ಜನರಿಗೆ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಸರ್ಟಿಫಿಕೇಟ್ ನೀಡಲಾಗುತ್ತಿದೆ. ಸಹಕಾರ ವಾರಪತ್ರಿಕೆ ಪ್ರಕಟಣೆ ಮೂಲಕ 15 ಸಾವಿರ ಚಂದಾದಾರರಿಗೆ ಪ್ರತಿವಾರ ರವಾನಿಸಲಾಗುತ್ತಿದೆ.

ಶುಭ ಕೋರುವವರು: ಆಡಳಿತ ಮಂಡಳಿ ನಿರ್ದೇಶಕರುಗಳು



ಜಿ.ಟಿ. ದೇವೇಗೌಡ – ಅಧ್ಯಕ್ಷರು
ಜಗದೀಶ ಮಲ್ಲಿಕಾರ್ಜುನ ಕವಟಗಿಮಠ – ಉಪಾಧ್ಯಕ್ಷರು
ಹೆಚ್. ಕೆ. ಪಾಟೀಲ್ – ನಿರ್ದೇಶಕರು
ಎಸ್. ಟಿ. ಸೋಮಶೇಖರ್ – ನಿರ್ದೇಶಕರು
ಬೆಳ್ಳಿ ಪ್ರಕಾಶ್ – ನಿರ್ದೇಶಕರು
ಶಕುಂತಲ ಕೆ. ಬೆಲ್ದಾಳೆ – ನಿರ್ದೇಶಕರು
ಶೇಖರಗೌಡ ಮಾಲಿ ಪಾಟೀಲ – ನಿರ್ದೇಶಕರು
ಎನ್. ಗಂಗಣ್ಣ – ನಾಮ ನಿರ್ದೇಶಿತ ನಿರ್ದೇಶಕರು
ಬಿ.ಸಿ. ಲೋಕಪ್ಪಗೌಡ – ನಿರ್ದೇಶಕರು
ಜಿ.ಪಿ. ಪಾಟೀಲ್ – ನಿರ್ದೇಶಕರು



ಎಚ್.ಎನ್. ಅಶೋಕ – ನಿರ್ದೇಶಕರು
ಜಯಕರಶೆಟ್ಟಿ ಐ. ಇಂದ್ರಾಳಿ – ನಿರ್ದೇಶಕರು
ಬಸವರಾಜ ನಿ ಅರಬಗೊಂಡ – ನಿರ್ದೇಶಕರು
ಆರ್. ರಾಮರೆಡ್ಡಿ – ನಿರ್ದೇಶಕರು
ಹೆಚ್.ವಿ. ನಾಗರಾಜ್ – ನಿರ್ದೇಶಕರು
ಜಿ.ಎಂ.ಶಿವಪ್ರಸಾದ್ – ನಿರ್ದೇಶಕರು
ಅಭಿಷೇಕ ಆರ್. ಪಾಟೀಲ – ನಿರ್ದೇಶಕರು
ಟಿ.ಎಚ್.ಎಂ. ಕುಮಾರ್ ಐ.ಎ.ಎಸ್. – ಸಹಕಾರ ಸಂಘಗಳ ನಿಬಂಧಕರು
ಕೆ.ಎಸ್. ನವೀನ್ ಕೆ.ಸಿ.ಎಸ್. – ವ್ಯವಸ್ಥಾಪಕ ನಿರ್ದೇಶಕರು
ಬಾಪೂಗೌಡ ಡಿ. ಪಾಟೀಲ್ – ವೃತ್ತಿಪರ ನಿರ್ದೇಶಕರು
ಕೆ.ಸಿ.ನಾಗರತ್ನ – ವೃತ್ತಿಪರ ನಿರ್ದೇಶಕರು

ಸರ್ವರಿಗೂ ಆದರದ ಸ್ವಾಗತ | ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,

ಶ್ರೀನಗರ ಪೊಲೀಸ್ ಠಾಣೆಯಲ್ಲಿ ಸ್ಫೋಟ; 9 ಸಾವು, 25 ಮಂದಿಗೆ ಗಾಯ

ಉಗ್ರರಿಂದ ವಶಪಡಿಸಿಕೊಂಡಿದ್ದ ಸ್ಫೋಟಕಗಳಿವು



ಶ್ರೀನಗರ, ಟಿ.15– ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿರುವ ನೌಗಾಮ್ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಭೀಕರ ಸ್ಫೋಟದಲ್ಲಿ ಒಂಬತ್ತು ಮಂದಿ ಸಾವನ್ನಪ್ಪಿದ್ದು, 25 ಜನರು ಗಾಯಗೊಂಡಿದ್ದಾರೆ.

ಭಯೋತ್ಪಾದಕರಿಂದ ವಶಪಡಿಸಿಕೊಂಡಿದ್ದ ಅಪಾರ ಪ್ರಮಾಣದ ಸ್ಫೋಟಕಗಳನ್ನು ವಿಧಿವಿಜ್ಞಾನ ತಜ್ಞರು ಮತ್ತು ಪೊಲೀಸರು ಪರಿಶೀಲಿಸುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಮೃತಪಟ್ಟವರಲ್ಲಿ ಹೆಚ್ಚಿನವರು ಪೊಲೀಸ್ ಸಿಬ್ಬಂದಿ ಮತ್ತು ವಿಧಿ ವಿಜ್ಞಾನ ಅಧಿಕಾರಿಗಳಾಗಿದ್ದಾರೆ. ಶ್ರೀನಗರ ಸರ್ಕಾರದ ಇಬ್ಬರು ಅಧಿಕಾರಿಗಳು, ಓರ್ವ ನೈಬ್ ತಹಶೀಲ್ದಾರ್ ಕೂಡ ದುರಂತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ.

ಗಾಯಾಳುಗಳನ್ನು ಸೇನೆಯ 92 ಬೇಸ್ ಆಸ್ಪತ್ರೆ ಮತ್ತು ಶೇರ್–ಇ–ಕಾಶ್ಮೀರ್ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ದಾಖಲಿಸಲಾಗಿದೆ. ಗಾಯಾಳುಗಳ ಪೈಕಿ ಐವರ ಸ್ಥಿತಿ ಚಿಂತಾಜನಕವಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಆತಂಕವಿದೆ. ಇತ್ತೀಚೆಗೆ ಇದೇ ನೌಗಾಮ್ ಠಾಣೆಯ ಪೊಲೀಸರು ಜೈಶ್ – ಎ – ಮೊಹಮ್ಮದ್ (ಜೆಇಎಂ) ಉಗ್ರ ಸಂಘಟನೆಯ ಭಯೋತ್ಪಾದಕ ಜಾಲವನ್ನು ಬೇಧಿಸಿದ್ದರು. ಈ ಜಾಲವು ಕಾಶ್ಮೀರದಲ್ಲಿ ಭದ್ರತಾ ಪಡೆಗಳು ಮತ್ತು ಹೊರಗಿನವರ ಮೇಲೆ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿ ಪೋಸ್ಟರ್‌ಗಳನ್ನು ಅಂಟಿಸಿತ್ತು.

ಈ ಪೋಸ್ಟರ್‌ಗಳ ತನಿಖೆಯಿಂದ ಉನ್ನತ ವಿದ್ಯಾವಂತ, ತೀವ್ರಗಾಮಿ ವೃತ್ತಿಪರರನ್ನು ಒಳಗೊಂಡ 'ವೈಟ್ ಕಾಲರ್' ಭಯೋತ್ಪಾದಕರ ಜಾಲವನ್ನು ಬಯಲಿಗೆಳೆದಿತ್ತು.

ಸಿಸಿ ಕ್ಯಾಮರಾ ದೃಶ್ಯಾವಳಿಗಳ ಸಹಾಯದಿಂದ ಪೊಲೀಸರು ಅ.27 ರಂದು ಡಾ. ಆದೀಲ್ ಅಹ್ಮದ್ ರಾಥರ್‌ನನ್ನು ಬಂಧಿಸಿದ್ದರು. ಆತನ ಬಂಧನದಿಂದಾಗಿ ಪಾಕಿಸ್ತಾನ ಮತ್ತು ಇತರ ದೇಶಗಳಿಂದ ಕಾರ್ಯನಿರ್ವಹಿಸುತ್ತಿದ್ದ ವಿದೇಶಿ ಹ್ಯಾಂಡ್ಲರ್‌ಗಳ ಸಂಪರ್ಕದಲ್ಲಿದ್ದ ವೈದ್ಯರು ಮತ್ತು ವಿದ್ಯಾರ್ಥಿಗಳ ಜಾಲ ಪತ್ತೆಯಾಗಿತ್ತು.

ಆತನ ವಿಚಾರಣೆ ವೇಳೆ ಹರಿಯಾಣದ ಫರಿದಾಬಾದ್‌ನಲ್ಲಿ ಕೆಲಸ ಮಾಡುತ್ತಿದ್ದ ಮತ್ತೊಬ್ಬ ವೈದ್ಯ ಡಾ. ಮುಜಮ್ಮಿಲ್ ಶಕೀಲ್‌ನ ಹೆಸರು ಬಹಿರಂಗವಾಗಿತ್ತು. ಶಕೀಲ್‌ನ ಮನೆ ಮೇಲೆ ದಾಳಿ ನಡೆಸಿದಾಗ ಜಮ್ಮು ಮತ್ತು ಕಾಶ್ಮೀರ ಹಾಗೂ ಹರಿಯಾಣ ಪೊಲೀಸರ ಜಂಟಿ ತಂಡವು ಸುಮಾರು 3,000 ಕೆ.ಜಿ. ಅಮೋನಿಯಂ ನೈಟ್ರೇಟ್ ಅನ್ನು ವಶಪಡಿಸಿಕೊಂಡಿತ್ತು.

ಈ ಜಾಲವು ಇತ್ತೀಚೆಗೆ ದೆಹಲಿಯ ಕೆಂಪು ಕೋಟೆ ಬಳಿ ನಡೆದ ಕಾರು ಬಾಂಬ್ ಸ್ಫೋಟದ ಹಿಂದೆ ಇದೆ ಎಂದು ತಿಳಿದುಬಂದಿದೆ.

ತನಿಖಾ ಸಂಸ್ಥೆಗಳ ಪ್ರಕಾರ, ಕಾಶ್ಮೀರದಲ್ಲಿ ಭಾರೀ ಪ್ರಮಾಣದ ರಾಸಾಯನಿಕಗಳು ವಶವಾದ ಕಾರಣ ಭಯೋತ್ಪಾದಕರು ಆತಂಕಗೊಂಡು, ದೆಹಲಿ ಸ್ಫೋಟಕ್ಕೆ ಬಳಸಿದ ಸುಧಾರಿತ ಸ್ಫೋಟಕ ಸಾಧನವನ್ನು ಅವಸರದಲ್ಲಿ ಮತ್ತು ಅಸಮರ್ಪಕವಾಗಿ ಜೋಡಿಸಿದ್ದರು ಎಂದು ಶಂಕೆ ವ್ಯಕ್ತಪಡಿಸಲಾಗಿದೆ.

ಸಿಮೆಂಟ್ ಇಟ್ಟಿಗೆಯಿಂದ ವಿದ್ಯಾರ್ಥಿ ಮೇಲೆ ಹಲ್ಲೆ ; ಮೂವರ ವಿರುದ್ಧ ಪ್ರಕರಣ ದಾಖಲು

ಮೈಸೂರು,ನ.15(ಪಿಎಂ)–ಬಿ.ಟೆಕ್ ವಿದ್ಯಾರ್ಥಿಯೊಬ್ಬನ ತಲೆಗೆ ಇಂಟರ್‌ಲಾಕ್ ಸಿಮೆಂಟ್ ಇಟ್ಟಿಗೆಯಿಂದ ಹಲ್ಲೆ ನಡೆಸಿರುವ ಆರೋಪದಡಿ ಮೂವರ ವಿರುದ್ಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಗಾಯಿತ್ರಿಪುರಂನ ಡಿ.ಧ್ರುವ (20) ಹಲ್ಲೆಗೊಳಗಾದ ವಿದ್ಯಾರ್ಥಿ. ಈತನ ಮೇಲೆ ಹಲ್ಲೆ ನಡೆಸಿರುವ ಆರೋಪದಡಿ ಜಿ.ದರ್ಶನ್, ಹಿತನ್, ರಾಯ್ ಹಾಗೂ ಇತರರ ವಿರುದ್ಧ ಧ್ರುವ ತಂದೆ ಎಂ.ಎಲ್.ದಿವಾಕರ್ ಮಂಜು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಅ.31ರಂದು ಬೋಗಾದಿಯಲ್ಲಿ ಫ್ರೆಶರ್ಸ್ ಇವೆಂಟ್‌ಗೆ ನನ್ನ ಪುತ್ರ ಧ್ರುವ ಸ್ನೇಹಿತರೊಂದಿಗೆ ತೆರಳಿದ್ದಾಗ ಈ ಮೂವರು ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದರು. ನ.11 ರಂದು ರಾತ್ರಿ 8ರ ಸುಮಾರಿಗೆ ಕೆಡಿ ರಸ್ತೆಯಲ್ಲಿ ಸ್ನೇಹಿತರೊಂದಿಗೆ ನನ್ನ ಪುತ್ರ ಕಾಫಿ ಕುಡಿದು ಬರುತ್ತಿದ್ದಾಗ, ಆ ಮೂವರು ಸೇರಿದಂತೆ ನಾಲ್ಕಾರು ಮಂದಿ ಎದುರಾಗಿದ್ದಾರೆ. ಈ ವೇಳೆ ಆ ಮೂವರ ಜೊತೆಗೆ ಇತರರಿದ್ದ ಗುಂಪು ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಲ್ಲದೆ, ಧ್ರುವನ ಮೇಲೆ ಹಲ್ಲೆ ನಡೆಸಿದೆ. ಅಷ್ಟಕ್ಕೆ ಸುಮ್ಮನಾಗದೇ ಆ ಗುಂಪಿನಲ್ಲಿದ್ದ ಒಬ್ಬನು ಏಕಾಏಕಿ ಅಲ್ಲೆ ಬಿದ್ದಿದ್ದ ಸಿಮೆಂಟ್ ಬ್ರಿಕ್ಸ್‌ನಿಂದ ನನ್ನ ಪುತ್ರ ಧ್ರುವನ ತಲೆಗೆ ಹೊಡೆದಿದ್ದಾನೆ. ಈ ಎಲ್ಲಾ ಸಂಗತಿಯನ್ನು ನನ್ನ ಪುತ್ರ ಧ್ರುವ ನನ್ನೊಂದಿಗೆ ಹಂಚಿಕೊಂಡಿದ್ದಾನೆ ಎಂದು ದಿವಾಕರ್ ಮಂಜು ತಾವು ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸ್ಕೂಟರ್‌ಗೆ ಟಿಪ್ಪರ್ ಡಿಕ್ಕಿ ; ಬಾಲಕ ಸಾವು

ಮಾನಸ ಗಂಗೋತ್ರಿಯ ಬೋಗಾದಿ ರಸ್ತೆಯಲ್ಲಿ ಘಟನೆ


ಮೈಸೂರು,ನ.15(ಪಿಎಂ)– ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ತಾಯಿಯೊಂದಿಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಬಾಲಕನೊಬ್ಬ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ ಘಟನೆ ಶನಿವಾರ ನಡೆದಿದೆ.

ಮೈಸೂರಿನ ಶಾರದಾದೇವಿನಗರದ ನಂಜುಂಡನಾಯಕ ಹಾಗೂ ಸುಜಾತ ದಂಪತಿ ಪುತ್ರ ದಕ್ಷ ಸಮರ್ಥ ನಾಯಕ್ (14) ಮೃತಪಟ್ಟ ಬಾಲಕ. ಮಾನಸ ಗಂಗೋತ್ರಿಯ ಮೈಸೂರು ವಿವಿ ಮುಖ್ಯದ್ವಾರದ ಎದುರು ಬೋಗಾದಿ ರಸ್ತೆಯಲ್ಲಿ ಶನಿವಾರ ಬೆಳಗ್ಗೆ ನಡೆದ ಅಪಘಾತದಲ್ಲಿ ಈತ ಗಂಭೀರವಾಗಿ ಗಾಯಗೊಂಡಿದ್ದ.

ಶಾಲೆಯೊಂದರಲ್ಲಿ ಶಿಕ್ಷಕಿಯಾಗಿರುವ ಸುಜಾತ ತಮ್ಮ ಸ್ಕೂಟರ್‌ನಲ್ಲಿ (ಕೆಎ–02, ಹೆಚ್‌ಕ್ಯೂ–6900) ಪುತ್ರ ದಕ್ಷ ಸಮರ್ಥ ನಾಯಕ್‌ನನ್ನು ಹಿಂಬದಿಯಲ್ಲಿ ಕೂರಿಸಿಕೊಂಡು ಸಾಗುತ್ತಿದ್ದರು. ಮಾನಸ ಗಂಗೋತ್ರಿಯ ಕ್ಯಾಂಪಸ್ ಮೂಲಕ ಮೈಸೂರು ವಿವಿ ಮುಖ್ಯದ್ವಾರದಿಂದ ಹೊರಬಂದ ಸುಜಾತ, ಬೋಗಾದಿಯತ್ತ ಸಾಗಲು ತಿರುವು ಪಡೆದಿದ್ದಾರೆ. ಇದೇ ವೇಳೆ ವಿಶ್ವಮಾನವ ಜೋಡಿ ರಸ್ತೆ ಕಡೆಯಿಂದ ಬೋಗಾದಿ ರಸ್ತೆಯಲ್ಲಿ ವೇಗವಾಗಿ ಬಂದ ಟಿಪ್ಪರ್ (ಕೆಎ–09, ಸಿ–0109) ಸುಜಾತ ಅವರ ಸ್ಕೂಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ.

ಡಿಕ್ಕಿ ಹೊಡೆದ ರಭಸಕ್ಕೆ ಸುಜಾತಾ ಸ್ಕೂಟರ್‌ನಿಂದ ಕೆಳಗೆ ಬಿದ್ದು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದು, ದುರದೃಷ್ಟವಶಾತ್ ದಕ್ಷ ಸಮರ್ಥ ನಾಯಕ್‌ನ ಎರಡು ಕಾಲುಗಳ ಮೇಲೆ ಟಿಪ್ಪರ್ ಚಕ್ರಗಳು ಹರಿದಿವೆ. ಪರಿಣಾಮ ಹೆಚ್ಚಿನ ರಕ್ತಸ್ರಾವವಾಗಿದ್ದು, ತಲೆಗೂ ಪೆಟ್ಟು ಬಿದ್ದಿದೆ. ಗಂಭೀರವಾಗಿ ಗಾಯಗೊಂಡಿದ್ದ ಬಾಲಕನನ್ನು ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಸಂಜೆ ವೇಳೆಗೆ ಚಿಕಿತ್ಸೆ ಫಲಕಾರಿಯಾಗದೇ ಆತ ಸಾವನ್ನಪ್ಪಿದ್ದಾನೆ ಎಂದು ಕೆಆರ್ ಸಂಚಾರ ಠಾಣೆ ಪೊಲೀಸರು ತಿಳಿಸಿದರು. ಈ ಸಂಬಂಧ ಕೆಆರ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾ.ಮಹೇಶ್ ಶೆಣೈ ಅವರ ತಾಯಿ ಕೆ.ಜಯಂತಿ ಬಾಯಿ ನಿಧನ



ಮೈಸೂರು, ನ. 15–ಮಂಗಳೂರು ಗಣೇಶ ಬೀಡಿ ವರ್ಕ್ಸ್‌ನ ಮಾಜಿ ಪಾಲುದಾರರು, ಕಾಮಾಕ್ಷಿ ಆಸ್ಪತ್ರೆಗಳ ಟ್ರಸ್ಟಿಗಳಾದ ದಿವಂಗತ ಎಂ.ವಿನೋದ್ ರಾವ್ ಅವರ ಪತ್ನಿ ಕೆ.ಜಯಂತಿಬಾಯಿ ವಯೋಸಹಜ ಕಾಯಿಲೆಯಿಂದ ಶನಿವಾರ ಬೆಳಗ್ಗೆ ನಿಧನರಾದರು.

ಮೈಸೂರಿನ ವಿಶ್ವೇಶ್ವರನಗರದ ನಿವಾಸಿಯಾದ ಇವರು, ಐವರು ಪುತ್ರರು–ಡಾ.ಮಹೇಶ್ ಶೆಣೈ (ಮ್ಯಾನೇಜಿಂಗ್ ಟ್ರಸ್ಟಿ, ಕಾಮಾಕ್ಷಿ ಆಸ್ಪತ್ರೆಗಳು), ಮನೋಜ್ ಶೆಣೈ, ಮಮತಾ ಶೆಣೈ, ಮಾಯಾ ಶೆಣೈ ಮತ್ತು ಮಂಜುಳಾ ಶೆಣೈ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ವಿಶ್ವೇಶ್ವರನಗರ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿದೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಾಳೆ (ನ.16) ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹೇಂದ್ರ ಎಂ.ಜೆ.



ಮೈಸೂರಿನ ಗೋಕುಲಂನಲ್ಲಿರುವ ಬಾಪೂಜಿ ಆನಂದ ಆಶ್ರಮದ ನಿವಾಸಿ ಹಾಗೂ ನಿವೃತ್ತ ಮೈನ್ಸ್ ಇಂಜಿನಿಯರ್ ಎಂ.ಜೆ.ಮಹೇಂದ್ರ (92) ಶನಿವಾರ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಶ್ರೀಮತಿ ವೇದಾಂಭ



ಮೈಸೂರು, ನ.15– ಮೈಸೂರಿನ ಶ್ರೀರಾಂಪುರದ ಎಲ್‌ಐಸಿ ಕಾಲೊನಿಯ ನಿವಾಸಿ, ದಿವಂಗತ ಸುಂದ್ರಪ್ಪ ಅವರ ಪತ್ನಿ ಶ್ರೀಮತಿ ವೇದಾಂಭ (92) ಅವರು ಶನಿವಾರ ಸಂಜೆ ನಿಧನರಾದರು.

ಮೃತರು ಎಲ್‌ಐಸಿ ನಿವೃತ್ತ ಅಭಿವೃದ್ಧಿ ಅಧಿಕಾರಿ ಎಸ್.ನಾಗೇಶ್ ಮೂರ್ತಿ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 2 ಗಂಟೆಗೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಬಿರ್ಸಾಮುಂಡಾ ಜಯಂತಿ





ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಶನಿವಾರ ನಡೆದ ಬಿರ್ಸಾಮುಂಡ ಅವರ ಜನ್ಮದಿನದ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಉದ್ಘಾಟಿಸಿದರು. ಚಿತ್ರದಲ್ಲಿ ಎಡಿಸಿ ಡಾ.ಶಿವರಾಜು ಇನ್ನಿತರರಿದ್ದಾರೆ. ಆದಿವಾಸಿಗಳ ಮಕ್ಕಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮವನ್ನು ಬಲಚಿತ್ರದಲ್ಲಿ ಕಾಣಬಹುದು.

ಆದಿವಾಸಿಗಳ ಹಕ್ಕುಗಳಿಗಾಗಿ ಇವರ ಹೋರಾಟ ಸ್ಮರಣೆ

ಮೈಸೂರು,ಡಿ.15(ಎಂಟಿವೈ)–ಬುಡಕಟ್ಟು ಸಮುದಾಯದ ಮಹಾನ್ ನಾಯಕ ಬಿರ್ಸಾಮುಂಡ ಅವರು ಆದಿವಾಸಿಗಳ ಹಕ್ಕುಗಳಿಗಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದರು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಜಿ.ಪಂ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಭಗವಾನ್ ಶ್ರೀ ಬಿರ್ಸಾಮುಂಡಾ ಅವರ 150ನೇ ಜಯಂತಿ, ಪ್ರಧಾನಮಂತ್ರಿ ಜನ ಜಾತೀಯ ಆದಿವಾಸಿ ನ್ಯಾಯ ಮಹಾಗೌರವ ದಿವಸ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅತ್ಯಂತ ತಳಮಟ್ಟದ ಬುಡಕಟ್ಟು ಸಮುದಾಯದಿಂದ ಬಂದ ಬಿರ್ಸಾ ಮುಂಡಾ ಅವರು ಉತ್ತಮ ನಾಯಕರಾದರು. ಅವರ ಹೋರಾಟ, ಜೀವನ ಕ್ರಮವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಬಿರ್ಸಾ ಮುಂಡಾ ಅವರ ಹೋರಾಟ ಎಲ್ಲರಿಗೂ ಮಾದರಿಯಾಗಬೇಕು. ಯಾರು ಸಹ ಹುಟ್ಟಿದ ತಕ್ಷಣ ನಾಯಕರಾಗುವುದಿಲ್ಲ. ಆದರೆ ಚೆನ್ನಾಗಿ ಓದಿದರೆ ಉತ್ತಮ ನಾಯಕರಾಗಲು ಸಾಧ್ಯವಾಗುತ್ತದೆ ಎಂದು ಹೇಳಿದರು.

1898ರಲ್ಲೇ ಬ್ರಿಟಿಷ್ ವಿರುದ್ಧ ಹೋರಾಟ ಮಾಡಿದ್ದರು. ಬುಡಕಟ್ಟು ಜನಾಂಗದ ಹಕ್ಕುಗಳಿಗಾಗಿ ಆಗಿನ ಕಾಲದಲ್ಲೇ ಹೋರಾಟ ನಡೆಸಿದ್ದರು. ಇವರ ಕೊಡುಗೆ ಬುಡಕಟ್ಟು ಜನಾಂಗಕ್ಕೆ ಅಪಾರವಾದದ್ದು, ಆದ್ದರಿಂದ ಈಗಿನ ಪೀಳಿಗೆಯ ಮಕ್ಕಳು ಇವರ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಬೇಕು. ಅದಕ್ಕಾಗಿಯೇ ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಿರ್ಸಾ ಮುಂಡಾ ಅವರ ಜನ್ಮದಿನಾಚರಣೆ ಆಚರಿಸುತ್ತಿದ್ದಾರೆ. ಬುಡಕಟ್ಟು ಸಮುದಾಯಗಳಿಗೆ ಸರ್ಕಾರಗಳು ಅನೇಕ ಯೋಜನೆ ರೂಪಿಸುತ್ತಿದೆ. ಆ ಯೋಜನೆಗಳ ಸೌಲಭ್ಯವನ್ನು ಅರ್ಹರಿಗೆ ತಲುಪಿಸುವ ಕಾರ್ಯವಾಗಬೇಕು.

ಬುಡಕಟ್ಟು ಸಮುದಾಯ ಇಂದಿಗೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬುಡಕಟ್ಟು ಸಮುದಾಯಗಳ ಸಮಸ್ಯೆ ಬಗೆಹರಿಸಲು ಮತ್ತಷ್ಟು ಯೋಜನೆಗಳನ್ನು ತರಬೇಕು. ಅವರಿಗೆ ಇರುವಂತಹ ಯೋಜನೆಗಳ ಬಗ್ಗೆ ಅಧಿಕಾರಿಗಳು ಅರಿವು ಮೂಡಿಸಬೇಕು. ಎಲ್ಲಾ ಬುಡಕಟ್ಟು ಜನಾಂಗದವರು ಸರ್ಕಾರ ನೀಡುವ ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಈ ವೇಳೆ ಪದ್ಮಶ್ರೀ ಪುರಸ್ಕೃತರಾದ ಅಮಯ್ ಮಹಾಲಿಂಗ ನಾಯ್ಕ, ಸೋಮಣ್ಣ ಅವರಿಗೆ ಗೌರವ ಸಮರ್ಪಣೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿಧ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ದೆಹಲಿ ಬುಡಕಟ್ಟು ನಿವಾಸಿಗಳ ಸಚಿವಾಲಯದ ನಿರ್ದೇಶಕ ಶಿವಾನಂದ ಬಚಗುಂಡಿ, ಎಡಿಸಿ ಡಾ.ಪಿ.ಶಿವರಾಜು, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಟಿ.ಯೋಗೇಶ್, ಜಂಟಿ ನಿರ್ದೇಶಕ ಡಾ.ರಾಜಕುಮಾರ್, ಸುರೇಶ್‌ರೆಡ್ಡಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ರಾಜಶೇಖರಮೂರ್ತಿ, ಗಿರಿಜಾಂಬ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿ ಬಿ.ರಂಗೇಗೌಡ ಇದ್ದರು. ಬಳಿಕ ಬುಡಕಟ್ಟು ಸಮುದಾಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕನಕದಾಸ ಜಯಂತಿ, ಕನ್ನಡ ರಾಜ್ಯೋತ್ಸವ



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನಲ್ಲಿ ಕನಕದಾಸ ಜಯಂತಿ ಹಾಗೂ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ. ರಾಮಕೃಷ್ಣ, ರಾಜಕೀಯ ರವಿಕುಮಾರ್, ಹರೀಶ್ ಕುಮಾರ್, ಆರ್.ಸೋಮಣ್ಣ, ವಸಂತ, ಮುನೀಷ್, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಇನ್ನಿತರರಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ನ.15– ವಾಜಮಂಗಲ (IP) ಸ್ಥಳಾಂತರದ ನಿರ್ವಹಣಾ ಕಾಮಗಾರಿ ನಿಮಿತ್ತ ನ.16ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಪಿಲ್ಲಹಳ್ಳಿ, ದಂಡಿಕೆರೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಸಕೋಟೆ ರಸ್ತೆ, Tropical Villages ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.11.2025 ಭಾನುವಾರ, ಮಳೆ ನಕ್ಷತ್ರ: ವಿಶಾಖ, 6.11.2025 ರಿಂದ 19.11.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನ :** ವಾರ್ಷಿಕೋತ್ಸವ, ಬೆಳಗ್ಗೆ 6 ರಿಂದ ಗಂಗಾಪೂಜೆ, ಮಹಾಗಣಪತಿ ಪೂಜೆ, ಪುಣ್ಯಾಹ ಕಲಶ ಸ್ಥಾಪನೆ, ನವಗ್ರಹ ಮಹಾಮೃತ್ಯುಂಜಯ, ರುದ್ರ ತಿಶತಿ ಕಲಾಹೋಮ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಬನ್ನಿಮಂಟಪ ಬಡಾವಣೆ.

■ **ರೋಟರಿ ಜಯಪ್ರಕಾಶನಗರ ಚಾರಿಟಬಲ್ ಟ್ರಸ್ಟ್, ರೋಟರಿ ಕ್ಲಬ್ ಆಫ್ ಕೃಷ್ಣರಾಜ, ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ :** ಕಣ್ಣಿನ ಉಚಿತ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸೆ ಶಿಬಿರ, ಸ್ಥಳ: ಜೆ.ಪಿ. ನಗರ ಸ್ಪೋರ್ಟ್ಸ್ ಕ್ಲಬ್ ಆವರಣ, ಬೆಳಗ್ಗೆ 8 ರಿಂದ.

■ **ಗೋಜು–ರಿಂಯೊ ಕರಾಟೆ–ಡು ಅಕಾಡೆಮಿ :** ಜಿಕೆಎ ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿ, ಉದ್ಘಾಟನೆ : ಶಿಹಾನ್ ಎಸ್. ಪಾರ್ತಿಬಾನ್, ಮುಖ್ಯ ಅತಿಥಿಗಳು : ಪಿ. ಅಖಿಲ್, ಎನ್. ಶಂಕರ, ಸುನೀಲ್ ಕುಮಾರ್, ಎಸ್. ಭಾರತೀಆನಂದ್, ಕಶ್ಯಪ ಬ್ರಹ್ಮ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 9ಕ್ಕೆ.

■ **ಸಾತಗಳ್ಳಿ ಬಡಾವಣೆ ನಾಗರಿಕರ ಕ್ಷೇಮಾಭಿವೃದ್ಧಿ ಹಾಗೂ ಸಾಂಸ್ಕೃತಿಕ ಕಟ್ಟೆ, ಚಿಂತನ ಚಾವಡಿ :** ಕನ್ನಡ ಹಬ್ಬ ಆಚರಣೆ, ಬೆಳಗ್ಗೆ 9ಕ್ಕೆ ಧ್ವಜಾರೋಹಣ, ಸಂಸ್ಕೃತಿ ಚಿಂತಕ ಎಡೆಯೂರು ಸಮೀಉಲ್ಲಾ, ಬೆಳಗ್ಗೆ 11ಕ್ಕೆ ವಿವಿಧ ಮನೋರಂಜನಾ ಆಟೋಟ ಸ್ಪರ್ಧೆ, ಸ್ಥಳ: ಡಾ. ಎಪಿಜೆ ಉದ್ಯಾನವನ.

■ **ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಮಕ್ಕಳ ದಿನಾಚರಣೆ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ, ಮುಖ್ಯ ಅತಿಥಿಗಳು : ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್, ಹೆಚ್.ವಿ. ರಾಜೀವ್, ಎಂ. ಲಕ್ಷ್ಮಣ್, ಕೆ. ದೀಪಕ್, ಡಿ.ಟಿ. ಪ್ರಕಾಶ್, ಹೆಚ್.ಕೆ. ರಾಮು, ಶಂಕರ್ ಅಶ್ವಥ್, ಬದರೀ ದಿವ್ಯಭೂಷಣ್, ಸ್ಥಳ: ಸುಮ ಸೋಪಾನ ಉದ್ಯಾನವನ, ಕುವೆಂಪುನಗರ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಅಸ್ತಮಾ, ಉಬ್ಬಸಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ, ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ರಂಗವಲ್ಲಿ, ಮೈಸೂರು :** ಮೈಸೂರು ರಂಗಭೂಮಿ ಬ್ಯಾಡ್ಮಿಂಟನ್ ಲೀಗ್ ಪಂದ್ಯಾವಳಿ ಸಮಾರೋಪ ಸಮಾರಂಭ, ಸ್ಥಳ: ಮಾನಸಗಂಗೋತ್ರಿ ಒಳಾಂಗಣ ಕ್ರೀಡಾಂಗಣ, ಬೆಳಗ್ಗೆ 10ರಿಂದ.

■ **ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ, ಮೈಸೂರು ಹಾಗೂ ಶ್ರೀ ಭಗವಾನ್ ಮಹಾವೀರ ದರ್ಶನ್ ಕಣ್ಣಿನ ಆಸ್ಪತ್ರೆ:** ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ, ಧನ್ವಂತರಿ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ :** ವಾರ್ಷಿಕೋತ್ಸವ, ಕೃತಿಗಳ ಲೋಕಾರ್ಪಣೆ, ಗೀತಗಾಯನ, ಸಾಧಕರಿಗೆ ಪ್ರಶಸ್ತಿ ಪ್ರದಾನ, ಕವಿಗೋಷ್ಠಿ, ಉದ್ಘಾಟನೆ : ಮಹಾಕವಯಿತ್ರಿ ಡಾ. ಲತಾ ರಾಜಶೇಖರ್, ಸಿದ್ಧಲಿಂಗಪ್ಪ ಬೀಳಗಿ, ಕವಯಿತ್ರಿ ಶ್ರೀಮತಿ ಬಿ. ಶೋಭಾ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಡಾ.ವೈ.ಡಿ. ರಾಜಣ್ಣ, ಪ್ರತಿಷ್ಠಾನ ಸಂಸ್ಥಾಪಕ ಅಧ್ಯಕ್ಷ ಎಂ.ಬಿ. ಸಂತೋಷ್, ಡಾ. ಸಿ. ವಾಣಿ ರಾಘವೇಂದ್ರ, ಡಾ. ಸೌಗಂಧಿಕಾ ವಿ. ಜೋಯಿಸ್, ಕೆ. ಪರಮೇಶ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 10 ರಿಂದ.

■ **ಡಾ.ಪಿ. ಬೋರೇಗೌಡ ಮತ್ತು ಪ್ರಭಾ ಪ್ರತಿಷ್ಠಾನ, ಜೆಎಸ್‌ಎಸ್ ರಕ್ತನಿಧಿ ಕೇಂದ್ರ, ಕೆ.ಆರ್. ಆಸ್ಪತ್ರೆ ರಕ್ತನಿಧಿ ಕೇಂದ್ರ :** ಬೃಹತ್ ರಕ್ತದಾನ ಶಿಬಿರ, ಅತಿಥಿಗಳು : ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಐಡಿಬಿಐ ಬ್ಯಾಂಕ್ ಮ್ಯಾನೇಜರ್ ದುರ್ಗೇಶ್ ಎಂ.ಹಟ್ಟಿ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪಿ. ವಿಶ್ವನಾಥ್, ಜಿಲ್ಲಾ ವೈದ್ಯಾಧಿಕಾರಿ ಡಾ.ಸಿ.ಪಿ. ಕುಮಾರಸ್ವಾಮಿ, ಪತ್ರಕರ್ತ ಕೆ.ನರಸಿಂಹಮೂರ್ತಿ, ಸ್ಥಳ: ವಿದ್ಯಾವರ್ಧಕ ಕಾಲೇಜು, ಬೆಳಗ್ಗೆ 10.30 ರಿಂದ.

■ **ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ :** ರಾಜಮಾತೆ ಲಕ್ಷಮ್ಮಣ್ಣಿ ಪ್ರಶಸ್ತಿ ಪ್ರದಾನ ಮತ್ತು ವಾರ್ಷಿಕೋತ್ಸವ, ಉದ್ಘಾಟನೆ : ಬಾಹ್ಯಾಕಾಶ ಇಲಾಖೆ ನಿರ್ದೇಶಕ ಕೆ.ಆರ್. ಆದರ್ಶ್ ಅರಸ್, ಮಹಾರಾಣಿ ಲಕ್ಷಮ್ಮಣ್ಣಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಸೂಪರಿಂಟೆಂಡೆಂಟ್ ಆಫ್ ಇಂಜಿನಿಯರ್ ಶ್ರೀಮತಿ ಕೆ.ಜೆ. ಸಿಂಧು ಅರಸ್, ಪುಸ್ತಕ ತಾಂಬೂಲ ವಿತರಣೆ : ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಅಧ್ಯಕ್ಷತೆ : ಶಿಕ್ಷಣ ತಜ್ಞರಾದ ಶ್ರೀಮತಿ ಭ್ರಮರ ಬಹದ್ದೂರ್, ಉಪಸ್ಥಿತರು: ಡಾ. ಎಂ.ಜಿ.ಆರ್. ಅರಸ್, ಪರಿಸರ ಅಭಿಯಂತರರಾದ ಶ್ರೀಮತಿ ಪ್ರಿಯಾಂಕ ಅರಸ್, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಕಲಾಸುರುಚಿ, ದೇವಗೀತಂ ಚಾರಿಟಬಲ್ ಟ್ರಸ್ಟ್ :** ಸಾಂಗ್ ಆಫ್ ದಿ ಕ್ಲೇ ಪಾಟ್ ಪುಸ್ತಕದ ಲೇಖಕಿ ಹಾಗೂ ಘಟಂ ವಾದಕಿ ಸುಮನ ಚಂದ್ರಶೇಖರ್ ಅವರೊಂದಿಗೆ ಮಾತುಕತೆ, ಸಂವಾದಕಿ : ನಿವೃತ್ತ ಪ್ರಾಧ್ಯಾಪಕರಾದ ಡಾ. ಮೀರಾಮೂರ್ತಿ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 11ಕ್ಕೆ.

■ **ಜೇ ಬೇರಿಂಗ್ ಕಾರ್ಮಿಕರ ಸಂಘ :** ಸರ್ವ ಸದಸ್ಯರ ವಾರ್ಷಿಕ ಸಭೆ, ಸ್ಥಳ: ಜಿಲ್ಲಾಧಿಕಾರಿ ಹಳೇ ಕಚೇರಿಯ ಪೆವಿಲಿಯನ್ ಮೈದಾನ, ಬೆಳಗ್ಗೆ 11ಕ್ಕೆ.

■ **ಶ್ರೀ ಚಾಮುಂಡೇಶ್ವರಿ ರೈಲ್ವೆ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ :** ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ, ಮುಖ್ಯ ಅತಿಥಿಗಳು : ಇನ್ಸ್‌ಪೆಕ್ಟರ್ ಅರುಣ್, ಜಾದೂಗಾರ್ತಿ ಶ್ರೀಮತಿ ಸುಮಾ ರಾಜ್‌ಕುಮಾರ್, ಪಿಡಿಓ ಶ್ರೀಮತಿ ಭವ್ಯ ಟಿ.ಎ., ಬಿ. ಸುರೇಶ್, ಆನಂದ್ ಜಾದವ್, ಸಂಘದ ಗೌರವ ಅಧ್ಯಕ್ಷ ಶಂಕರ್, ಉಪಾಧ್ಯಕ್ಷ ಸಿಂಗೇಗೌಡ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಕೆ. ಶ್ರೀಧರ್, ಸ್ಥಳ: ಸಂಘದ ಆವರಣ, ಶ್ಯಾದನಹಳ್ಳಿ ಮುಖ್ಯ ರಸ್ತೆ, ಚಾಮುಂಡೇಶ್ವರಿ ರೈಲ್ವೆ ಬಡಾವಣೆ, ಸಂಜೆ 4ಕ್ಕೆ.

■ **ದಿನೇಶ್ ಕೋಚಿಂಗ್ ಸೆಂಟರ್ :** ಪ್ರತಿಭಾ ಪುರಸ್ಕಾರ ಸಮಾರಂಭ, ಮುಖ್ಯ ಅತಿಥಿಗಳು : ಶ್ರೀ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀಮತ್ ಸ್ವಾಮಿ ನಿರ್ಭಯಾನಂದ ಸರಸ್ವತೀ, ನಿವೃತ್ತ ಪ್ರೌಢಶಾಲಾ ಪ್ರಾಧ್ಯಾಪಕ ಎಂ.ಎಸ್. ಜನಾರ್ಧನ, ಸ್ಥಳ: ಕಲಾಮಂದಿರ, ಸಂಜೆ 4.15ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ವ್ಯಾಸತೀರ್ಥಾಚಾರ್ಯ ಅವರಿಂದ 'ಶ್ರೀಮತ್ ಭಾಗವತ್' ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.

■ **ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗ :** ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ, ಅಧ್ಯಕ್ಷತೆ : ನೇಗಿಲಯೋಗಿ ಬಳಗದ ಮುಖ್ಯ ಸಂಚಾಲಕರಾದ ಶ್ರೀಮತಿ ಜೆ. ಶೋಭ, ಉದ್ಘಾಟನೆ : ಸಾಹಿತಿ ಡಾ. ಕೆ. ಮಾಲತಿ, ಮುಖ್ಯ ಅತಿಥಿಗಳು : ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಬಿ. ಮಂಜೇಗೌಡ, ಸಾಹಿತಿ ಡಾ. ನೀ.ಗೂ. ರಮೇಶ್, ಸಾಹಿತಿ ಶ್ಯಾಮೇಶ್ ಅತ್ತಿಗುಪ್ಪೆ, ಡಾ. ಮೀನಾ ಕುಮಾರಿ, ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಸಂಜೆ 5ಕ್ಕೆ.

■ **ಕಲಾಸುರುಚಿ :** ವಿಶ್ವನಾಥ ಮಿರ್ಲೆ ನೆನಪಿನ ಮಕ್ಕಳ ಇಂಗ್ಲಿಷ್ ನಾಟಕೋತ್ಸವ, ಸಂಜೆ 6 ರಿಂದ ಎಕ್ಸೆಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳಿಂದ ಕಬುಲಿವಾಲ ಮತ್ತು ಸಂಜೆ 7 ರಿಂದ ಹರಿ ವಿದ್ಯಾಲಯ ವಿದ್ಯಾರ್ಥಿಗಳಿಂದ ವಿಸ್‌ಡಮ್ ಪೇವ್ಸ್ ದಿ ವೇ ನಾಟಕ ಪ್ರದರ್ಶನ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ಡಿ. ರಮಾಬಾಯಿ ಗೋವಿಂದರಾವ್ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಕೃತಿಕ್ ಕೌಶಿಕ್–ಪಿಟೀಲು, ವಿದ್ವಾನ್ ಆರ್. ಅದಮ್ಯ–ಮೃದಂಗ, ವಿದ್ವಾನ್ ಭಾರ್ಗವ ಹಾಲಂಬಿ–ಖಂಜಿರ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ಭಾರತೀಯ ರಂಗ ಶಿಕ್ಷಣ ಕೇಂದ್ರದ ಕಲಾವಿದರಿಂದ ವಾಟ್ ಇಫ್! ನಾಟಕ ಪ್ರದರ್ಶನ, ನಿರ್ದೇಶನ : ವಿ. ಶೃತಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಪಿ.ಸುರಭಿ, ವ್ಯಾಖ್ಯಾನ–ಡಾ.ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ–ಉಮೇಶ್.ಎಸ್.ಎಸ್, 8.30 ಸಹಕಾರ ಸಪ್ತಾಹ 2025 ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಕರ್ನಾಟಕ ರಾಜ್ಯ ಸಹಕಾರ ಒಕ್ಕೂಟ ಬೆಂಗಳೂರು. ಒಕ್ಕೂಟದ ಅಧ್ಯಕ್ಷ ಜಿ.ಟಿ.ದೇವೇಗೌಡ ಅವರೊಂದಿಗೆ ಸಂದರ್ಶನ, 9.40 ನಮ್ಮ ಆರೋಗ್ಯ, ವಿಶ್ವ ಸಿ.ಒ.ಪಿ.ಡಿ ದಿನಾಚರಣೆಯ ಸಂಬಂಧವಾಗಿ ಸಿ.ಒ.ಪಿ.ಡಿ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಶ್ವಾಸಕೋಶ ತಜ್ಞರಾದ ಡಾ.ಮುರಳೀ. ಬಿ.ಮೋಹನ್‌ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ, 10.30 KRISH-TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಮಕ್ಕಳ ಮಂಟಪ, ಮೈಸೂರಿನ Podar International School ನ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಚಿಕ್ಕ ತಾಯಮ್ಮ ಮತ್ತು ಸಂಗಡಿಗರಿಂದ ನಾರಾಯಣಸ್ವಾಮಿ ಹಾಡು ಹಾಗೂ ಸೋಬಾನೆ ಪದ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ – ಗೀತಾ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ– ತಾಳಮದ್ದಲೆ, ಪ್ರಸಂಗ–ಭೀಷ್ಮಪರ್ವ, ಪ್ರಸ್ತುತಿ–ಶ್ರೀಕೇಶವಾನಂದ ಭಾರತಿ ಸ್ವಾಮೀಜಿ ಮತ್ತು ಸಂಗಡಿಗರು, ಎಡನೀರು ಮಠ, ಕಾಸರಗೋಡು, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ:ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಫಸ್ಟ್ ಫಿಲ್ಮ್ – ಪ್ರಸ್ತುತಿ–ಶ್ರೀಮಾನ್ ಎಸ್., 8.30 ಚಿತ್ರಗೀತೆಗಳು, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು– ಎಂ.ಎಸ್.ವೆಂಕಟರಾಮ್ ಕುಪ್ಪ, 9.30 ರಾಷ್ಟ್ರೀಯ ನಾಟಕ–ಸರಿಯುತ್ತಿರುವ ರಾತ್ರಿ, 10.00 ರವಿವಾರದ ಅಖಿಲ ಭಾರತದ ಸಂಗೀತ ಸಭಾ– ರವಿವಾರದ ಅಖಿಲ ಭಾರತದ ಸಂಗೀತ ಸಭಾ, ಅಶ್ವಿನ್. ಎಂ. ದಲ್ವಿ–ಸುರ್ಬಹಾರ್ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ನವೆಂಬರ್ 16 ಭಾನುವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 208 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ರಾಜ್ಯದಲ್ಲಿ ಅಧಿಕಾರ ಹಸ್ತಾಂತರ ಪ್ರಸ್ತಾಪ

ಸೋನಿಯಾಗಾಂಧಿ ಎಂಟ್ರಿ; ಪ್ರಮುಖರೊಂದಿಗೆ ಚರ್ಚೆ

ಬೆಂಗಳೂರು, ನ.15(ಕೆಎಂಶಿ)– ಕರ್ನಾಟಕದಲ್ಲಿ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಪ್ರಮುಖ ನಾಯಕರೊಂದಿಗೆ ಸಮಾಲೋಚನೆ ನಡೆಸಿದ್ದಾರೆ.

ಜನಪಥ 10, ನಿವಾಸದಲ್ಲಿ ಪುತ್ರ ರಾಹುಲ್ ಗಾಂಧಿ ಜೊತೆಗೂಡಿ, ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶ ಹಾಗೂ ಕರ್ನಾಟಕದಲ್ಲಿ ಅಧಿಕಾರ ಹಸ್ತಾಂತರ ಕುರಿತು ಚರ್ಚಿಸಿದ್ದು, ಮಾತುಕತೆ ವಿವರ ಬಹಿರಂಗಗೊಂಡಿಲ್ಲ. ಖಾಸಗಿ ಕಾರ್ಯಕ್ರಮ ನಿಮಿತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ತೆರಳುತ್ತಿದ್ದಂತೆ ಅವರನ್ನು ಸಂಪರ್ಕಿಸಿದ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಜನಪಥ್ 10, ನಿವಾಸಕ್ಕೆ ಆಗಮಿಸುವಂತೆ ಸೂಚಿಸಿದರು.

ಸಿಎಂ ಸಿದ್ದರಾಮಯ್ಯ ಅಲ್ಲದೆ, ದೆಹಲಿಯಲ್ಲೇ ಇದ್ದ ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಸಹ ಸೋನಿಯಾ ಗಾಂಧಿ ನಿವಾಸಕ್ಕೆ ಧಾವಿಸಿದರು. ವಿದೇಶ ಪ್ರವಾಸ ಮುಂದೂಡಿರುವ ರಾಹುಲ್, ರಾಜಕೀಯ ಕಾರ್ಯದರ್ಶಿ ವೇಣುಗೋಪಾಲ್, ರಣದೀಪ್ ಸುರ್ಜೇವಾಲ ಹಾಗೂ ಕರ್ನಾಟಕ ಮತ್ತು ತೆಲಂಗಾಣ ಮುಖ್ಯಮಂತ್ರಿ ಜೊತೆಗೂಡಿ ಸೋನಿಯಾ ಅವರೊಂದಿಗೆ ಮಾತುಕತೆ ನಡೆಸಿದರು.

ನಾಲ್ಕು ಗೋಡೆಗಳ ಮಧ್ಯೆ ಮಧ್ಯಾಹ್ನ 3ಕ್ಕೆ ನಡೆದ ಮಾತುಕತೆಯ ವಿವರ ಬಹಿರಂಗವಾಗಿಲ್ಲ. ಈ ಸಭೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಆಹ್ವಾನ ಇರಲಿಲ್ಲ. ಅವರು ದೆಹಲಿ ತಲುಪಿದ್ದೇ ಸಂಜೆ 4–15ಕ್ಕೆ. ನವೆಂಬರ್ 20ಕ್ಕೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಪೂರೈಸಲಿದ್ದು, ಉಳಿದ ಅವಧಿಗೆ ತಮಗೆ ಮುಖ್ಯಮಂತ್ರಿ ಸ್ಥಾನ ▶ 6ನೇ ಪುಟಕ್ಕೆ


ಸೋನಿಯಾಗಾಂಧಿ



ಸಿದ್ದರಾಮಯ್ಯ

> **ಸಿದ್ದರಾಮಯ್ಯ ಅವರು ಸೋಮವಾರ ಮತ್ತೆ ದೆಹಲಿಗೆ ತೆರಳುತ್ತಿದ್ದು, ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಮತ್ತು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲಿದ್ದಾರೆ. ಅದೇ ವೇಳೆ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಲಿರುವ ಸಿಎಂ, ಕಬ್ಬು ದರ ನಿಗದಿ ಮತ್ತು ಮೇಕೆದಾಟು ವಿಚಾರವಾಗಿ ಚರ್ಚೆ ನಡೆಸಲಿದ್ದಾರೆ.**

> **ಕಾಂಗ್ರೆಸ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ. ಅದೆಲ್ಲಾ ಮಾಧ್ಯಮಗಳ ಸೃಷ್ಟಿಯುಷ್ಟೆ. ರಾಹುಲ್ ಗಾಂಧಿ ಅವರ ಜೊತೆ ಸಂಪುಟ ಪುನರ್ ರಚನೆ ಬಗ್ಗೆ ಏನೂ ಮಾತನಾಡಿಲ್ಲ. ಬಿಹಾರ ಚುನಾವಣೆಯಲ್ಲಿ ಅವರಿಗೆ ಹಿನ್ನಡೆಯಾಗಿರುವುದರಿಂದ ಧೈರ್ಯ ತುಂಬಿದ್ದೇನೆ. ಸೋಮವಾರದಂದು ಪ್ರಧಾನಿ ಮೋದಿಯವರು ಸಮಯ ನೀಡಿರುವುದರಿಂದ ಅವರ ಭೇಟಿಗಾಗಿ ಅಂದು ಮತ್ತೇ ಬರುತ್ತೇನೆ. ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ಅಧ್ಯಕ್ಷರು. ಅವರನ್ನು ಯಾವಾಗ ಬೇಕಾದರೂ ಭೇಟಿ ಮಾಡಬಹುದು. ನಾನು ದೆಹಲಿಗೆ ಬಂದಾಗಲೆಲ್ಲಾ ಅವರನ್ನು ಭೇಟಿ ಮಾಡುತ್ತೇನೆ.**
> –ಮುಖ್ಯಮಂತ್ರಿ ಸಿದ್ದರಾಮಯ್ಯ

ಕೆ.ಸಿ.ವೇಣುಗೋಪಾಲ್‌ಗೆ ವಿವಾದ ಇತ್ಯರ್ಥ ಜವಾಬ್ದಾರಿ

ಬೆಂಗಳೂರು, ನ.15(ಕೆಎಂಶಿ)–ಕರ್ನಾಟಕದಲ್ಲಿನ ಅಧಿಕಾರ ಹಸ್ತಾಂತರ ವಿವಾದ ನಿಭಾಯಿಸುವ ಅಧಿಕಾರವನ್ನು ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಗೆ ಕಾಂಗ್ರೆಸ್ ವರಿಷ್ಠರು ವಹಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತ ಎರಡೂವರೆ ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ▶ 6ನೇ ಪುಟಕ್ಕೆ



ಹೈಕಮಾಂಡ್ ಕೇಳಿದರೆ ನನಗೇನು ಬೇಕೋ ಅದನ್ನು ಹೇಳುತ್ತೇನೆ

ನವದೆಹಲಿ,ನ.15–ಸಂಪುಟ ವಿಸ್ತರಣೆ, ನಾಯಕತ್ವ ಬದಲಾವಣೆ ಬಗ್ಗೆ ನನಗೆ ಏನೂ ತಿಳಿದಿಲ್ಲ. ಏನಾದರೂ ಮಾಹಿತಿ ಬೇಕೆಂದರೆ ಮುಖ್ಯಮಂತ್ರಿಗಳ ಬಳಿ ಮಾತನಾಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ದೆಹಲಿಯಲ್ಲಿ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಮುಖ್ಯಮಂತ್ರಿಯವರು ಹೈಕಮಾಂಡ್ ನಾಯಕರನ್ನು ಭೇಟಿಯಾಗಿದ್ದು, ಸಚಿವ ಸಂಪುಟ ಪುನರ್ ರಚನೆಗೆ ಹಸಿರು ನಿಶಾನೆ ಸಿಕ್ಕಿದೆ ಎನ್ನುವ ಮಾಹಿತಿ ಬಗ್ಗೆ ಕೇಳಿದಾಗ, ▶ 6ನೇ ಪುಟಕ್ಕೆ



ಕೊಡಗಿನ ಚೆಕ್‌ಪೋಸ್ಟ್‌ನಲ್ಲಿ ಕಾರಲ್ಲಿ ಸಿಕ್ಕ ಮೈಸೂರು ಮಹಿಳೆ ಶವ; ಆಕೆ ಪತಿ ಸೇರಿ ಮೂವರ ವಿಚಾರಣೆ

- ಕುಂಬಾರಕೊಪ್ಪಲಲ್ಲಿ ನೆಲೆಸಿದ್ದ ಮಹಿಳೆ ಕೌಟುಂಬಿಕ ಸಮಸ್ಯೆಯಿಂದ ನೇಣಿಗೆ ಶರಣು
- ಮಡಿಕೇರಿಯ ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಪೊಲೀಸರಲ್ಲಿ ಪತಿಯ ಹೇಳಿಕೆ ದಾಖಲು
- ಮರಣೋತ್ತರ ಪರೀಕ್ಷೆ ಬಳಿಕ ವಾಸ್ತವ ಸಂಗತಿ ಬಯಲಾಗುವ ಸಾಧ್ಯತೆ

ಸಿದ್ದಾಪುರ,ನ.15(ಮುಬಾರಕ್, ಆರ್‌ಕೆ)–ಕಾರಿನಲ್ಲಿ ಮಹಿಳೆಯ ಮೃತದೇಹ ಸಾಗಿಸುತ್ತಿದ್ದ ಮೂವರನ್ನು ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಲಿಂಗಾಪುರ ಅರಣ್ಯ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ವಶಪಡಿಸಿಕೊಂಡು, ವಿಚಾರಣೆ ನಡೆಸುತ್ತಿದ್ದಾರೆ.

ಮೂಲತಃ ಹರ್ಯಾಣದವಳಾಗಿದ್ದು, ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ವಾಸವಿದ್ದ ನಾನ್ಕಿದೇವಿ(45) ಎಂಬಾಕೆಯ ಮೃತದೇಹವನ್ನು ಸಾಗಿಸುತ್ತಿದ್ದ ಆಕೆಯ ಪತಿ ರಾಕೇಶ್‌ಕುಮಾರ್, ಆತನ ಸ್ನೇಹಿತರಾದ ವಿಕಾಸ್ ಮತ್ತು ಸತ್ವೀರ್ ಅವರನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆ.

ವಿವರ: ಮೈಸೂರು ಕಡೆಯಿಂದ ಮಡಿಕೇರಿ ಕಡೆಗೆ ಹೋಗುತ್ತಿದ್ದ ಹರ್ಯಾಣ ರಿಜಿಸ್ಟ್ರೇಷನ್ ನಂಬರ್ ಹೊಂದಿದ್ದ ಆಲ್ಟೋ–800 ಕಾರು (ಹೆಚ್‌ಆರ್ 26 ಇಸಿ 9273) ಶನಿವಾರ ಮುಂಜಾನೆ 2 ಗಂಟೆ ಸುಮಾರಿನಲ್ಲಿ ಲಿಂಗಾಪುರ ಅರಣ್ಯ ಚೆಕ್‌ಪೋಸ್ಟ್‌ಗೆ ಬಂದಾಗ, ಕಾರು ಹರ್ಯಾಣ ರಿಜಿಸ್ಟ್ರೇಷನ್ ನಂಬರ್ ಹೊಂದಿದ್ದರಿಂದ ಸಂಶಯಗೊಂಡ ಅರಣ್ಯ ಸಿಬ್ಬಂದಿ ಮೊದಲಿಗೆ ಕಾರಿನಲ್ಲಿದ್ದವರನ್ನು ವಿಚಾರಿಸಿದ್ದಾರೆ. ಆ ವ್ಯಕ್ತಿಗಳು ಹಿಂದಿಯಲ್ಲಿ ಮಾತನಾಡುತ್ತಿದ್ದರಿಂದ ಮತ್ತಷ್ಟು ಅನುಮಾನಗೊಂಡು ಕಾರಿನಲ್ಲಿದ್ದ ಮಹಿಳೆಯ ಬಗ್ಗೆ ಕೇಳಲಾಗಿ, ಆಕೆ ನಿದ್ದೆ ಮಾಡುತ್ತಿದ್ದಾಳೆ ಎಂದು ಮೂವರೂ ಹೇಳಿದ್ದಾರೆ. ಆ ವೇಳೆ ಅರಣ್ಯ ಸಿಬ್ಬಂದಿ ದೀಪಿಕಾ ಅವರು ಮಹಿಳೆಯನ್ನು ಮಾತನಾಡಿಸಿದ್ದಾರೆ. ಮಾತನಾಡದಿದ್ದಾಗ ಆಕೆಯನ್ನು ಮುಟ್ಟಿದಾಗ, ಅದಾಗಲೇ ಮಹಿಳೆ ಸಾವನ್ನಪ್ಪಿದ್ದಾಳೆ ಎಂಬುದು ಗೊತ್ತಾಗಿದೆ. ಸೂಕ್ಷ್ಮವಾಗಿ ಗಮನಿಸಿದಾಗ ಆಕೆಯ ಕತ್ತಿನಲ್ಲಿ ನೇಣು ಬಿಗಿದ ಗುರುತು ಇರುವುದು ಪತ್ತೆಯಾಗಿದೆ.

ತಕ್ಷಣವೇ ಅರಣ್ಯ ಸಿಬ್ಬಂದಿ ಮೂವರನ್ನೂ ತಮ್ಮ ವಶಕ್ಕೆ ಪಡೆದುಕೊಂಡು ಸಿದ್ದಾಪುರ ಠಾಣೆಗೆ ವಿಷಯ ಮುಟ್ಟಿಸಿದ್ದಾರೆ. ತಕ್ಷಣವೇ ಸಿದ್ದಾಪುರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ್ ಮತ್ತು ಮಡಿಕೇರಿ ಟೌನ್ ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಕೆ.ರಾಜು ಘಟನಾ ಸ್ಥಳಕ್ಕೆ ದೌಡಾಯಿಸಿದ್ದಾರೆ.

ಮೂವರನ್ನು ಪೊಲೀಸರು ವಿಚಾರಣೆಗೊಳಪಡಿಸಿದ ವೇಳೆ ಮೃತಪಟ್ಟಿರುವ ನಾನ್ಕಿದೇವಿ ರಾಕೇಶ್‌ಕುಮಾರ್‌ನ ಪತ್ನಿಯಾಗಿದ್ದು, ವಿವಾಹಿತಳಾಗಿದ್ದ ಆಕೆ ಕಳೆದ ಒಂದೂವರೆ ವರ್ಷದ ಹಿಂದೆ ರಾಕೇಶ್‌ಕುಮಾರ್ ಜೊತೆ ಬಂದಿದ್ದಾಳೆ. ಕಳೆದ ಒಂದು ವರ್ಷದಿಂದ ಇವರಿಬ್ಬರು ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದು, ರಾಕೇಶ್‌ಕುಮಾರ್ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದ ಎಂದು ವಿಚಾರಣೆ ವೇಳೆ ಅವರು ತಿಳಿಸಿದ್ದಾರೆ. ▶ 6ನೇ ಪುಟಕ್ಕೆ


ಮೃತದೇಹ ಸಾಗಿಸುತ್ತಿದ್ದ ಕಾರನ್ನು ಸಿದ್ದಾಪುರ ಠಾಣೆ ಪೊಲೀಸರು ವಶಪಡಿಸಿಕೊಂಡಿರುವುದು.


ನಾನ್ಕಿದೇವಿ


ಕಾರಿನಲ್ಲಿ ಮೃತದೇಹ ಸಾಗಿಸುತ್ತಿದ್ದವರು.

ಡಿಸೆಂಬರ್ 1ರಿಂದ ಮೈಸೂರಿನ ವಿಜಯನಗರ, ಸರಸ್ವತಿಪುರಂನ ಆಧಾರ್ ಕೇಂದ್ರ ಬಂದ್!

ಮೈಸೂರು, ನ.15(ಎಂಟಿವೈ)–ಕಳೆದ ಆರು ವರ್ಷಗಳಿಂದ ಮೈಸೂರಿನ ವಿಜಯನಗರ ಹಾಗೂ ಸರಸ್ವತಿಪುರಂನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಧಾರ್ ಸೇವಾ ಕೇಂದ್ರಗಳ ಗುತ್ತಿಗೆ ಅವಧಿ ಮುಗಿದ ಹಿನ್ನೆಲೆಯಲ್ಲಿ ಡಿ.1ರಿಂದ ಇವು ಸ್ಥಗಿತಗೊಳ್ಳಲಿದ್ದು, ಹೊಸದಾಗಿ ಟೆಂಡರ್ ಪಡೆದ ಸಂಸ್ಥೆ ಡಿಸೆಂಬರ್ ಎರಡನೇ ವಾರ ಅಥವಾ ಜನವರಿ ತಿಂಗಳಿಂದ ಆಧಾರ್ ಸೇವೆ ಒದಗಿಸಲಿದೆ.

ಆಧಾರ್ ಕಾರ್ಡ್ ಸರ್ಕಾರದ ಸೌಲಭ್ಯ ಪಡೆಯುವುದರೊಂದಿಗೆ ಎಲ್ಲಾ ದಾಖಲೆಗಳಿಗೂ ಕಡ್ಡಾಯಗೊಳಿಸಿದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಜನರಿಗೆ ಹೊಸದಾಗಿ ಆಧಾರ್ ಕಾರ್ಡ್ ಮಾಡಿಕೊಡಲು, ಇಲ್ಲವೇ ತಿದ್ದುಪಡಿ ಮಾಡಲು ತಲಾ 8 ಕಿಟ್(ಯುನಿಟ್)ವುಳ್ಳ ಆಧಾರ್ ಸೇವಾ ಕೇಂದ್ರವನ್ನು ಸ್ಥಾಪಿಸಲಾಗಿತ್ತು. ಮೊದಲು ಮೈಸೂರಿನ ವಿಜಯ ನಗರದ ಕಾಳಿದಾಸ ರಸ್ತೆಯಲ್ಲಿ, ಬಳಿಕ ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ರಸ್ತೆಯಲ್ಲಿ ಆಧಾರ್ ಸೇವಾ ಕೇಂದ್ರ ಸ್ಥಾಪಿಸಲಾಗಿತ್ತು. ಯುನಿಕ್ ಐಡೆಂಟಿಫಿಕೇಷನ್ ಅಥಾರಿಟಿ ಆಫ್ ಇಂಡಿಯಾ (ಯುಐಡಿಎಐ) ನಿಯಮಾನುಸಾರ ಕಾರ್ಯನಿರ್ವಹಿಸುತ್ತಿದ್ದ ಆಧಾರ್ ಸೇವಾ ಕೇಂದ್ರಗಳು ಗ್ರಾಮೀಣ ಪ್ರದೇಶದ ಜನರೂ ಸೇರಿದಂತೆ ಮೈಸೂರಿನ ಜನರಿಗೆ ನಿಗದಿತ ಸಮಯದಲ್ಲಿ ಆಧಾರ್ ಕಾರ್ಡ್ ಒದಗಿಸುತ್ತಿದ್ದವು. ▶ 6ನೇ ಪುಟಕ್ಕೆ

ಪರಿಸರದಲ್ಲಿ ತಿಮ್ಮಕ್ಕ ಲೀನ



ಬೆಂಗಳೂರು,ನ.15–ಶುಕ್ರವಾರ ನಿಧನರಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲು ಮರದ ತಿಮ್ಮಕ್ಕ ಅವರು ಶನಿವಾರ ಬೆಂಗಳೂರಿನ ಜ್ಞಾನಭಾರತಿ ಕಲಾಗ್ರಾಮದ ಮಣ್ಣಲ್ಲಿ ಮಣ್ಣಾಗಿದ್ದು, ವೃಕ್ಷಮಾತೆ ಇನ್ನೂ ನೆನಪು ಮಾತ್ರ. ಶನಿವಾರ ಮಧ್ಯಾಹ್ನ ಜ್ಞಾನಭಾರತಿ ಕಲಾಗ್ರಾಮದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಶತಾಯುಷಿ, 114 ವರ್ಷದ ಸಾಲು ಮರದ ತಿಮ್ಮಕ್ಕ ▶ 6ನೇ ಪುಟಕ್ಕೆ

ಸಾಲುಮರದ ತಿಮ್ಮಕ್ಕ ಹೆಸರಲ್ಲಿ ಪ್ರಶಸ್ತಿ; 114 ಸ್ಥಳದಲ್ಲಿ 114 ಸಸಿ ನೆಡುವ ನಿರ್ಧಾರ

ಬೆಂಗಳೂರು: ಶುಕ್ರವಾರ ನಿಧನರಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲು ಮರದ ತಿಮ್ಮಕ್ಕ ಅವರ ಗೌರವಾರ್ಥ ರಾಜ್ಯದ 114 ಸ್ಥಳದಲ್ಲಿ ತಲಾ 114 ಸಸಿ ನೆಟ್ಟು ಪೋಷಣೆ ಮಾಡಲಾಗುವುದು. ಅಲ್ಲದೆ, ಸಾಲುಮರದ ತಿಮ್ಮಕ್ಕ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ಜ್ಞಾನಭಾರತಿ ಕಲಾಗ್ರಾಮದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಶತಾಯುಷಿ ಸಾಲು ಮರದ ತಿಮ್ಮಕ್ಕ ಅವರ ಅಂತ್ಯಕ್ರಿಯೆ ನೆರವೇರಿತು. ಈ ವೇಳೆ ಮಹಾನ್ ಪರಿಸರ ಪ್ರೇಮಿಗೆ ಅಂತಿಮ ನಮನ ಸಲ್ಲಿಸಿದ ನಂತರ ಮಾತನಾಡಿದ ಈಶ್ವರ ಖಂಡ್ರೆ ಅವರು, ಮರಗಳನ್ನೇ ಮಕ್ಕಳಂತೆ ಮಮಕಾರದಿಂದ ಬೆಳೆಸಿ ವಿಶ್ವಕ್ಕೇ ವೃಕ್ಷಗಳ ಮಹತ್ವ ಸಾರಿದ ಸಾಲುಮರದ ತಿಮ್ಮಕ್ಕ ಅವರ ಹೆಸರಲ್ಲಿ ಸಸಿನೆಡುವ ಮೂಲಕ ಅರಣ್ಯ ಇಲಾಖೆ ಗೌರವ ಸಲ್ಲಿಸಲಿದೆ. ಅರಣ್ಯ ಇಲಾಖೆ ತಿಮ್ಮಕ್ಕ ಅವರನ್ನು ಪರಿಸರ ರಾಯಭಾರಿಯಾಗಿ ಪುರಸ್ಕರಿಸಿತ್ತು. ಅಜ್ಜಿಯ ಪ್ರೇರಣೆಯಿಂದ ನೂರಾರು ಜನ ತಮ್ಮ ಕೈಲಾದಷ್ಟು ಸಸಿ ನೆಟ್ಟು ಪೋಷಿಸುತ್ತಿದ್ದಾರೆ. ತಿಮ್ಮಕ್ಕ ಅವರ ನಿಧನದಿಂದ ರಾಜ್ಯ ನಿಷ್ಠಾವಂತ ಪರಿಸರ ಕಾಳಜಿಯ ಮಹಾಜೀವಿಯನ್ನು ಕಳೆದುಕೊಂಡಿದೆ ಎಂದು ಸಚಿವರು ದುಃಖ ವ್ಯಕ್ತಪಡಿಸಿದರು.


ಈಶ್ವರ ಖಂಡ್ರೆ

ನಂದಿನಿ ಬ್ರಾಂಡ್‌ನಡಿ ನಕಲಿ ತುಪ್ಪ ಮಾರಾಟ ಜಾಲ ಪತ್ತೆ



8,136 ಲೀಟರ್ ನಕಲಿ ತುಪ್ಪ ವಶ; ಐವರ ಬಂಧನ

ಬೆಂಗಳೂರು,ನ.15– ನಂದಿನಿ ಬ್ರಾಂಡ್ ಹೆಸರಿನಲ್ಲಿ ನಕಲಿ ತುಪ್ಪ ತಯಾರಿಸಿ ರಾಜ್ಯದಾದ್ಯಂತ ಮಾರಾಟ ಮಾಡುತ್ತಿದ್ದ ದೊಡ್ಡ ಜಾಲವನ್ನು ಸಿಸಿಬಿ ಮತ್ತು ಕೆಎಂಎಫ್ ಜಾಗೃತ ದಳ ಬಯಲಿಗೆಳೆದಿವೆ. ಅಸಲಿ ನಂದಿನಿ ತುಪ್ಪವನ್ನು ಹೊರರಾಜ್ಯಕ್ಕೆ ಕಳುಹಿಸಿ, ಅಲ್ಲಿ ಕಲಬೆರಕೆ ಮಾಡಿ ಮತ್ತೆ ಕರ್ನಾಟಕಕ್ಕೆ ತಂದು ಮಾರಾಟ ಮಾಡುತ್ತಿದ್ದ ಗ್ಯಾಂಗ್ ಇದೀಗ ಸಿಕ್ಕಿಬಿದ್ದಿದ್ದು, ನಾಲ್ವರನ್ನು ಬಂಧಿಸಲಾಗಿದೆ.

ಬಂಧಿತ ನಾಲ್ವರು ಆರೋಪಿಗಳನ್ನು ದೀಪಕ್, ಮುನಿರಾಜು, ಅಭಿ ಅರಸು, ಮಹೇಂದ್ರ ಎಂದು ಗುರುತಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಹೇಳಿದ್ದಾರೆ. ನ.14ರಂದು ಚಾಮರಾಜಪೇಟೆಯ ನಂಜಾಂಬ ಅಗ್ರಹಾರದಲ್ಲಿರುವ ಕೃಷ್ಣ ಎಂಟರ್‌ಪ್ರೈಸಸ್ ಗೋಡೌನ್ ಸೇರಿದಂತೆ ಹಲವು ಸ್ಥಳಗಳಲ್ಲಿ ಸಿಸಿಬಿ ದಾಳಿ ನಡೆಸಿ, ಅಲ್ಲಿದ್ದ ▶ 6ನೇ ಪುಟಕ್ಕೆ

> **ಎರಡು ವರ್ಷದ ಹಿಂದೆ ಮೈಸೂರಿನ ಹೊರ ವಲಯದಲ್ಲಿ ನಂದಿನಿ ತುಪ್ಪವನ್ನೇ ಬಳಸಿಕೊಂಡು ನಕಲಿ ತುಪ್ಪ ತಯಾರಿಸುತ್ತಿದ್ದ ಜಾಲವನ್ನು ಬಯಲಿಗೆಳೆಯಲಾಗಿತ್ತು. ಆದರೆ, ಅದರಲ್ಲಿ ಭಾಗಿಯಾದವರ ಬಗ್ಗೆಯಾಗಲೀ, ಅವರಿಂದ ಖರೀದಿಸಿದವರ ವಿಚಾರವನ್ನಾಗಲೀ ಕೆಎಂಎಫ್ ಆಗಲೀ, ಪೊಲೀಸರಾಗಲೀ ಇದುವರೆಗೆ ಬಹಿರಂಗಪಡಿಸಿಲ್ಲ. ಒಟ್ಟಾರೆ ಪ್ರಕರಣ ಜನರ ಮನಸ್ಸಿನಿಂದ ದೂರವಾಗಿದೆ ಎಂದು ಕೆಎಂಎಫ್ ಭಾವಿಸಿದಂತಿದೆ.**

ಶಾಲಾ ಮಕ್ಕಳ ಸಾಗಿಸಲು ವೈಟ್ ನಂಬರ್ ಪ್ಲೇಟ್ ವಾಹನಗಳ ಬಳಸಿದರೆ ಕ್ರಮ

ಮೈಸೂರು, ನ.15(ಆರ್‌ಕೆ)–ಖಾಸಗಿ ಬಳಕೆಯ ಬಿಳಿ ಬಣ್ಣದ ನಂಬರ್ ಪ್ಲೇಟ್ ಹೊಂದಿರುವ ವಾಹನಗಳಲ್ಲಿ ಶಾಲಾ ಮಕ್ಕಳನ್ನು ಕರೆದೊಯ್ಯುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸಂಚಾರ ಪೊಲೀಸರು ಮುಂದಾಗಿದ್ದಾರೆ.

ಮೈಸೂರು ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ನಿರ್ದೇಶನದಂತೆ, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್.ಸುಂದರ್‌ರಾಜ್ ಸೂಚನೆ ಹಾಗೂ ಸಂಚಾರ ಎಸಿಪಿ ಎಂ.ಶಿವಶಂಕರ್ ನೇತೃತ್ವದಲ್ಲಿ ನಗರದ ದೇವರಾಜ, ಕೃಷ್ಣರಾಜ, ನರಸಿಂಹರಾಜ, ಸಿದ್ದಾರ್ಥನಗರ ಹಾಗೂ ವಿ.ವಿ.ಪುರಂ ಸಂಚಾರ ಠಾಣೆಗಳ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ಇಂದು ಬೆಳಿಗ್ಗೆ 8.30ರಿಂದ 10 ಗಂಟೆವರೆಗೆ ವಿಶೇಷ ಕಾರ್ಯಾಚರಣೆ ನಡೆಸಿ, ತಮ್ಮ ವ್ಯಾಪ್ತಿಯ ಶಾಲೆಗಳ ಬಳಿ ಖಾಸಗಿ ಕಾರು, ವ್ಯಾನ್‌ಗಳಲ್ಲಿ ಮಕ್ಕಳನ್ನು ಕರೆತರುವ ಚಾಲಕರಿಗೆ ಅರಿವು ಮೂಡಿಸಿದರು.

ಬಹುತೇಕ ಮಂದಿ ತಮ್ಮ ಮನೆಯ ಬಳಕೆಗಾಗಿ ಖರೀದಿಸಿರುವ ಬಿಳಿ ಬಣ್ಣದ ನಂಬರ್ ಪ್ಲೇಟ್‌ವುಳ್ಳ ವಾಹನಗಳಲ್ಲಿ ಮಕ್ಕಳನ್ನು ಶಾಲೆಗೆ ಕರೆತರುವ ಮೂಲಕ ವಾಣಿಜ್ಯ ಬಳಕೆಯ ಹಳದಿ ನಂಬರ್ ಪ್ಲೇಟ್ ಹೊಂದಿರುವ ವಾಹನಗಳಂತೆ ಬಳಸಿಕೊಳ್ಳುತ್ತಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಹಾಗೂ ಕೆಲ ಪೋಷಕರ ದೂರಿನನ್ವಯ ಎಚ್ಚೆತ್ತ ಸಂಚಾರ ಪೊಲೀಸರು ಕಾರ್ಯಪ್ರವೃತ್ತರಾಗಿದ್ದಾರೆ.

ಶಾಲೆಗಳಿಗೆ ತೆರಳಿದ ಪೊಲೀಸರು ಅಲ್ಲಿಗೆ ಮಕ್ಕಳನ್ನು ಕರೆತಂದ ವೈಟ್ ನಂಬರ್ ಪ್ಲೇಟ್ ವಾಹನಗಳ ಚಾಲಕರನ್ನು ಭೇಟಿ ಮಾಡಿ ಈ ರೀತಿ ನೀವು ಸ್ವಂತಕ್ಕೆ ಖರೀದಿಸಿರುವ ವಾಹನಗಳಲ್ಲಿ ಆಸನಗಳ ಸಾಮರ್ಥ್ಯಕ್ಕಿಂತ ಹೆಚ್ಚು ಮಕ್ಕಳನ್ನು ಕರೆತರುವುದು ಕಾನೂನಿಗೆ ವಿರುದ್ಧ. ಹಾಗಾಗಿ ಮಕ್ಕಳ ಸುರಕ್ಷತೆಗೆ ಧಕ್ಕೆಯುಂಟಾಗುತ್ತದೆ. ಆದ್ದರಿಂದ ನೀವು ವೈಟ್ ಬೋರ್ಡ್ ವಾಹನಗಳಲ್ಲಿ ಮಕ್ಕಳನ್ನು ಕರೆತರಬಾರದೆಂದು ಕಿವಿಮಾತು ಹೇಳಿದರು.

ಒಂದು ವೇಳೆ ಸೋಮವಾರದ ನಂತರ ಇದೇ ಪ್ರವೃತ್ತಿ ಮುಂದುವರೆದಲ್ಲಿ ಕಾನೂನಿನನ್ವಯ ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ, ವಾಹನಗಳನ್ನು ವಶಪಡಿಸಿಕೊಂಡು ದಂಡ ವಿಧಿಸಲಾಗುತ್ತದೆ ಎಂದು ಸಂಚಾರ ಪೊಲೀಸರು ಇದೇ ವೇಳೆ ಎಚ್ಚರಿಕೆ ನೀಡಿದರು. ಒಂದು ವೇಳೆ ಮಕ್ಕಳನ್ನು ಶಾಲೆಗೆ ಕರೆತರಲೇಬೇಕೆಂದರೆ, ಮೊದಲು ನಿಮ್ಮ ವಾಹನಗಳನ್ನು ಹಳದಿ ಬಣ್ಣದ ನಂಬರ್ ಪ್ಲೇಟ್‌ಗೆ ಪರಿವರ್ತನೆ ಮಾಡಿಕೊಂಡು, ನಂತರ ಮಕ್ಕಳ ಸುರಕ್ಷತೆಗೆ ಕ್ರಮವಹಿಸಬೇಕು ಎಂದು ಸಂಚಾರ ಪೊಲೀಸರು ಸೂಚನೆ ನೀಡಿದರು.

ಅಲ್ಲದೇ, ಶಾಲಾ ಮುಖ್ಯಸ್ಥರು, ಆಡಳಿತ ಮಂಡಳಿ ಹಾಗೂ ಸ್ಥಳದಲ್ಲಿದ್ದ ಪೋಷಕರನ್ನು ಭೇಟಿ ಮಾಡಿ ಮಕ್ಕಳ ಹಿತದೃಷ್ಟಿಯಿಂದ ಈ ಕುರಿತಂತೆ ಅಗತ್ಯ ಕ್ರಮವಹಿಸಬೇಕೆಂದು ಸಲಹೆ ನೀಡಿದ ಸಂಚಾರ ಪೊಲೀಸರು, ಮಕ್ಕಳಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಮೊದಲು ಜಾಗೃತಿ ಮೂಡಿಸಲಾಗುತ್ತಿದೆ. ಸೋಮವಾರದ ನಂತರ ಮತ್ತೆ ಕಾರ್ಯಾಚರಣೆ ಮುಂದುವರೆಸಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಮೈಸೂರು ನಗರ ಸಂಚಾರ ಪೋಲಿಸರಿಂದ ವಿಶೇಷ ಜಾಗೃತಿ ಅಭಿಯಾನ


ವಿವಿಪುರಂ ಸಂಚಾರ ಠಾಣೆ ಪೊಲೀಸರು ಖಾಸಗಿ ಶಾಲಾ ವಾಹನಗಳ ತಪಾಸಣೆ ನಡೆಸಿದರು.

> ಬಿಳಿ ಬಣ್ಣದ ನಂಬರ್ ಪ್ಲೇಟ್ ಹೊಂದಿರುವ ಖಾಸಗಿ ವಾಹನಗಳಲ್ಲಿ ಶಾಲಾ ಮಕ್ಕಳನ್ನು ಕರೆದೊಯ್ಯುವುದು ನಿಯಮ ಬಾಹಿರ. ಅಂತಹ ವಾಹನಗಳಲ್ಲಿ ಮಕ್ಕಳ ಸುರಕ್ಷತೆ ಬಗ್ಗೆ ಯಾವುದೇ ಮುಂಜಾಗ್ರತಾ ಕ್ರಮ ವಹಿಸಿರುವುದಿಲ್ಲ. ಇಂತಹ ವಾಹನಗಳು ಅಪಘಾತಕ್ಕೀಡಾಗಿ ಅಪಾಯ ಸಂಭವಿಸಿದಲ್ಲಿ ವಿಮಾ ಸೌಲಭ್ಯ ಸಿಗುವುದಿಲ್ಲದ್ದರಿಂದ ಶಾಲಾ ಮಕ್ಕಳಿಗೆ ಯಾವುದೇ ಅನುಕೂಲವಾಗುವುದಿಲ್ಲ. ಈ ಕುರಿತಂತೆ ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರಿಗೆ ಜಾಗೃತಿ ಮೂಡಿಸುವುದು ಅತ್ಯವಶ್ಯ. ಈಗ ಸಂಚಾರ ಪೊಲೀಸರು ಮೈಸೂರು ನಗರದಾದ್ಯಂತ ವಿಶೇಷ ಕಾರ್ಯಾಚರಣೆ ಮೂಲಕ ಕ್ರಮ ಕೈಗೊಂಡಿರುವುದು ಶ್ಲಾಘನೀಯ.
> **–ಸಿ.ಎನ್.ರಾಮಚಂದ್ರ, ಪ್ರಾದೇಶಿಕ ಸಾರಿಗೆ ಅಧಿಕಾರಿ (ಪಶ್ಚಿಮ)**

ಡಿಎಲ್ ಇಲ್ಲದ ವಿದ್ಯಾರ್ಥಿಗಳ ಮೇಲೆ ನಿಗಾ

ಮೈಸೂರು,ನ.15(ಆರ್‌ಕೆ)–ಖಾಸಗಿ ವಾಹನಗಳಲ್ಲಿ ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿರುವವರ ವಿರುದ್ಧ ಕ್ರಮಕ್ಕೆ ಮುಂದಾಗಿರುವ ಸಂಚಾರ ಪೊಲೀಸರು, ವಾಹನ ಚಾಲನ ಪರವಾನಗಿ (ಡಿಎಲ್) ಇಲ್ಲದೇ ವಾಹನ ಚಾಲನೆ ಮಾಡಿ ಕೊಂಡು ಬರುವ ವಿದ್ಯಾರ್ಥಿಗಳ ಮೇಲೆ ನಿಗಾವಹಿಸುವ ಅಗತ್ಯವಿದೆ.

ಮೈಸೂರಿನ ಬಹುತೇಕ ಪ್ರೌಢ ಶಾಲೆಗಳು ಹಾಗೂ ಪಿಯು ಕಾಲೇಜುಗಳಿಗೆ ಕೆಲ ವಿದ್ಯಾರ್ಥಿಗಳು ದ್ವಿಚಕ್ರ ವಾಹನಗಳನ್ನು ಚಾಲನೆ ಮಾಡಿಕೊಂಡು ಬರುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಇಂತಹ ವಿದ್ಯಾ ಸಂಸ್ಥೆಗಳ ಪಾರ್ಕಿಂಗ್‌ನಲ್ಲಿ ಹಾಗೂ ಸುತ್ತಲೂ ವಿದ್ಯಾರ್ಥಿಗಳ ದ್ವಿಚಕ್ರ ವಾಹನಗಳು ನಿಂತಿರುವುದು ತರಗತಿ ವೇಳೆ ಕಂಡು ಬರುತ್ತಿದೆ. ಅಂದರೆ ಆ ವಿದ್ಯಾರ್ಥಿಗಳು 18 ವರ್ಷದೊಳಗಿನವರೇ ಆಗಿರುತ್ತಾರೆ. ಅವರಿಗೆ ಆರ್‌ಟಿಓ ಕಚೇರಿಯಿಂದ ವಾಹನ ಚಾಲನಾ ಪರವಾನಗಿ ನೀಡಿಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ನಿತ್ಯವೂ ಅಪ್ರಾಪ್ತರು ವಾಹನ ಚಾಲನೆ ಮಾಡುತ್ತಿರುವುದು ಕಂಡರೂ ಆ ವ್ಯಾಪ್ತಿಯ ಸಂಚಾರ ಠಾಣೆ ಪೊಲೀಸರು ಕಣ್ಣುಮುಚ್ಚಿ ಕುಳಿತಿರುವುದು ಅಚ್ಚರಿ ಮೂಡಿಸಿದೆ. ಆಯಾ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನೂ ಭೇಟಿ ಮಾಡಿ ಅಪ್ರಾಪ್ತ ವಿದ್ಯಾರ್ಥಿಗಳು ದ್ವಿಚಕ್ರ ವಾಹನ ಚಾಲನೆ ಮಾಡಿಕೊಂಡು ಬರುವುದನ್ನು ತಪ್ಪಿಸಬೇಕೆಂದು ಸಲಹೆ ನೀಡಬೇಕು. ಅದೇ ರೀತಿ ಪೋಷಕರು ಸಹ ತಮ್ಮ ಪ್ರೌಢ ಶಾಲೆ ಮತ್ತು ಪಿಯು ಓದುತ್ತಿರುವ ಮಕ್ಕಳಿಗೆ ದ್ವಿಚಕ್ರ ವಾಹನಗಳನ್ನು ಕೊಡಬಾರದು ಎಂದು ಅರಿವು ಮೂಡಿಸುವ ಅಗತ್ಯವಿದೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಾನು ಸಂಗೀತ ಅಭ್ಯಾಸ ಮಾಡೋವಾಗೆಲ್ಲಾ... ನೀವು ಯಾಕ್ರೀ ಹೊರಗೆ ಹೋಗಿ ನಿಂತ್ಕೋತೀರಾ?

ಗಂಡ : ಅಕ್ಕಪಕ್ಕದ ಮನೆಯವರು ನಾನು ನಿನ್ನನ್ನು ಹೊಡೀತಿದೀನಿ ಅಂತಾ ತಿಳ್ಕೋಬಾರದು ಅಂತಾ...

ಮೈಸೂರು ಮಿತ್ರ

ಭಾನುವಾರ, 16 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ವಾತಾವರಣ ಮಂಕಾದರೇನೂ, ಮನಸ್ಸು ಮಂಕಾಗದಿರಲಿ.
ಕೆಟ್ಟ ಕನಸು ಬಿದ್ದರೇನೂ ಆಲೋಚನೆ ಶುಚಿಯಾಗಿರಲಿ.
ವಾದ–ವಿವಾದ ಏನೇ ಇರಲಿ, ನುಡಿ ನೇರವಾಗಿರಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾಲಗಾರ ಸುಮ್ಮನಿದ್ರು ಸಾಕ್ಷಿಗಾರ ಸುಮ್ಮನಿರ.

ನಿಮ್ಮ ಪತ್ರಗಳು

ವೃಕ್ಷಮಾತೆ ಶತಾಯುಷಿ ಸಾಲುಮರದ ತಿಮ್ಮಕ್ಕ ಅಗಲಿಕೆ ತುಂಬಲಾರದ ನಷ್ಟ

ಮಾನ್ಯರೇ,



ದೇಶಾದ್ಯಂತ 'ಮಕ್ಕಳ ದಿನಾಚರಣೆ'ಯನ್ನು ಆಚರಿಸುತ್ತಿದ್ದ ದಿನದಂದೇ ಪ್ರಕೃತಿಯ ಅಸಂಖ್ಯಾತ ಮಕ್ಕಳಿಗೆ ತಾಯಿಯಂತಿದ್ದ 'ವೃಕ್ಷಮಾತೆ' ಶತಾಯುಷಿ ಸಾಲುಮರದ ತಿಮ್ಮಕ್ಕನವರು ನಮ್ಮನ್ನು ಅಗಲಿದ್ದಾರೆ. ಸಸಿಗಳನ್ನು ಮತ್ತು ಗಿಡಗಳನ್ನು ತಮ್ಮ ಮಕ್ಕಳಂತೆಯೇ ಭಾವಿಸಿ, ಅಪಾರ ಪ್ರೀತಿ, ತ್ಯಾಗ ಮತ್ತು ನಿರಂತರ ಶ್ರಮದಿಂದ ಪೋಷಿಸಿ ಹೆಮ್ಮರವಾಗಿಸಿದ ಅವರ ಜೀವನವೇ ಒಂದು ಶ್ರೇಷ್ಠ ಆದರ್ಶ.

ಮಾಗಡಿ ತಾಲೂಕಿನ ಕುದೂರಿನಿಂದ ಹುಲಿಕಲ್ ತನಕವಿರುವ ಹೆದ್ದಾರಿಯ ಇಕ್ಕೆಲಗಳಲ್ಲಿ ತಮ್ಮ ಪತಿ ಚಿಕ್ಕಯ್ಯ ಅವರ ನೆರವಿನೊಂದಿಗೆ ಅವರು ನೆಟ್ಟ ಸುಮಾರು 385 ಆಲದ ಮರಗಳು ಹಾಗೂ ಜೀವನದುದ್ದಕ್ಕೂ ಪೋಷಿಸಿದ ಒಟ್ಟು 8,000ಕ್ಕೂ ಹೆಚ್ಚು ಮರಗಳ ಸಾಲು ಇಂದಿಗೂ ಸಮಾಜಕ್ಕೆ ಅವರು ನೀಡಿದ ಅಪ್ರತಿಮ ಕೊಡುಗೆಯಾಗಿದೆ. ತಮ್ಮ ವೃದ್ಧಾಪ್ಯದಲ್ಲೂ ಮರಗಳ ಕುರಿತು ಮಾತನಾಡುತ್ತಾ, ತಮ್ಮ ಕೆಲಸದ ಮೂಲಕ ಎಲ್ಲರಿಗೂ ಬದುಕಿನ ನಿಜವಾದ ನೀತಿಗಳನ್ನು ಕಲಿಸಿದ ತಿಮ್ಮಕ್ಕ ಅವರ ಸಾಧನೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದು.

ಈ ಅಸಾಮಾನ್ಯ ನಿಸ್ವಾರ್ಥ ಸೇವೆಗೆ ಪದ್ಮಶ್ರೀ ಸೇರಿದಂತೆ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಹಲವು ಪ್ರತಿಷ್ಠಿತ ಗೌರವಗಳು ಸಂದಿವೆ. ತಿಮ್ಮಕ್ಕನವರು ನಮ್ಮ ನಡುವೆ ಉಳಿಸಿದ್ದು ಕೇವಲ ಮರಗಳನ್ನಲ್ಲ, ಬದಲಿಗೆ ತ್ಯಾಗ, ನಿರಂತರತೆ ಮತ್ತು ಪ್ರಕೃತಿಯ ಮೇಲಿನ ಅಚಲ ಪ್ರೀತಿಯ ಮಹಾನ್ ಆದರ್ಶವನ್ನು. ಮಕ್ಕಳ ದಿನಾಚರಣೆಯಂದೇ ತಮ್ಮ ಅಸಂಖ್ಯಾತ ವೃಕ್ಷ–ಮಕ್ಕಳನ್ನು ಬಿಟ್ಟು ಹೋಗಿರುವ ಅವರ ನಿಧನ, ಪ್ರತಿಯೊಬ್ಬ ಪರಿಸರ ಪ್ರೇಮಿಗೂ ತುಂಬಲಾರದ ನಷ್ಟ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತಾ, ಅವರ ಬದುಕು ನಮಗೂ ಪ್ರಕೃತಿಯ ಸಮತೋಲನವನ್ನು ಕಾಪಾಡುವ ಅಮೂಲ್ಯ ಪಾಠವಾಗಲಿ ಎಂದು ಆಶಿಸುತ್ತೇನೆ.

– ಬಿ.ಗಣೇಶ್, ಕೆ.ಜಿ.ಕೊಪ್ಪಲು, ಮೈಸೂರು.

ಸಾಲುಮರದ ತಿಮ್ಮಕ್ಕನ ಸ್ಮಾರಕ ನಿರ್ಮಾಣವಾಗಲಿ

ಮಾನ್ಯರೆ,

ನೂರ ಹದಿನಾಲ್ಕು ವರ್ಷ ಬದುಕಿದ ಸಾಲು ಮರದ ತಿಮ್ಮಕ್ಕನವರು ರಸ್ತೆ ಬದಿ ಸಾವಿರಾರು ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಮೂಲಕ ಕನ್ನಡ ನಾಡಿನಲ್ಲಿ ಖ್ಯಾತಿ ಪಡೆದು ತಮಗೆ ಮಕ್ಕಳಿಲ್ಲ ಎಂಬ ಚಿಂತೆಯನ್ನು ಬದಿಗೊತ್ತಿ ಗಿಡ ಮರಗಳನ್ನೆ ಮಕ್ಕಳೆಂದು ಪ್ರೀತಿಸಿ, ಬೆಳೆಸುವುದರ ಮೂಲಕ ರಾಷ್ಟ್ರ ಮಟ್ಟದಲ್ಲಿ ಖ್ಯಾತಿಗಳಿಸಿದರು. ಇವರ ಸೇವೆಯನ್ನು ಪರಿಗಣಿಸಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡುವುದರ ಜೊತೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಇಂದು ಸಮಾಜದಲ್ಲಿ ಗಿಡ–ಮರಗಳ ಸಂರಕ್ಷಣೆಯು ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಸಾಲು ಮರದ ತಿಮ್ಮಕ್ಕನವರ ಮಾರ್ಗ ಅನುಸರಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕಿದೆ. ಇವರ ಸೇವೆಯನ್ನು ಸ್ಮರಿಸಿ ಇಂದು ಸಮಾಜದ ಯುವ ಪೀಳಿಗೆಗೆ ಇವರ ಸೇವೆ ಪ್ರತಿದಿನ ಪ್ರಚಲಿತವಾಗಿರಲು ಇವರ ಸ್ಮಾರಕ ನಿರ್ಮಾಣ ಮಾಡಲು ರಾಜ್ಯ ಸರ್ಕಾರವು ಮುಂದಾಗಬೇಕಿದೆ. –ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಬಿಹಾರ : ಎನ್‌ಡಿಎ ಮೈತ್ರಿಕೂಟಕ್ಕೆ ಭರ್ಜರಿ ಜಯ

ಮಾನ್ಯರೆ,

ಭರಪೂರ ಆಶ್ವಾಸನೆಗಳಿಗೆ ಮರುಳಾಗದ ಬಿಹಾರದ ಜನತೆ ಎನ್‌ಡಿಎ ಮೈತ್ರಿಕೂಟಕ್ಕೆ ಭರ್ಜರಿ ಜಯ ತಂದು ಕೊಡುವ ಮೂಲಕ ತಮ್ಮ ಪ್ರಬುದ್ಧತೆಯನ್ನು ಮೆರೆದಿದ್ದಾರೆ. ರಾಹುಲ್ ಗಾಂಧಿಯವರ ವೋಟ್ ಚೋರಿ ಅಭಿಯಾನವಾಗಲಿ, ಆರ್‌ಜೆಡಿಯ ಮನೆಗೊಂದು ಸರ್ಕಾರಿ ಉದ್ಯೋಗ, 500 ರೂಪಾಯಿಗೆ ಎಲ್‌ಪಿಜಿ ಸಿಲಿಂಡರ್ ಸೇರಿದಂತೆ ಹಲವಾರು ಆಶ್ವಾಸನೆಗಳ ಮಹಾಪೂರಗಳಿಗೆ ಸೊಪ್ಪು ಹಾಕದ ಮತದಾರ ನರೇಂದ್ರ ಮೋದಿ ಹಾಗೂ ನಿತೀಶ್ ಕುಮಾರ್ ಬಣಕ್ಕೆ ಬಹು ಪರಾಕ್ ಹೇಳಿ ಮಹಾಘಟಬಂಧನ್‌ಗೆ ಬಹು ದೊಡ್ಡ ಹೊಡೆತ ನೀಡಿದ್ದಾರೆ.

ರಾಹುಲ್ ಗಾಂಧಿಯವರು ಹಮ್ಮಿಕೊಂಡಿದ್ದ 'ವೋಟ್ ಚೋರಿ' ಆಂದೋಲನ ಬಿಹಾರಿ ಜನರ ಮೇಲೆ ಎಳ್ಳಷ್ಟೂ ಪರಿಣಾಮ ಬೀರದಿರುವುದು ಈ ಚುನಾವಣೆ ರುಜುವಾತುಪಡಿಸಿದೆ. ಹರ್ಯಾಣದ ನಂತರ ಬಿಹಾರದಲ್ಲೂ ಕಾಂಗ್ರೆಸ್ ಮಿತ್ರಪಕ್ಷಗಳಿಗೆ ತಕ್ಕ ಪಾಠ ಕಲಿಸುವ ಮೂಲಕ ಭ್ರಷ್ಟಚಾರ ಹಾಗೂ ಓಲೈಕೆ ರಾಜಕಾರಣಕ್ಕೆ ತಮ್ಮ ಸಹಮತ ಇಲ್ಲವೆಂಬುದನ್ನು ಜನತೆ ಈ ಚುನಾವಣೆಯಲ್ಲಿ ಧೃಢಪಡಿಸಿದ್ದಾರೆ.

ಬಿಹಾರ ಚುನಾವಣೆ ಬಿಜೆಪಿ ಗೆಲುವಿನ ನಾಗಾಲೋಟಕ್ಕೆ ಮತ್ತಷ್ಟು ವೇಗ ನೀಡಿದ್ದು ಮುಂಬರುವ ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ಚುನಾವಣೆಗೂ ಇದು ದಿಕ್ಸೂಚಿ ಆಗುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿವೆ. ಕಾಂಗ್ರೆಸ್ ಬಿಹಾರ ಚುನಾವಣೆಯಲ್ಲಿ ತೀವ್ರ ನೆಲಕಚ್ಚಿದ್ದು ಈ ದುಸ್ಥಿತಿಗೆ ನಾಯಕತ್ವದ ಕೊರತೆಯೇ ಕಾರಣವೆನ್ನಬಹುದು. ಒಟ್ಟಾರೆ ಬಿಹಾರ ಚುನಾವಣೆ ಹಲವಾರು ವಿಶ್ಲೇಷಣೆಗೆ ಒಳಪಟ್ಟಿದ್ದು ಕರ್ನಾಟಕ ಕಾಂಗ್ರೆಸ್ ಸರ್ಕಾರಕ್ಕೂ ಇದೊಂದು ಎಚ್ಚರಿಕೆಯ ಗಂಟೆ ಎನ್ನಬಹುದು.

– ಹೆಚ್. ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು.

ಸಾಲುಮರದ ತಿಮ್ಮಕ್ಕನಿಗೆ ಸಾವಿಲ್ಲ

ಮಾನ್ಯರೆ,

ಸಂಬಂಧಗಳು ಕರುಳುಬಳ್ಳಿಯದ್ದಲ್ಲ, ಆದರೂ...
ಗಟ್ಟಿಬಂಧನವಿದೆ ಆಲದಮರಗಳಿಗೂ ಈ ವನಮಾತೆಗೂ.
ಸಾಲುಸಾಲು ನಿಂತಿವೆ ಹಸಿರಾಗಿ ತಾಯಿಯ ಹೆಸರೇಳಲು.
ಉಸಿರಿಗೆ ಪರಿಶುದ್ದ ಗಾಳಿ, ಹೆಸರು ಸಾಲುಮರದ ತಿಮ್ಮಕ್ಕ
ಹೆತ್ತಮಕ್ಕಳು ದೂರ ಆಗಬಹುದು, ಅಮ್ಮ ನೆಟ್ಟುನೀರೆರದ
ಮಕ್ಕಳಿವು, ಒಂದಿಂಚೂ ಅಲುಗಾಡವು, ನಿಂತವರಿಗೆ ನೆರಳಿವು,
ಓದಿ ದೊಡ್ಡ ದೊಡ್ಡ ಪದವಿಗಳ ಪಡೆದವರಲ್ಲ, ಛಲಗಾತಿಗೆ
ಒಲವಿತ್ತು, ತಾಯಿಗೆ ಮಕ್ಕಳೇ ಏಕೆ?, ಮರಗಳೇ ಮಕ್ಕಳೆಂದು
ಜೀವ ಸವೆಸಿದಳು ಅಮ್ಮ, ಪ್ರಕೃತಿಯ ಸೇವೆಗೆ ಮುಡುಪಿಟ್ಟು
ತಿಮ್ಮಕ್ಕ ತಾ ನೆಟ್ಟ ಮರಗಳು ಬಿಟ್ಟ ಶುದ್ದ ಗಾಳಿಯಲ್ಲಿರುವಳು,
ಸಾಲುಮರಗಳು ಇರುವವರೆಗೆ ನಿಮಗೆ ಸಾವಿಲ್ಲ, ಸತ್ತರಿಬಹುದು
ಸಾವಿಲ್ಲ ಆತ್ಮಕ್ಕೆ ಮಾಗಿದ ದೇಹವು ಮಣ್ಣಿಗೆ, ಗೊಬ್ಬರವಾಗಲು,
ಮರಗಳ ಎಲೆಗಳು ತೂಗುತಾ ಕೂಗಿಕೂಗಿ ಕರೆಯುವೆವು ಅಮ್ಮಾ..
ಧರೆಗೆ ಉರುಳುವವರೆಗೂ!, ವೃಕ್ಷಾದೇವಿ ಇವಳು ಶತಾಯುಷಿ ತಿಮ್ಮಕ್ಕ,
ಅಮ್ಮನ ಆತ್ಮವು ಸದಾ ಸಾಲುಮರಗಳ ಸುತ್ತಾ ಇದ್ದು ರಕ್ಷಿಸುವುದು,
ಆಲದಮರಗಳಲ್ಲಿ ಲೀನವಾಗಿ ಮರೆಯಾದ ತಿಮ್ಮಕ್ಕನಿಗೆ ಶ್ರದ್ದಾಂಜಲಿ!.

–ಮಿರ್ಲೆ ಚಂದ್ರಶೇಖರ. ಲೇಖಕರು, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346


ನಾದಲಹರಿ

ಶ್ರೀ ಶಂಕರ ಭಗವತ್ಪಾದರು

ಸಾಮಾನ್ಯ ಮನುಷ್ಯರಂತೆ ಹುಟ್ಟಿಯೂ ತಮ್ಮ ಅಸಾಮಾನ್ಯ ಚಿಂತನೆ ಮತ್ತು ಕೆಲಸಗಳಿಂದ ಮನುಷ್ಯ ಕೋಟಿಯನ್ನು ಉದ್ಧಾರ ಮಾಡಿದ ಅನೇಕ ಮಹಾಪುರುಷರು ಭಾರತದಲ್ಲಿ ಜನಿಸಿದ್ದಾರೆ. ನಮ್ಮ ಋಷಿ ಮುನಿಗಳೆಲ್ಲ ಒಂದಲ್ಲ ಒಂದು ಅರ್ಥದಲ್ಲಿ ಮಹಾಪುರುಷರೇ ಅಲ್ಲವೇ ಮಾನವ ಕಲ್ಯಾಣಕ್ಕಾಗಿ ಅವರು ನಡೆಸಿದ ತಪಸ್ಸು, ಕಠಿಣ ಸಾಧನೆಗಳು ಏನು ಕಡಿಮೆಯೇ ಅವುಗಳ ಬಗ್ಗೆ ನಮಗೆ ತಿಳಿಯಬೇಕೆಂದರೆ ಅವರ ಬಗೆಗೆ ಕಿಂಚಿತ್ತಾದರೂ ತಿಳಿದುಕೊಳ್ಳುವ ಯತ್ನವನ್ನು ಮಾಡಬೇಕು.

ಅತ್ಯಂತ ಪ್ರಾಚೀನವಾದ ವೈದಿಕ ಸಿದ್ಧಾಂತವೆಂದರೆ, ಅದ್ವೈತ. ಅಸಾಧಾರಣ ರೀತಿಯಲ್ಲಿ ಅದರ ಮರುಸ್ಥಾಪನೆ ಮಾಡಿದ ಮಹಾನುಭಾವರೇ ಶ್ರೀ ಶಂಕರ ಭಗವತ್ಪಾದರು. ಅವರು ಬದುಕಿದುದು ಕೇವಲ ಮೂವತ್ತೆರಡು ವರ್ಷಗಳಷ್ಟೇ ಆದರೂ ಅದರೊಳಗೆ ಮಾಡಿದ ಮಹಾಕಾರ್ಯಗಳು ಸಾಮಾನ್ಯರು ಊಹಿಸಲೂ ಆಗದಷ್ಟು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಂಚರಿಸಿ ಭಾರತೀಯರಿಗೆ ಅದ್ವೈತದ ಸಾರವನ್ನು ತಿಳಿಸಿದ ಪರಿ ಅನನ್ಯ. ಧರ್ಮ ರಕ್ಷಣೆಗಾಗಿ ದೇಶದ ನಾಕು? ದಿಕ್ಕುಗಳಲ್ಲಿ ನಾಕು ಮಠಗಳನ್ನು ಸ್ಥಾಪಿಸಿದುದು ಅವರ ದೂರದರ್ಶಿತ್ವಕ್ಕೆ ಹಿಡಿದ ಕೈಗನ್ನಡಿ. ಸಮಸ್ತ ಭರತ ಖಂಡವನ್ನು ಆಳಬಲ್ಲ ಚಕ್ರವರ್ತಿ ಇಲ್ಲದಾಗ, ವಿವಿಧ ಧರ್ಮಗಳಲ್ಲಿ ಹೊಂದಾಣಿಕೆ ಇಲ್ಲದೆ ಸಮಾಜವು ಅಸ್ತವ್ಯಸ್ತವಾದಾಗ ಸಹಜವಾಗಿಯೇ ಲೌಕಿಕ. ಪಾರಮಾರ್ಥಿಕ ಎರಡೂ ವಿಷಯಗಳಲ್ಲಿ ಅಶಾಂತಿ, ಅಸಮಾಧಾನಗಳು ತುಂಬಿರುವಂತಹ ಸಮಯದಲ್ಲಿ ಪ್ರಖರವಾದ ಸೂರ್ಯನಂತೆ ಉದಯಿಸಿದವರು ಶ್ರೀ ಶಂಕರ ಭಗವತ್ಪಾದರು. ಕೇರಳದಲ್ಲಿ 'ಕಾಲಟಿ' ಎಂಬ ಗ್ರಾಮದಲ್ಲಿ ಶಿವಗುರು ಮತ್ತು ಆರ್ಯಾಂಬಾ ಎಂಬ ದಂಪತಿಗಳ ಮಗನಾಗಿ ಜನಿಸಿದ ಮಗು ಶಂಕರ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು, ತಾಯಿಯ ಕಣ್ಮಣಿಯಾಗಿದ್ದ ಈ ಮೇಧಾವಿಗೆ ಸಂಸ್ಕೃತ–ವೇದಗಳ ಪಾಠವಾಯಿತು. ಅತ್ಯಲ್ಪ ಕಾಲದಲ್ಲಿಯೇ ವೇದ,ತರ್ಕ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ಪಾರಂಗತನಾದ ಇವನು ಚಿಕ್ಕ ವಯಸ್ಸಿನಲ್ಲಿಯೇ ವೈರಾಗ್ಯವನ್ನು ಹೊಂದಿದ್ದನು. ಸಂನ್ಯಾಸಿ ಆಗಬೇಕೆಂಬ ಪ್ರಬಲ ಇಚ್ಛೆ. ಯಾವ ತಾಯಿ ತಾನೆ ಅದಕ್ಕೆ ಒಪ್ಪಿಯಾಳು? ಒಮ್ಮೆ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಮೊಸಳೆಯೊಂದು ಅವನ ಕಾಲನ್ನು ಹಿಡಿದು ಎಳೆಯ ತೊಡಗಿದಾಗ ಕೂಗಿದ ಅವನ ದನಿ ತಾಯಿಗೆ ಕೇಳಿಸಿ, ಹಾಹಾಕಾರ ಮಾಡತೊಡಗಿದಳು. ಅಮ್ಮಾ ಮೊಸಳೆ ಎಳೆಯುತ್ತಿದೆ. ನನ್ನ ಗತಿ ಮುಗಿದಂತಿದೆ. ಈಗಲಾದರೂ ಸನ್ಯಾಸಿಯಾಗಲು ಅನುಮತಿ ಕೊಡು ಎಂದು ಕೂಗಿದ ಮಗನ ಸ್ಥಿತಿಯನ್ನು ನೋಡಲಾರದೆ ಅನುಮತಿ ಕೊಟ್ಟಳು. ಮನಸ್ಸಿನಲ್ಲಿಯೇ ಸಂಕಲ್ಪಿಸಿ, ಸನ್ಯಾಸವನ್ನು ಸ್ವೀಕರಿಸಿದ ಆತ ದೈವಯೋಗದಿಂದ ಬದುಕಿ ಬರುತ್ತಾನೆ.

ತಾಯಿಯನ್ನು ಸಮಾಧಾನ ಮಾಡಿ, ಅವಳು ನೆನೆದಾಗ ಬರುವುದಾಗಿ ವಾಗ್ದಾನ ಕೊಟ್ಟು ಶಂಕರರು ಕಾಷಾಯ ವಸ್ತ್ರವನ್ನು ಧರಿಸಿ, ದಂಡವನ್ನು ಹಿಡಿದು ಸನ್ಯಾಸಿಯಾಗಿ ಹೊರಟರು. ಶ್ರೀ ಗೋವಿಂದ ಭಗವತ್ಪಾದರು ಅವರಿಗೆ ವಿಧಿವತ್ತಾಗಿ ಸನ್ಯಾಸ ದೀಕ್ಷೆಯನ್ನು ಕೊಟ್ಟು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದುದಲ್ಲದೆ ಅವರಿಗೆ ವೇದಾಂತ ದರ್ಶನ, ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರ ಇತ್ಯಾದಿ ವೈದಿಕ ಸಿದ್ಧಾಂತಗಳನ್ನು ಬೋಧಿಸುತ್ತಾರೆ. ಅತ್ಯಲ್ಪ ಕಾಲದಲ್ಲಿ ಸಕಲ ಶಾಸ್ತ್ರಗಳಲ್ಲಿ ನಿಷ್ಣಾತರಾಗಿ, ಗುರುಗಳ ಆದೇಶದಂತೆ ಪ್ರಸ್ಥಾನತ್ರಯಕ್ಕೆ ಭಾಷ್ಯವನ್ನು ಬರೆದು ಮುಗಿಸಿದಾಗ ಅವರಿಗೆ ಕೇವಲ ಹದಿನಾರು ವರ್ಷ! ಅದ್ವೈತಮತ ಸ್ಥಾಪನೆಗಾಗಿ ಸಂಕಲ್ಪಿಸಿ, ಕಾಶಿಗೆ ಬರುತ್ತಾರೆ. ಈ ಪ್ರಖರ ಪಾಂಡಿತ್ಯದ, ಬ್ರಹ್ಮ ತೇಜಸ್ಸಿನ ಯುವ ಸನ್ಯಾಸಿಯ ಕೀರ್ತಿ ಎಲ್ಲೆಡೆ ಹರಡಿತು. ಆತ್ಮಜ್ಞಾನ ಅಪೇಕ್ಷಿಗಳನೇಕರು ಅವರ ಶಿಷ್ಯರಾದರು. ಶಿಷ್ಯರಿಗೆ ವೇದಾಂತ ರಹಸ್ಯವನ್ನು ಅವರು ಬೋಧಿಸಿದರು. ಅವರನ್ನು ಪರೀಕ್ಷಿಸಲು ಅಂತ್ಯಜನ ರೂಪದಲ್ಲಿ ಬಂದ ಮಹೇಶ್ವರನ ಕೃಪೆಯನ್ನು ಪಡೆದರು.



> ಧರ್ಮ ರಕ್ಷಣೆಗಾಗಿ ದೇಶದ ನಾಕು ದಿಕ್ಕುಗಳಲ್ಲಿ ನಾಕು ಮಠಗಳನ್ನು ಸ್ಥಾಪಿಸಿದುದು ಅವರ ದೂರ ದರ್ಶಿತ್ವಕ್ಕೆ ಹಿಡಿದ ಕೈಗನ್ನಡಿ. ಸಮಸ್ತ ಭರತ ಖಂಡವನ್ನು ಆಳಬಲ್ಲ ಚಕ್ರವರ್ತಿ ಇಲ್ಲದಾಗ, ವಿವಿಧ ಧರ್ಮಗಳಲ್ಲಿ ಹೊಂದಾಣಿಕೆ ಇಲ್ಲದೆ ಸಮಾಜವು ಅಸ್ತವ್ಯಸ್ತವಾದಾಗ ಸಹಜವಾಗಿಯೇ ಲೌಕಿಕ. ಪಾರಮಾರ್ಥಿಕ ಎರಡೂ ವಿಷಯಗಳಲ್ಲಿ ಅಶಾಂತಿ, ಅಸಮಾಧಾನಗಳು ತುಂಬಿರುವಂತಹ ಸಮಯದಲ್ಲಿ ಪ್ರಖರವಾದ ಸೂರ್ಯನಂತೆ ಉದಯಿಸಿದವರು ಶ್ರೀ ಶಂಕರ ಭಗವತ್ಪಾದರು.

ಬದರಿಗೆ ತೆರಳಿ, ಅಲ್ಲಿ ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆದು ಮತ್ತೆ ಕಾಶಿಗೆ ಹಿಂದಿರುಗಿದ ಶಂಕರರು ವೇದವ್ಯಾಸರ ಆಜ್ಞೆಯಂತೆ ಭರತಖಂಡದಲ್ಲಿ ವೈದಿಕ ತತ್ವಗಳ ಪ್ರಚಾರ ಮಾಡುವ ಗುರುತರ ಕಾರ್ಯದಲ್ಲಿ ತೊಡಗುತ್ತಾರೆ.

ಅನೇಕ ವಿದ್ವಾಂಸರೊಡನೆ ವಾದ–ವಿವಾದಗಳಲ್ಲಿ ಗೆಲ್ಲುತ್ತಾರೆ, ಅಸಂಖ್ಯಾತ ಶಿಷ್ಯರನ್ನು ಪಡೆಯುತ್ತಾರೆ. ದಕ್ಷಿಣಕ್ಕೆ ಬಂದು, ಶೃಂಗೇರಿಯಲ್ಲಿ ಶ್ರೀ ಶಾರದಾದೇವಿಯನ್ನು ಪ್ರತಿಷ್ಠಾಪಿಸುತ್ತಾರೆ. ಮರಣಶಯ್ಯೆಯಲ್ಲಿದ್ದ ತಾಯಿಯು ಅವರನ್ನು ಸ್ಮರಿಸಲು, ಕೂಡಲೆ ಕಾಲಡಿಗೆ ಹೋಗಿ ಅವಳನ್ನು ಮಾತನಾಡಿಸುತ್ತಾರೆ. ಮಗನನ್ನು ನೋಡಿ ಉಲ್ಲಸಿತಳಾದ ಆಕೆ ನಾಲ್ಕಾರು ಮಾತುಗಳನ್ನಾಡಿ, ತೀರಿಕೊಳ್ಳುತ್ತಾರೆ. ಅವರ ಅಂತ್ಯಕ್ರಿಯೆ ಮುಗಿಸಿ ಮತ್ತೆ ತಮ್ಮ ವೇದಾಂತ ಸಿದ್ಧಾಂತದ ಸ್ಥಾಪನೆಯ ಸಂಚಾರವನ್ನು ಆರಂಭಿಸುತ್ತಾರೆ. ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ಎಲ್ಲೆಡೆ ತಮ್ಮ ವಾಗ್ವೈಖರಿಯಿಂದ ಚಾರ್ವಾಕ, ಬೌದ್ಧ, ಜೈನ, ಸಾಂಖ್ಯ, ಶಾಕ್ತ, ಪಾಶುಪತ ಮೊದಲಾದ ಧರ್ಮಗಳ ಪ್ರತಿವಾದಿಗಳನ್ನು ಸೋಲಿಸಿ ಅದ್ವೈತವಾದವನ್ನು ಮರುಸ್ಥಾಪಿಸುತ್ತಾರೆ.

ಕಾಶ್ಮೀರದಲ್ಲಿದ್ದ ಸರ್ವಜ್ಞ ಪೀಠವನ್ನು ಅದುವರೆಗೆ ಯಾವ ದಾಕ್ಷಿಣಾತ್ಯರೂ ಏರುವ ಸಾಮರ್ಥ್ಯವನ್ನು ತೋರಿರಲಿಲ್ಲವೆಂಬ ಅಪವಾದವನ್ನು ತೊಡೆದುಹಾಕುತ್ತಾರೆ. ಅವರನ್ನು ತಡೆದ ಎಲ್ಲ ವಿದ್ವಾಂಸರನ್ನು ವಾದದಲ್ಲಿ ಜಯಿಸಿ, ಆ ಪೀಠವನ್ನಲಂಕರಿಸುತ್ತಾರೆ. ಎಲ್ಲರಿಂದ ಸನ್ಮಾನಿತರಾಗುತ್ತಾರೆ. ನಂತರ ತಮ್ಮ ಗುರುಗಳ ಆದೇಶದಂತೆ ವೈದಿಕಧರ್ಮ ರಕ್ಷಣೆಗಾಗಿ ಯಥಾಶಕ್ತಿ ಶ್ರಮಿಸಿದ್ದಾಯಿತು. ಈ ಧರ್ಮವು ಮುಂದೆಯೂ ಸ್ಥಿರವಾಗಿ ನಿಂತಿರಲೆಂದು ಶೃಂಗೇರಿಯಲ್ಲಿ ತಾವು ಸ್ಥಾಪಿಸಿದಂತೆ ಈ ದೇಶದ ಇನ್ನು ಮೂರು ಮೂಲೆಗಳಲ್ಲಿಯೂ ಮಠಗಳನ್ನು ಸ್ಥಾಪಿಸಲು ಶಿಷ್ಯರಿಗೆ ಹೇಳಿ, ಅದ್ವೈತ ದರ್ಶನದ ಸಂರಕ್ಷಣೆಯ ಕಾರ್ಯವನ್ನು ಮುಂದುವರೆಸುವಂತೆ ಆಜ್ಞಾಪಿಸುತ್ತಾರೆ. ಅವರೆಲ್ಲರನ್ನು ಕಳುಹಿಸಿ ತಾವು ಬದರಿಕಾಶ್ರಮಕ್ಕೆ ಬಂದು, ಅಲ್ಲಿ ಶ್ರೀಮನ್ನಾರಾಯಣನನ್ನು ಕೆಲಸಮಯ ಧ್ಯಾನಿಸಿ, ಕೇದಾರಕ್ಕೆ ಹೋಗಿ ಅಲ್ಲಿ ಕೇದಾರನಾಥನ ಧ್ಯಾನಿಸಿ, ತಮ್ಮ ಕಾರ್ಯ ಮುಗಿಯಿತೆಂಬ ಭಾವದಿಂದ ನಿರ್ವಿಕಲ್ಪ ಸಮಾಧಿಯನ್ನೇರಿ ಈ ದೇಹವನ್ನುಳಿದು ಪರಬ್ರಹ್ಮನಲ್ಲಿ ಲೀನರಾಗುತ್ತಾರೆ. ಆಗ ಅವರಿಗೆ ಮೂವತ್ತೆರಡು ವರುಷ.

ಶಂಕರರಿಗಿಂತ ಮೊದಲೇ ಅದ್ವೈತ ಮತವಿದ್ದರೂ ನಂತರ ಬಂದ ಹಲವು ಬೇರೆ ಬೇರೆ ಮತಗಳ ವಾದ ವಿವಾದಗಳಿಂದ ಮಂಕಾದಂತಿದ್ದ ಅದನ್ನು ಸ್ವಚ್ಛಗೊಳಿಸಿ ಅದ್ವೈತ ಸಿದ್ಧಾಂತವು ಮತ್ತೆ ಝಗಮಗಿಸುವಂತೆ ಮಾಡಿದುದು ಶಂಕರರ ಸಾಧನೆ. ಭಾರತದಲ್ಲಿ ವಿಚಾರ ಸ್ವಾತಂತ್ರ್ಯ ಎಂಬುದು ಯಾವಾಗಲೂ ಇತ್ತು. ಯಾರು ಯಾವ ವಿಚಾರಧಾರೆಯನ್ನೂ ಒಪ್ಪಬಹುದಾಗಿತ್ತು. ಅದರಿಂದಲೇ ನಮ್ಮಲ್ಲಿ ಅದ್ವೈತ, ದ್ವೈತ, ಸಾಂಖ್ಯ, ವೈಷೇಶಿಕ, ಜೈನ, ಬೌದ್ಧ ಇತ್ಯಾದಿ ಅಸಂಖ್ಯಾತ ದರ್ಶನಗಳು ಹುಟ್ಟಿದುದು. ಇವುಗಳಲ್ಲಿ ಕೆಲವು ವೇದವನ್ನು ಪರಮ ಪ್ರಮಾಣ ಎಂದು ಒಪ್ಪಿಕೊಂಡವು. ಮತ್ತೆ ಕೆಲವು ಅದರ ವಿರುದ್ಧವಾಗಿ, ತರ್ಕವೇ ಮುಖ್ಯ ಎಂದವು. ಬೇರೆ ಬೇರೆ ಚಿಂತನೆಗಳಿಗೆ ಅವಕಾಶವನ್ನು ನೀಡಿ, ಈ ಎಲ್ಲಕ್ಕೂ ಸ್ಥಾನವನ್ನಿತ್ತುದುದು ಈ ಪುಣ್ಯಭೂಮಿ.

ನಾನು ಎಂದರೆ ಯಾರು? ಎಂಬ ಪ್ರಶ್ನೆಯನ್ನು ಒಂದಲ್ಲಾ ಒಂದು ಬಾರಿ ಎಲ್ಲರೂ ಎದುರಿಸಿಯೇ ಇರುತ್ತಾರೆ. ಆದರೆ ಅದಕ್ಕೆ ಉತ್ತರ ಈ ದೇಹವೇ ಪ್ರಾಣವೇ ಮನಸ್ಸೇ ಹಾಗೆಯೇ ಭಗವಂತ ಎಂಬುವನು ಇದ್ದಾನೆಯೇ ಇದ್ದರೆ, ಹೇಗಿದ್ದಾನೆ ಈ ಹುಟ್ಟು ಸಾವುಗಳ ಉದ್ದೇಶ ಏನು ಮನಸ್ಸಿಗೆ ದುಃಖ ಏಕಾಗುತ್ತದೆ ಸದಾ ಶಾಂತಿ ಇರಲು ಸಾಧ್ಯವಿಲ್ಲವೇ ಇವುಗಳಿಗೆಲ್ಲ ಸಮಾಧಾನಕರ ಉತ್ತರ ನೀಡಿ, ಅದನ್ನು ಸಾಧಿಸಿಕೊಳ್ಳುವ ಮಾರ್ಗವನ್ನೂ ತಿಳಿಸಿ ಕೊಡುವುದೇ ದರ್ಶನ ಶಾಸ್ತ್ರ. ಇವಕ್ಕೆ ವೇದವೇ ಪ್ರಮಾಣ. ಸ್ಪಷ್ಟವಾದ ಸಾಧನಾ ಮಾರ್ಗವನ್ನು ಇವು ತಿಳಿಸಿಕೊಡುತ್ತವೆ. ದ್ವೈತ ಎಂದರೆ ಎರಡು ಅಥವಾ ದ್ವಿತ್ವ. ಹಾಗಲ್ಲದುದು ಅಂದರೆ, ಒಂದೇ ಎನ್ನುವುದು ಅದ್ವೈತ. ಅಂದರೆ ಸತ್ಯವಾಗಿ ಇರುವುದು ಒಂದೇ ಎಂಬ ಅದ್ವಿತೀಯ ವಸ್ತು. ಎರಡನೆಯದು ಏನೂ ಇಲ್ಲ ಎಂಬುದನ್ನು ಪ್ರತಿಪಾದಿಸುತ್ತದೆ ಅದ್ವೈತ ಸಿದ್ಧಾಂತ. ಇದನ್ನೇ ಶ್ರೀ ಶಂಕರರು ನಿರೂಪಿಸಿದ್ದಾರೆ. ಈಶ್ವರನು ಸೃಷ್ಟಿಸಿರುವ ಈ ಜಗತ್ತು ಸತ್ಯವೆಂಬಂತೆ ತೋರಿದರೂ ಅದು ಸತ್ಯವಲ್ಲ. ನಿಜವಾದ ಸತ್ಯವನ್ನು ಬ್ರಹ್ಮಜ್ಞಾನವು ತಿಳಿಸಿಕೊಡುತ್ತದೆ ಎನ್ನುವುದು ಅದರ ತೀರಾ ಸರಳ ವ್ಯಾಖ್ಯಾನ.

ನಾಳೆ ಕೆಜಿ ಕೊಪ್ಪಲು ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಅದ್ಧೂರಿ ಜೀರ್ಣೋದ್ಧಾರಕ್ಕೆ ಶಂಕುಸ್ಥಾಪನೆ



ಕೆ.ಹರೀಶ್ ಗೌಡ

ಮೈಸೂರು,ನ.15(ಪಿಎಂ)– ಕನ್ನೇಗೌಡನಕೊಪ್ಪಲಿನ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಹಾಗೂ ಅದರ ಪರಿವಾರ ದೇವಾಲಯಗಳ ಜೀರ್ಣೋದ್ಧಾರ ಕಾಮಗಾರಿಯ ಶಂಕುಸ್ಥಾಪನೆಯನ್ನು ನ.17ರಂದು ಬೆಳಗ್ಗೆ 10.03ರ ಧನುರ್ ಲಗ್ನ ಅಮೃತ ಘಳಿಗೆಯಲ್ಲಿ ಹಮ್ಮಿಕೊಳ್ಳಲಾಗಿದೆ.





ದೇವಸ್ಥಾನದ ಜೀರ್ಣೋದ್ಧಾರದ ನೀಲನಕ್ಷೆಯ ಚಿತ್ರಗಳು.

ಶ್ರೀ ಶಂಕರಾಚಾರ್ಯ ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿಯವರ ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೂ ಆದ ಚಾಮರಾಜ ಕ್ಷೇತ್ರ ಶಾಸಕ ಕೆ.ಹರೀಶ್ ಗೌಡ ಹಾಗೂ ಮಂಡಳಿಯ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನೇಗೌಡನಕೊಪ್ಪಲಿನಲ್ಲಿ ನಮ್ಮ ಪೂರ್ವಿಕರು ಶತಮಾನಗಳಿಂದ ಶ್ರೀ ಚಂದ್ರ ಮೌಳೇಶ್ವರಸ್ವಾಮಿ ಹಾಗೂ ಪಾರ್ವತಿ ದೇವಿಯವರ ದೇವಸ್ಥಾನವನ್ನು ನಿರ್ಮಿಸಿ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಬಂದಿದ್ದು, ಹಾಲಿ ಸುಮಾರು 60 ವರ್ಷಗಳ ಪುರಾತನ ದೇವಸ್ಥಾನವನ್ನು ದೇವಸ್ಥಾನದ ಟ್ರಸ್ಟ್ ಮತ್ತು ಸಮಸ್ತ ಭಕ್ತಾದಿಗಳ ವತಿಯಿಂದ ಜೀರ್ಣೋದ್ಧಾರಗೊಳಿಸಿ, ಬಿಳಿ ಶಿಲೆಗಳಿಂದ ಭವ್ಯವಾಗಿ ಶಾಸ್ತ್ರೋಕ್ತವಾಗಿ ಪುನರ್ ನಿರ್ಮಿಸಲು ಸಂಕಲ್ಪ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಸಾಮೂಹಿಕ ಮಂತ್ರಪಠಣೆ

ಮೈಸೂರು,ನ.15– ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ 2026ನೇ ಸಾಲಿನ ನೂತನ ಕ್ಯಾಲೆಂಡರ್ ವರ್ಷದ ಪ್ರಯುಕ್ತ ಜ.2ರಂದು ಅಂದಾಜು 10,000 ಜನರ ಸಾಮೂಹಿಕ ಮತ್ತು ಲಲಿತ ಸಹಸ್ರನಾಮವನ್ನು 11 ಬಾರಿ ಪಠಿಸಲು ಪ್ರಾಧಿಕಾರವು ನಿರ್ಧರಿಸಿದ್ದು, ಆಸಕ್ತ ಭಕ್ತಾದಿಗಳು ಪ್ರಾಧಿಕಾರದ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ನೇಮಕ



ಮೈಸೂರು: ಮೈಸೂರಿನ ಯುವ ಕಾಂಗ್ರೆಸ್ ಮುಖಂಡ ವಿನೋದ್ ರಾಜ್ ಅವರನ್ನು ಮಂಡ್ಯ, ಮೈಸೂರು ನಗರ, ಮೈಸೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿಯನ್ನಾಗಿ ನೇಮಕ ಮಾಡಲಾಗಿದೆ.

ಗಂಗೋತ್ರಿ ಹಾಸ್ಟೆಲ್‌ಗಳಲ್ಲಿ ಮೂಲ ಸೌಲಭ್ಯಕ್ಕೆ ಧರಣಿ

ಮೈಸೂರು,ನ.15(ಪಿಎಂ)– ಮೈಸೂರು ವಿವಿಯ ಮಾನಸ ಗಂಗೋತ್ರಿ ಪುರುಷರ ಹಾಸ್ಟೆಲ್‌ಗಳಲ್ಲಿ ಸಮರ್ಪಕ ಮೂಲ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಹಾಸ್ಟೆಲ್ ವಿದ್ಯಾರ್ಥಿಗಳು ಶನಿವಾರ ಪ್ರತಿಭಟನೆ ನಡೆಸಿದರು.

ಮಾನಸ ಗಂಗೋತ್ರಿಯ ಕ್ಲಾಕ್ ಟವರ್ ಬಳಿ ಬಕೆಟ್, ಜಗ್ಗು, ಚಾಪೆ, ಬೆಡ್‌ಶೀಟ್ ಹಾಗೂ ದಿಂಬು ಇಟ್ಟುಕೊಂಡು ವಿನೂತನ ರೀತಿ ಪ್ರತಿಭಟನೆ ನಡೆಸಿ, ವಿವಿ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹಾಸ್ಟೆಲ್‌ಗಳಲ್ಲಿ ಹಲವು ಶೌಚಾಲಯಗಳಿಗೆ ಬಾಗಿಲುಗಳೇ ಇಲ್ಲವಾಗಿದ್ದು, ಕೆಲವಕ್ಕೆ ಬಾಗಿಲಿದ್ದರೂ ಅವುಗಳ ಚಿಲಕವೇ ಇಲ್ಲ. ಮೂತ್ರಾಲಯದ ಕೊಠಡಿಗಳು ದುರ್ವಾಸನೆಯಿಂದ ಕೂಡಿದ್ದು, ಅಶುಚಿತ್ವ ತಾಂಡವವಾಡುತ್ತಿದೆ. ಬಿಸಿ ನೀರಿಗಾಗಿ ಅಳವಡಿಸಿರುವ ಗೀಸರ್‌ಗಳು ಕೆಟ್ಟಿದ್ದು, ಕುಡಿಯುವ ನೀರಿನ ಟ್ಯಾಂಕ್‌ಗಳು ಹಾಳಾಗಿ ಹೋಗಿವೆ ಎಂದು ದೂರಿದರು.



ಮಾನಸ ಗಂಗೋತ್ರಿಯ ಕ್ಲಾಕ್ ಟವರ್ ಬಳಿ ವಿದ್ಯಾರ್ಥಿಗಳು ಶನಿವಾರ ಪ್ರತಿಭಟನೆ ನಡೆಸಿದರು.

ಹಾಸ್ಟೆಲ್‌ಗಳಲ್ಲಿ ಶೌಚಾಲಯಗಳನ್ನು ಶುಚಿಗೊಳಿಸಬೇಕು. ಗೀಸರ್‌ಗಳನ್ನು ದುರಸ್ತಿಗೊಳಿಸಬೇಕು. ಉತ್ತಮ ಊಟದ ವ್ಯವಸ್ಥೆ ಕಲ್ಪಿಸಬೇಕು. ಮಾನಸ ಗಂಗೋತ್ರಿ ಆವರಣದ ವಿದ್ಯುತ್ ದೀಪಗಳು ಕೆಟ್ಟಿದ್ದು, ಕೂಡಲೇ ಅವುಗಳನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸಮಸ್ಯೆಗಳನ್ನು ಪರಿಹರಿಸುವಂತೆ ಕಳೆದ ಎರಡು ತಿಂಗಳ ಹಿಂದೆಯೇ ಮನವಿ ಸಲ್ಲಿಸಿದ್ದೇವೆ. ಆದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ಕಿಡಿಕಾರಿದರು. ವಿವಿ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕ ಡಾ.ಗುರುಸಿದ್ದಯ್ಯ ಸ್ಥಳಕ್ಕೆ ಭೇಟಿ ನೀಡಿ ಆದಷ್ಟು ಶೀಘ್ರ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ಕೈಬಿಡಲಾಯಿತು.

ಹಾಸ್ಟೆಲ್ ವಿದ್ಯಾರ್ಥಿಗಳಾದ ಗೌತಮ್ ಗುಂಡ್ಲುಪೇಟೆ, ಕೃಷ್ಣಮೂರ್ತಿ ಗಣಿಗನೂರು, ನಾಗೇಂದ್ರ, ಉಮೇಶ್, ಸತೀಶ್, ಚೇತು, ಪ್ರದೀಪ್ ಮತ್ತಿತರರ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಭಾನುವಾರ 16 ನವೆಂಬರ್ 2025

ಆರೋಗ್ಯಕರ ಜೀವನಶೈಲಿ ಅನುಸರಿಸುವುದು ಅಗತ್ಯ

●ಸಂಸದರ ಬ್ಯಾಡ್ಮಿಂಟನ್ ಟೂರ್ನಿಗೆ ಚಾಲನೆ ನೀಡಿ ಸಂಸದ ಯದುವೀರ್ ಒಡೆಯರ್ ಅಭಿಮತ ●ಮೈಸೂರು, ಇತರೆ ಜಿಲ್ಲೆಯ 400ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ

ಮೈಸೂರು,ನ.15(ಪಿಎಂ)- ಇಡೀ ದೇಶವನ್ನು ಆರೋಗ್ಯವಾಗಿ ಹಾಗೂ ಎಲ್ಲರೂ ಚಟುವಟಿಕೆಯಿಂದ ಇರಬೇಕೆಂಬ ನಿಟ್ಟಿನಲ್ಲಿ ನಮ್ಮ ಕೇಂದ್ರ ಬಿಜೆಪಿ ಸರ್ಕಾರ ಫಿಟ್ ಇಂಡಿಯಾ ಯೋಜನೆ ಜಾರಿಗೆ ತಂದಿದ್ದು, ಈ ನಿಟ್ಟಿನಲ್ಲಿ ಎಲ್ಲರೂ ಆರೋಗ್ಯಕರ ಜೀವನ ಶೈಲಿ ಅನುಸರಿಸಬೇಕೆಂದು ಮೈಸೂರು-ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಬೋಗಾದಿ 2ನೇ ಹಂತದ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಸಂಸದರ ಬ್ಯಾಡ್ಮಿಂಟನ್ ಪಂದ್ಯಾವಳಿ'ಗೆ ಚಾಲನೆ ನೀಡಿ ಮಾತನಾಡಿದ ಅವರು, ಫಿಟ್ ಇಂಡಿಯಾವು ಕೇಂದ್ರ ಸರ್ಕಾರದ ಪ್ರಮುಖ ಅಭಿಯಾನವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ 2019ರ ಆಗಸ್ಟ್ 29ರಂದು ರಾಷ್ಟ್ರೀಯ ಕ್ರೀಡಾ ದಿನದಂದು ಈ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಅಭಿಯಾನದ ಭಾಗವಾಗಿ ಸಂಸದರ ಬ್ಯಾಡ್ಮಿಂಟನ್ ಟೂರ್ನಿ ಆಯೋಜಿಸಲಾಗಿದೆ ಎಂದರು.



'ಸಂಸದರ ಬ್ಯಾಡ್ಮಿಂಟನ್ ಪಂದ್ಯಾವಳಿ'ಗೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿದರು.

ಸಾರ್ವಜನಿಕರು ನಿತ್ಯ ದೈಹಿಕ ವ್ಯಾಯಾಮ ಮಾಡಬೇಕು. ಕನಿಷ್ಠ 30ರಿಂದ 60 ನಿಮಿಷ ವ್ಯಾಯಾಮ ಮಾಡಿದರೆ ಮಧುಮೇಹ, ಹೃದ್ರೋಗ ನಿಯಂತ್ರಿಸಬಹುದು. ಅದಕ್ಕಾಗಿ ಯುವಜನತೆ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಫಿಟ್‌ನೆಸ್‌ಗೆ ಹೆಚ್ಚು ಆದ್ಯತೆ ನೀಡಬೇಕು. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಫಿಟ್‌ನೆಸ್ ಕ್ಲಬ್‌ಗಳು, ಯೋಗ ಶಿಬಿರಗಳು, ಸೈಕ್ಲಿಂಗ್, ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಎಪಿಎನ್ ಪ್ರಾಪರ್ಟೀಸ್ ವ್ಯವಸ್ಥಾಪಕ ಪಾಲುದಾರ ಎ.ಪಿ.ನಾಗೇಶ್ ಮಾತನಾಡಿ, ಫಿಟ್ ಇಂಡಿಯಾ ಅಭಿಯಾನದಡಿ ದೇಶದಾದ್ಯಂತ ಪ್ರಧಾನಿ ನರೇಂದ್ರ ಮೋದಿ ಸಲಹೆಯಂತೆ ಫ್ರೀಡಮ್ ರನ್, ಫಿಟ್ ಇಂಡಿಯಾ ಸೈಕ್ಲೋಥಾನ್, ಫಿಟ್ ಇಂಡಿಯಾ ಸ್ಕೂಲ್ ಸರ್ಟಿಫಿಕೇಶನ್, ಫಿಟ್ ಇಂಡಿಯಾ ಓಟ, ಕಸ ಸಂಗ್ರಹಿಸುವ ಚಟುವಟಿಕೆ, ಯೋಗ, ಆಯುಷ್ ಸಂಯೋಜನೆ ಕಾರ್ಯಕ್ರಮ, ಫಿಟ್ ಇಂಡಿಯಾ ಡೈಲಾಗ್ ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇದರಿಂದ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತಲಿನ ನಗರಗಳ ಸುಮಾರು 400ಕ್ಕೂ ಹೆಚ್ಚು ಮಂದಿ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾಗವಹಿಸಿದ್ದರು. ಉದ್ಯಮಿ ರಾಜೀವ್ ಕುಮಾರ್, ಪ್ರಸಿದ್ಧಿ ರವಿ, ಎಂ.ನಾಗರಾಜ್, ಜೈನ್ ಅಶೋಕ್, ಪಿ.ರೋಹಿತ್ ಹಾಗೂ ಇತರರು ಹಾಜರಿದ್ದರು.

ಮೈಸೂರು ಬಿವಿಬಿಯಲ್ಲಿ ದಾಸರ ಪದಗಳ ಗಾಯನ ಕಾರ್ಯಕ್ರಮ



ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನ (ಬಿವಿಬಿ) ಸಭಾಂಗಣದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು-ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ 159ನೇ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ಶನಿವಾರ ದಾಸರ ಪದಗಳ ಗಾಯನ ಕಾರ್ಯಕ್ರಮ ನಡೆಯಿತು. ವಿದ್ವಾನ್ ಪುತ್ತೂರು ನರಸಿಂಹ ನಾಯಕ್ ಗಾಯನ ಸಾದರಪಡಿಸಿದರು. ಇವರಿಗೆ ಪಕ್ಕವಾದ್ಯದಲ್ಲಿ ರಾಘವೇಂದ್ರ ಜೋಷಿ (ತಬಲ), ಗಣೇಶ್ ಭಟ್ (ಕೀಬೋರ್ಡ್), ವೆಂಕಟೇಶ್ ಪುರೋಹಿತ್ (ಮಂಜಿರ) ಸಹಕಾರ ನೀಡಿದರು. ಮತ್ತೊಂದು ಚಿತ್ರದಲ್ಲಿ ಇದಕ್ಕೂ ಮುನ್ನ ಗಣ್ಯರು ಕಾರ್ಯಕ್ರಮ ಉದ್ಘಾಟಿಸಿದರು. (ಎಡದಿಂದ) ಬಿವಿಬಿ ಮೈಸೂರು ಕೇಂದ್ರದ ಕಾರ್ಯಕಾರಿ ಸಮಿತಿ ಸದಸ್ಯ ಗಂಗಾಧರ್, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯೆ ಗಾಯತ್ರಿ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಅಧ್ಯಕ್ಷ ಡಾ.ಸಿ.ನಾಗಣ್ಣ, ವಿದ್ವಾನ್ ಪುತ್ತೂರು ನರಸಿಂಹ ನಾಯಕ್, ಬಿವಿಬಿ ಮೈಸೂರು ಕೇಂದ್ರದ ಗೌರವ ಖಜಾಂಚಿ ಎ.ಟಿ.ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯ ಕೃಷ್ಣೇಗೌಡ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮುಡಾ ಭೂಸ್ವಾಧೀನ ಪ್ರಕರಣ: ಏಳು ಅಧಿಕಾರಿಗಳ ಕರ್ತವ್ಯ ಲೋಪ

ವಿಚಾರಣೆಗೆ ಅನುಮತಿ ನೀಡುವಂತೆ ಲೋಕಾಯುಕ್ತ ಎಸ್ಪಿಯಿಂದ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ

ಮೈಸೂರು, ನ.15(ಬಿಎಲ್‌ಯು)- ಮುಡಾ ಭೂ ಸ್ವಾಧೀನ ಪ್ರಕರಣ ಸಂಬಂಧ 2016 ರಿಂದ 2024 ರವರೆಗೆ ಕರ್ತವ್ಯ ಲೋಪ ಎಸಗಿರುವ ಏಳು ಅಧಿಕಾರಿಗಳನ್ನು ತನಿಖೆಗೊಳಪಡಿಸಲು ಅನುಮತಿ ನೀಡುವಂತೆ ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರು ಲೋಕಾಯುಕ್ತ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ ಬರೆದು ಅನುಮತಿ ಕೋರಿದ್ದಾರೆ.


ಉದೇಶ್

ಬೆಲವತ್ತ ಗ್ರಾಮದ ಸರ್ವೆ ನಂಬರ್ 20/1, ಕ್ಯಾತಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 192, ಹೆಬ್ಬಾಳು ಗ್ರಾಮದ ಸರ್ವೆ ನಂಬರ್ 88/2, ಕೆಸರೆ ಗ್ರಾಮದ ಸರ್ವೆ ನಂಬರ್ 648 ಹಾಗೂ ಈರನಗೆರೆ ಗ್ರಾಮದ ಸರ್ವೆ ನಂಬರ್ 14/ಬಿ ಗೆ ಸಂಬಂಧಿಸಿದಂತೆ ಕಡತಗಳ ದಾಖಲಾತಿಗಳನ್ನು ಪರಿಶೀಲನೆ ನಡೆಸಿದ್ದೇನೆ ಎಂದು ಭೂಸ್ವಾಧೀನ ಪ್ರಕರಣದ ಬಗ್ಗೆ ಪತ್ರದಲ್ಲಿ ಮಾಹಿತಿ ನೀಡಿದ್ದಾರೆ.

ಜಮೀನು ಮಾಲೀಕರೊಂದಿಗೆ ಮಾಡಿಕೊಂಡಿರುವ ಪರಸ್ಪರ ಒಪ್ಪಂದದ ಪಟ್ಟಿ, ಯುಎಲ್‌ಪಿ ಪಟ್ಟಿ ಹಾಗೂ ಪರಿಹಾರ ಪಾವತಿ ವಹಿಗಳ ಪ್ರತಿಗಳನ್ನು ದೃಢೀಕರಿಸಿ ಪ್ರತಿ ಒದಗಿಸುವಂತೆ ಕೋರಲಾಗಿದೆ ಎಂದು ಹೇಳಿದ್ದಾರೆ.

ಈ ಪ್ರಕರಣ ಸಂಬಂಧ ಮುಡಾದಲ್ಲಿ 2016 ರಿಂದ 2024 ರವರೆಗೆ ಕರ್ತವ್ಯ ನಿರ್ವಹಿಸಿದ 7 ಅಧಿಕಾರಿಗಳ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ಕೈಗೊಳ್ಳಲು ಅನುಮತಿ ನೀಡುವಂತೆ ಕೋರಿದ್ದಾರೆ.

ಮುಡಾ ಭೂ ಮಾಪಕರಾದ ಕಾವೇರಿಗೌಡ, ಎನ್.ಟಿ.ಹನುಮೇಗೌಡ, ವಿಶೇಷ ಭೂಸ್ವಾಧೀನಾಧಿಕಾರಿ ವಿಷ್ಣುವರ್ಧನ ರೆಡ್ಡಿ, ವಿಷಯ ನಿರ್ವಾಹಕ ದರ್ಶನ್, ವ್ಯವಸ್ಥಾಪಕಿ ಶೃತಿ, ಅಧೀಕ್ಷಕ ಇಂಜಿನಿಯರ್ ಚನ್ನಕೇಶವ, ಎಸ್‌ಡಿಎ ಸಚಿನ್ ಅವರ ಕರ್ತವ್ಯ ಲೋಪದ ಬಗ್ಗೆ ವಿಚಾರಣೆ ನಡೆಸುವಂತೆ ಲೋಕಾಯುಕ್ತ ಪೊಲೀಸ್ ಮಹಾ ನಿರ್ದೇಶಕರಿಗೆ ಲೋಕಾಯುಕ್ತ ಎಸ್ಪಿ ಉದೇಶ್ ಅವರು ಪತ್ರ ಬರೆದು ಅನುಮತಿ ಕೋರಿದ್ದಾರೆ.

ಈಗ ಲೋಕಾಯುಕ್ತ ಪೊಲೀಸ್ ಮಹಾ ನಿರ್ದೇಶಕರು ಸರ್ಕಾರದ ಅನುಮತಿ ಕೋರಲಿದ್ದಾರೆ. ತರುವಾಯ ಸರ್ಕಾರದ ತೀರ್ಮಾನದ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ.

ಉಗ್ರರೊಂದಿಗೆ ನಂಟು; ಪಶ್ಚಿಮ ಬಂಗಾಳದಲ್ಲಿ ಮತ್ತೊಬ್ಬ ವೈದ್ಯನ ಬಂಧನ

ನವದೆಹಲಿ: ದೆಹಲಿ ಕಾರು ಸ್ಫೋಟ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ, ಪಶ್ಚಿಮ ಬಂಗಾಳದ ಅಲ್ ಫಲಾಹ್ ವಿಶ್ವವಿದ್ಯಾಲಯದ ಯುವ ವೈದ್ಯರೊಬ್ಬರನ್ನು ಬಂಧಿಸಿದೆ. ಫರಿದಾಬಾದ್ ವಿಶ್ವವಿದ್ಯಾಲಯದಿಂದ 2024ರಲ್ಲಿ ಎಂಬಿಬಿಎಸ್ ಪದವಿ ಪಡೆದ ಝುನಿಶಾರ್ ಆಲಂ ಎಂಬ ವೈದ್ಯರನ್ನು ಎನ್‌ಐಎ ಶುಕ್ರವಾರ ಬಂಧಿಸಿದೆ. ಎನ್‌ಐಎ, ದೆಹಲಿ ಪೊಲೀಸರೊಂದಿಗೆ ಪಶ್ಚಿಮ ಬಂಗಾಳದ ಉತ್ತರ ದಿನಾಜ್‌ಪುರ ಜಿಲ್ಲೆಯ ದಲ್ಖೋಲಾ ಪ್ರದೇಶದ ಸೂರ್ಯಾಪುರ್ ಮಾರುಕಟ್ಟೆಯಲ್ಲಿ ಝುನಿಶಾರ್ ಆಲಂನನ್ನು ಬಂಧಿಸಿದೆ.

ಮಾನಸ ಗಂಗೋತ್ರಿಯಲ್ಲಿ ಸಾಲುಮರದ ತಿಮ್ಮಕ್ಕನಿಗೆ ನುಡಿನಮನ

ವೃಕ್ಷಮಾತೆ ಸ್ಮರಣಾರ್ಥ 114 ಗಿಡಗಳ ನೆಡುವ ಚಿಂತನೆ


ಕಲಾ ನಿಕಾಯದ ಡೀನ್ ಪ್ರೊ.ಎಂ.ಎಸ್.ಶೇಖರ್ ಮಾತನಾಡಿದರು

> ಮಾನಸಗಂಗೋತ್ರಿ ಆವರಣದಲ್ಲಿ ಸಾಲುಮರದ ತಿಮ್ಮಕ್ಕ ಹೆಸರಲ್ಲಿ ಪ್ರಾಧ್ಯಾಪಕರೂ ಗಿಡಗಳನ್ನು ನೆಡಬೇಕು. ಸರ್ಕಾರ ಅವರ ಹೆಸರನ್ನು ಶಾಶ್ವತಗೊಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಬೇಕು. ಮೈಸೂರು ವಿವಿಯಲ್ಲಿ ಸಾಲುಮರದ ತಿಮ್ಮಕ್ಕ ಅವರ ಹೆಸರಲ್ಲಿ ಅಧ್ಯಯನ ಪೀಠ ಸ್ಥಾಪಿಸಬೇಕು.
> -ಪ್ರೊ. ಎಂ.ನಂಜಯ್ಯ ಹೊಂಗನೂರು, ಪ್ರಸಾರಾಂಗ ನಿರ್ದೇಶಕರು.

ಮೈಸೂರು, ನ15(ವಿವಿಹೆಚ್)- ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯ ಬುದ್ಧ ಉದ್ಯಾವನದ ಬಳಿ ಮೈಸೂರು ವಿವಿಯ ಸಂಶೋಧಕರ ಸಂಘ, ಕರ್ನಾಟಕ ಜಾನಪದ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಅಂಗಳ ಸಾಹಿತ್ಯ ಬಳಗದ ಸಹಯೋಗದಲ್ಲಿ ಶನಿವಾರ ವೃಕ್ಷಮಾತೆ ಪದ್ಮಶ್ರೀ ಪುರಸ್ಕೃತರಾದ ಸಾಲು ಮರದ ತಿಮ್ಮಕ್ಕ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಮೈಸೂರು ವಿವಿಯ ಕಲಾ ನಿಕಾಯದ ಡೀನ್ ಪ್ರೊ.ಎಂ.ಎಸ್.ಶೇಖರ್ ಮಾತನಾಡಿ, ಸಾಲುಮರದ ತಿಮ್ಮಕ್ಕ 114 ವರ್ಷ ಬದುಕಿದ್ದರು. ಅವರ ಸ್ಮರಣಾರ್ಥ ನಾವು ಮೈಸೂರು ವಿವಿ ಆವರಣದಲ್ಲಿ 114 ಗಿಡಗಳನ್ನು ನೆಡುವ ಕೆಲಸ ಮಾಡಬೇಕಿದೆ. ಇದು ವಿಶ್ವವಿದ್ಯಾನಿಲಯದ ಘನತೆ ಹೆಚ್ಚಿಸಲಿದೆ ಎಂದರು.

ಪ್ರಮುಖ ಕಾಡುಗಳಿಗೆ ಸಾಲುಮರದ ತಿಮ್ಮಕ್ಕರ ಹೆಸರನ್ನು ನಾಮಕರಣ ಮಾಡಬೇಕು. ಗಿಡ ನೆಡಲು ದುಡ್ಡಿನ ಸಮಸ್ಯೆ ಇಲ್ಲ. ಮನಸ್ಸಿನ ಸಮಸ್ಯೆ ಇದೆ. ಮನಸ್ಸಿಟ್ಟು ಇಂತಹ ಕೆಲಸ ಮಾಡಬೇಕಿದೆ. ಜಗತ್ತಿಗೆ ಮಾದರಿಯಾದ ವ್ಯಕ್ತಿತ್ವ ಆಗಿದ್ದು, ಅವರ ಹೆಸರನ್ನು ಶಾಶ್ವತಗೊಳಿಸುವ ಕೆಲಸ ವಾಗಬೇಕು ಎಂದು ಹೇಳಿದರು.

ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಪ್ರೊ.ಗುರುಸಿದ್ದಯ್ಯ ಮಾತನಾಡಿ, ಸಾಲು ಮರದ ತಿಮ್ಮಕ್ಕ ಮಕ್ಕಳಂತೆ ಮರಗಳನ್ನು ಕಾಪಾಡಿದ ರೀತಿ ಎಲ್ಲರಿಗೂ ಮಾದರಿಯಾಗಬೇಕಿದೆ ಎಂದರು.

ಮೈಸೂರು ವಿವಿ ಆಡಳಿತಾಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ ಮಾತನಾಡಿದರು. ಕವಯತ್ರಿ ಅಮ್ಮಯ್ಯ, ಪ್ರಗತಿಪರ ಚಿಂತಕರಾದ ಚನ್ನಕೇಶವಮೂರ್ತಿ, ರಂಗಸ್ವಾಮಿ, ಉಪನ್ಯಾಸಕರಾದ ಡಾ.ಎಚ್.ಪಿ.ಮಂಜು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕರ್ನಾಟಕ ಜಾನಪದ ಸಂಶೋಧಕರ ಸಂಘದ ಅಧ್ಯಕ್ಷ ಕಲ್ಲಹಳ್ಳಿ ಕುಮಾರ್, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ, ಜಂಟಿ ಕಾರ್ಯಾಧ್ಯಕ್ಷ ಜಗದೀಶ್ ಮಹದೇವಯ್ಯ, ಅಭಿಷೇಕ್ ಪಾಳ್ಯಗಾರ್, ಸಂಘಟನಾ ಸಂಚಾಲಕರಾದ ಪ್ರೇಮ್ ಕುಮಾರ್, ರೋಹನ್ ಹೊಂಗನೂರು, ಮಾಧ್ಯಮ ಸಲಹೆಗಾರ ಎಚ್.ಎಸ್.ಶಂಕರ್, ಖಜಾಂಚಿ ನಟರಾಜ್ ಬೊಮ್ಮಲಪುರ, ಸಂಶೋಧನಾ ವಿದ್ಯಾರ್ಥಿಗಳಾದ ಪಿ.ನಿಂಗರಾಜು, ಸಿದ್ದೇಶ, ಗೋಪಾಲ್, ಪ್ರಮೋದ್, ಕಿರಣ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪುನೀತ್ ಆಲನಹಳ್ಳಿ, ಅಂಗಳ ಸಾಹಿತ್ಯ ಬಳಗದ ಸದಸ್ಯ ನವೀನ್ ಜೀವಿ, ಮಣಿಕಂಠ, ಗೌತಮ್, ಮನೋಹರ್, ಮುತ್ತುರಾಜ್, ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಜರಿದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ


ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ನ.15(ವಿವಿಹೆಚ್)- ನನ್ನ 60 ವರ್ಷಗಳ ಶೈಕ್ಷಣಿಕ ಸೇವೆ ಪರಿಗಣಿಸಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ ಎಂದು ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಸಂತಸ ವ್ಯಕ್ತಪಡಿಸಿದರು.

ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ವತಿಯಿಂದ ನಗರದ ಜೆಎಲ್‌ಬಿ ರಸ್ತೆಯ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನ ಎಸ್‌ಪಿ ಭಟ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ-2025 ರಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕನಕಪುರ ರೂರಲ್ ಕಾಲೇಜಿನಿಂದ ನನ್ನ ಶೈಕ್ಷಣಿಕ ಸೇವೆ ಆರಂಭಿಸಿ, ದೆಹಲಿ ವರೆಗೂ ಕೆಲಸ ಮಾಡಿದ್ದೇನೆ. ದೆಹಲಿ ಮಟ್ಟದಲ್ಲಿ ಕನ್ನಡಕ್ಕೆ ಸಾಕಷ್ಟು ಉತ್ತೇಜನ ನೀಡಿದ್ದೇನೆ. ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಕಾರ್ಯಕ್ರಮಗಳನ್ನೂ ನೀಡಿದ್ದೇನೆ ಎಂದರು.

2003ರಲ್ಲಿ ನಿವೃತ್ತಿ ಹೊಂದಿದ ನನಗೆ ಈವರೆಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿರಲಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿಯೇ ನನ್ನ ಸಾಧನೆ ಕುರಿತು ಮಾತನಾಡಿದರು ಎಂದು ಅವರು ನೆನೆದರು.

ನಾವೆಲ್ಲರೂ ಸಂಭ್ರಮದಿಂದ ಕನ್ನಡದ ಬಗ್ಗೆ ಮಾತನಾಡುತ್ತೇವೆ, ಜೈಕಾರ ಹಾಕುತ್ತೇವೆ. ಆದರೆ ಕನ್ನಡಕ್ಕೆ ಸಂಬಂಧಪಟ್ಟ ವಿಷಯಗಳು ಬಂದಾಗ ಅದು ನೌಕರಿ, ಬ್ಯಾಂಕ್ ಇತರೆ ವಿಷಯಗಳಲ್ಲಿ ಕನ್ನಡತನ ಕಾಣುವುದಿಲ್ಲ. ಈ ಬಗ್ಗೆ ನಾವು ಕಾರ್ಯಕ್ರಮಗಳನ್ನು ಆಯೋಜಿಸಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದೆವು ಎಂದು ಇದೇ ವೇಳೆ ಸ್ಮರಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ರಾಜ್ಯ ಸರ್ಕಾರದಿಂದ ಕೊಡಮಾಡುವ 'ಕರ್ನಾಟಕ ರತ್ನ' ಪ್ರಶಸ್ತಿ ಮೊದಲಿದ್ದರೆ ರಾಜ್ಯದ ಎರಡನೇ ಅತ್ಯುನ್ನತ ಪ್ರಶಸ್ತಿ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ'ಯಾಗಿದೆ. ಈ ಪ್ರಶಸ್ತಿಯನ್ನು ಮೈಸೂರು ಜನರ ಪರವಾಗಿ ಸ್ವೀಕರಿಸಿದ್ದೇನೆ ಎಂದು ತಮಗೆ ಬಂದ ಪ್ರಶಸ್ತಿಯನ್ನು ಮೈಸೂರು ಜನತೆಗೆ ಅರ್ಪಿಸಿದರು.

ಈ ಬಾರಿ ಬಹಳ ಪಾರದರ್ಶಕವಾಗಿ ಪ್ರಶಸ್ತಿ ಪುರಸ್ಕೃತರ ಆಯ್ಕೆ ನಡೆದಿದೆ. ಮುಖ್ಯಮಂತ್ರಿಗಳು ಮೂರು ಬಾರಿ ಸಭೆ ಮಾಡಿ ಆಯ್ಕೆ ಮಾಡಿರುವುದು ಇದೇ ಮೊದಲು. ಸಮಾಜಕ್ಕೆ ಪೂರಕವಾದ ಕೆಲಸಗಳನ್ನು ಮಾಡಿದಾಗ ಇಂತಹ ಅತ್ಯುನ್ನತ ಪ್ರಶಸ್ತಿಗಳು ಹುಡುಕಿಕೊಂಡು ಬರುತ್ತವೆ ಎಂದು ತಿಳಿಸಿದರು.

ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷ ಎಚ್.ಎಸ್.ಸುರೇಶ್ ಬಾಬು, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಗೌರವ ಕಾರ್ಯದರ್ಶಿ ಎಂ.ಕೆ. ನಂಜಯ್ಯ, ಸಂಚಾಲಕರಾದ ಎನ್.ಎಸ್. ಮಹದೇವಸ್ವಾಮಿ, ಶಿವಪ್ರಸಾದ್, ಚೌಡೇಗೌಡ, ಅನಿತಾ ವೆಂಕಟೇಶ್, ಶಂಭುಲಿಂಗೇಗೌಡ ಉಪಸ್ಥಿತರಿದ್ದರು.

ಹಳೇ ಬೇರು ಹೊಸಚಿಗುರು ಕಲ್ಚರಲ್ ಟ್ರಸ್ಟ್ ತಂಡದಿಂದ ಗೀತ ಗಾಯನ ನಡೆಯಿತು. ಕಾರ್ಯಕ್ರಮ ಆರಂಭಕ್ಕೂ ಮುನ್ನಾ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ನಿಧನದ ಗೌರವಾರ್ಥ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕೈಗಾರಿಕಾ ಕ್ಲಸ್ಟರ್‌ಗಳ ಸದಸ್ಯರಿಗೆ ಎರಡು ದಿನ ತರಬೇತಿ

ಮೈಸೂರು,ನ.15- ನವೆಂಬರ್ 12 ಮತ್ತು 13 ರಂದು RAMP ಯೋಜನೆಯಡಿ ಕೈಗಾರಿಕಾ ಕ್ಲಸ್ಟರ್‌ಗಳ ಸದಸ್ಯರಿಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಹೆಬ್ಬಾಳ ಕೈಗಾರಿಕಾ ವಸಾಹತು ಉತ್ಪಾದಕರ ಸಂಘದ ಕಟ್ಟಡ, ಹೆಬ್ಬಾಳ, ಮೈಸೂರು ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸದರಿ ತರಬೇತಿ ಕಾರ್ಯಕ್ರಮದಲ್ಲಿ ಕ್ಲಸ್ಟರ್ ರಚನೆ, ನಿರ್ವಹಣೆ ಕುರಿತು ವೆಂಕಟೇಶ್ ಗೌಡ, ಸಮಾಲೋಚಕರು, ಟೆಕ್ಸಾಕ್, ಬೆಂಗಳೂರು, ಮೆ॥ ಹಿಡೆಲ್ ಬರ್ಗ್ ಘಟಕದ ಚಂದ್ರಶೇಖರ್ ಹಾಗೂ ಸರ್ಕಾರಿ ಪ್ರಿಂಟಿಂಗ್ ಟೆಕ್ನಾಲಜಿ ಸಂಸ್ಥೆ, ಬೆಂಗಳೂರು ಕಾಲೇಜಿನ ಬೋಧಕರು. ಕ್ಲಸ್ಟರ್ ಸದಸ್ಯರು ಆಯ್ಕೆ ಮಾಡಬಹುದಾದ ಇತ್ತೀಚಿನ ತಾಂತ್ರಿಕತೆಗಳ ಬಗ್ಗೆ ಹಾಗೂ ಯಂತ್ರೋಪಕರಣಗಳ ಬಗ್ಗೆ ಮಾಹಿತಿ ನೀಡಿದರು.

ಸದರಿ ಕಾರ್ಯಕ್ರಮವನ್ನು ನ.12 ರಂದು ಮೈಸೂರು ಎಂ.ಎಸ್.ಎಂ.ಇ ಕೌನ್ಸಿಲ್‌ನ ಕಾರ್ಯದರ್ಶಿ ಸುರೇಶ್ ಜೈನ್ ಉದ್ಘಾಟಿಸಿದರು. ಮೈಸೂರು ಪ.ಜಾ, ಪ.ವರ್ಗ ಉದ್ದಿಮೆದಾರ ಸಂಘದ ಅಧ್ಯಕ್ಷ ಮಂಜುನಾಥ, ಬೆಂಗಳೂರು ಟೆಕ್ಸಾಕ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಮೈಸೂರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕ ಸಿದ್ದರಾಜು ಉಪಸ್ಥಿತರಿದ್ದರು.

PUBLIC NOTICE

N. GOWRI SHANKAR, MBA., ML.,
Ms. SHEELA. M. R., B.A.L., LL.B.,
Ms. N. LAKSHMIDEVI, B.A.L., LL.B., &
Ms. PONNAMMA. M.T., B.A., LL.B.,
ADVOCATES

No: 46, Sumukha, 4th Cross, J.T.K Lay-out, 5th Stage, Besides R.M.P. Quarters, Kuvempunagar, Adi Chunchanagiri Road, Mysuru - 570 023, Karnataka
E-mail: ngsoffice@yahoo.com;
Mob. Ph: +91 988 699 4255. Tele-fax: 0821-4252028

Date: 12.11.2025

This is to notify the general public that my Client intends to purchase a Residential Site property bearing No. 101, situated at Dattagalli 2nd Stage, M- Block that is morefully described in the Schedule below, for the Valuable Consideration from its owner Sri. Chikkanna. K.N., S/o. Late. Nagaiah, Residing at D. No. 2547-A, New Kantharaja Urs Road, KG Koppal, Mysuru through his GPA holder Sri. M. Krishna, resident of EWS. D. No. 149, 13th Main Road, J- Block, Kanakadasa Nagar, Dattagalli 2nd Stage, Mysuru.

This is to further notify that if anybody has any objection in respect of the sale above they are hereby called upon to present personally at the address given below with proofs in Originals within 10 (Ten) days from the date of publication of this Notice (Office hours 6:15 Pm to 9:00 Pm- on Weekdays). In case of 'No Response' from any source my Client will deem it that there is no valid, tenable objections from any source & will proceed with the execution of registration of Sale Deed at his convenience. Any claim or objection whatsoever subsequent to the given timeline will not affect my Client's Right, Title, Interest & Possession of the same in any manner whatsoever.

SCHEDULE

A Residential vacant site bearing No. 101, situated at 2nd stage 'M' block (Vivekananda Nagar) Mysuru measuring East to west 9 Mts & North to South 12 Mts. Ad-measuring 108.00 Sq. Mts bounded on.

East by : Property bearing No. 102
West by : Property bearing No. 103
North by : Property bearing Nos. 140 & 141
South by : Road.

ಕೀವ್ ಮೇಲೆ ರಷ್ಯಾ ದಾಳಿ: 6 ಮಂದಿ ಸಾವು

ಕೀವ್: ಉಕ್ರೇನ್‌ನ ಕೀವ್ ಮೇಲೆ ರಷ್ಯಾ ನಡೆಸಿದ ಕ್ಷಿಪಣಿ ಮತ್ತು ಡ್ರೋನ್ ದಾಳಿಯಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ. ಗರ್ಭಿಣಿ ಸೇರಿದಂತೆ 35 ಮಂದಿ ಗಾಯಗೊಂಡಿದ್ದಾರೆ. ರಷ್ಯಾ ಕನಿಷ್ಠ 430 ಡ್ರೋನ್‌ಗಳು ಮತ್ತು 18 ಕ್ಷಿಪಣಿಗಳನ್ನು ಬಳಸಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ದಕ್ಷಿಣದಲ್ಲಿ ಒಡೆಸಾ ಮತ್ತು ಈಶಾನ್ಯದಲ್ಲಿ ಹಾರ್ಕಿವ್ ಗುರಿಯಾಗಿಸಿ ದಾಳಿ ನಡೆಸಿದ್ದು, ಹೆಚ್ಚಾಗಿ ಕೀವ್ ನಗರವನ್ನು ಗುರಿಯಾಗಿರಿಸಿಕೊಂಡಿತ್ತು. ಅಲ್ಲಿ ಡ್ರೋನ್‌ಗಳು ಮತ್ತು ಕ್ಷಿಪಣಿಗಳು ಎತ್ತರದ ವಸತಿ ಕಟ್ಟಡಗಳಿಗೆ ಡಿಕ್ಕಿ ಹೊಡೆದಿವೆ. ನಾಗರಿಕರಿಗೆ ಸಾಧ್ಯವಾದಷ್ಟು ಹಾನಿ ಉಂಟು ಮಾಡಲೆಂದೇ ವಿಶೇಷವಾಗಿ ಯೋಜಿಸಿದ ದಾಳಿಯಿದು ಎಂದು ಅವರು ಟೆಲಿಗ್ರಾಮ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಮೈಸೂರಿಗೂ ನಂದಿ ಧ್ವಜ ಪರಂಪರೆಗೂ ಅವಿನಾಭಾವ ಸಂಬಂಧವಿದೆ

ಸಂಸದ ಯದುವೀರ್ ಅಭಿಮತ

ಮೈಸೂರು, ನ.15(ಬಿಎಲ್‌ಯು)- ಮೈಸೂರಿಗೂ ಹಾಗೂ ನಂದಿ ಧ್ವಜ ಪರಂಪರೆಗೂ ಅವಿನಾಭಾವ ಸಂಬಂಧವಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದು ಅಭಿಪ್ರಾಯಪಟ್ಟರು.

ಮೈಸೂರಿನ ಬಸವೇಶ್ವರ ರಸ್ತೆಯ ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಸಂಘದ ಕಚೇರಿ ಮುಂಭಾಗ ಇಂದು ಶಿವಯೋಗಿ ಶ್ರೀ ಶಿವಪಾದಸ್ವಾಮಿ ಅವರ ಕಂಚಿನ ಪುತ್ಥಳಿ ಅನಾವರಣ ಮಾಡಿದ ನಂತರ ಮಾತನಾಡಿದ ಅವರು, ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಗೆ ಚಾಲನೆ ನೀಡುವ ಮುನ್ನ ನಂದಿ ಧ್ವಜ ಪೂಜೆ ಮಾಡಲಿದ್ದು, ಹಿಂದೂ ಧಾರ್ಮಿಕ ಪರಂಪರೆಯಲ್ಲಿ ನಂದಿ ಧ್ವಜಕ್ಕೆ ಮಹತ್ವವಿದೆ ಎಂದರು.

ಭಾರತದ ಸಾಂಸ್ಕೃತಿಕತೆ ಹಾಗೂ ಧಾರ್ಮಿಕತೆ ಬಿಂಬಿಸುವ ನಂದಿ ಧ್ವಜದ ಶ್ರೇಷ್ಠ ಪರಂಪರೆ ಮುಂದೆಯೂ ಉಳಿಯಬೇಕು ಎಂದು ಯದುವೀರ್ ಆಶಿಸಿದರು.


ಮೈಸೂರಿನ ಬಸವೇಶ್ವರ ರಸ್ತೆಯ ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಸಂಘದ ಕಚೇರಿ ಮುಂಭಾಗ ಶನಿವಾರ ಸಂಸದ ಯದುವೀರ್ ಅವರು ಶಿವಯೋಗಿ ಶ್ರೀ ಶಿವಪಾದಸ್ವಾಮಿ ಅವರ ಕಂಚಿನ ಪುತ್ಥಳಿ ಅನಾವರಣ ಮಾಡಿದರು.

ಮಠಗಳು ಭಾರತದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಯನ್ನು ಸಾರುತ್ತಾ ಆಧುನಿಕ ಭಾರತ ಕಟ್ಟುವ ಕೆಲಸ ಮಾಡುತ್ತಿದೆ. ಅಲ್ಲದೆ ಸಮಾಜದಲ್ಲಿ ಒಗ್ಗಟ್ಟು ಮೂಡಿಸುವ ಸಮಾಜಮುಖಿ ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ಬಸವಣ್ಣನವರು ಭಾರತ ಸಂಸ್ಕೃತಿಯ ಮೂಲ ತತ್ವವನ್ನು ವಚನದ ಮೂಲಕ ಜನರಿಗೆ ಮನದಟ್ಟು ಮಾಡಿದರು. ಈ ಮೂಲಕ ಭಾರತದ ಸಂಸ್ಕೃತಿ ಎಷ್ಟರ ಮಟ್ಟಿಗೆ ಮಹತ್ವ ಪಡೆದಿದೆ ಎಂಬ ಬಗ್ಗೆ ಅರಿವು ಮೂಡಿಸಿದರು ಎಂದು ಯದುವೀರ್ ಅಭಿಪ್ರಾಯಪಟ್ಟರು.

ಕುದೇರು ಮಠದ ಶ್ರೀ ಗುರುಶಾಂತಸ್ವಾಮಿ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ಬಸವ ಬಳಗಗಳ ಒಕ್ಕೂಟದ ಮಾಜಿ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್, ನಂದಿ ಧ್ವಜ ಸಂಘದ ಅಧ್ಯಕ್ಷ ಆರ್.ಅಂಕಯ್ಯ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಎ.ಎಂ.ಗುರುಸ್ವಾಮಿ, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸಪ್ಪ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಕೈಗಾರಿಕಾಭಿವೃದ್ಧಿಗೆ ಮುಂದಾಗಿರುವ ಕೇಂದ್ರ ಸಚಿವ ಕುಮಾರಸ್ವಾಮಿಗೆ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲ

ವಿಧಾನಪರಿಷತ್ ಸದಸ್ಯ ವಿವೇಕಾನಂದ ಗಂಭೀರ ಆರೋಪ


ವಿವೇಕಾನಂದ

ಮದ್ದೂರು: ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಮಹತ್ವಾಕಾಂಕ್ಷಿ ಯೋಜನೆಯನ್ನು ರೂಪಿಸಿದ್ದಾರೆ. ಆದರೆ, ರಾಜ್ಯ ಸರ್ಕಾರ ಅವರಿಗೆ ಯಾವುದೇ ಸೂಕ್ತ ಸಹಕಾರ ನೀಡುತ್ತಿಲ್ಲ ಎಂದು ವಿಧಾನಪರಿಷತ್ ಸದಸ್ಯ ವಿವೇಕಾನಂದ ಗಂಭೀರ ಆರೋಪ ಮಾಡಿದರು.

ಕೇಂದ್ರದ ಬೃಹತ್ ಕೈಗಾರಿಕಾ ಸಚಿವರಾಗಿ ರಾಜ್ಯದಲ್ಲೂ ಕೈಗಾರಿಕೆಗಳ ಸ್ಥಾಪನೆಗೆ ಮುಂದಾಗಿದ್ದಾರೆ. ಆದರೆ, ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ. ಹೀಗಾದರೆ ಕೈಗಾರಿಕೆಗಳನ್ನು ತರಲು ಎಲ್ಲಿ ಸಾಧ್ಯ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

ಜಿಲ್ಲೆಯ ಜನತೆಯ ಆಶೀರ್ವಾದದಿಂದ ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿದ್ದಾರೆ. ಹೀಗಾಗಿ ತಮ್ಮ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿಗೆ ಮುಂದಾಗಿರುವ ಹೆಚ್‌ಡಿಕೆ ಅವರು ಒಂದೇ ಬಾರಿಗೆ ರಾಜ್ಯಕ್ಕೆ 4500 ವಿದ್ಯುತ್ ಚಾಲಿತ ಬಸ್‌ಗಳನ್ನು ನೀಡಿದರು. ಆದರೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರುಗಳು ಅಭಿನಂದನೆ ಸಲ್ಲಿಸಲಿಲ್ಲ ಎಂದರು.

ಬೇರೆ ರಾಜ್ಯಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅಲ್ಲಿನ ಸರ್ಕಾರಗಳು ಹೆಚ್ಚಿನ ಆದ್ಯತೆ ನೀಡುತ್ತಿರುವ ಪರಿಣಾಮ ರಾಜ್ಯದಿಂದ ಬೃಹತ್ ಕೈಗಾರಿಕೆಗಳು ಬೇರೆ ರಾಜ್ಯಗಳತ್ತ ಮುಖ ಮಾಡುತ್ತಿವೆ. ರಾಜ್ಯಕ್ಕೆ ಕೈಗಾರಿಕೆಗಳು ಬಂದರೆ ಅದರ ಕ್ರೆಡಿಟ್ ಕುಮಾರಸ್ವಾಮಿ ಅವರಿಗೆ ಸಲ್ಲುತ್ತದೆ ಎಂಬ ಕೆಟ್ಟ ಆಲೋಚನೆಯಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳು ಸಹಕಾರ ನೀಡುತ್ತಿಲ್ಲ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಜಾಗ ನೀಡುವಂತೆ ಈಗಾಗಲೇ ಜಿಲ್ಲಾಡಳಿತಕ್ಕೆ ಕುಮಾರಸ್ವಾಮಿ ಅವರು ಪತ್ರ ವ್ಯವಹಾರ ಹಾಗೂ ದಿಶಾ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ. ಜಿಲ್ಲಾಧಿಕಾರಿಗಳು ಸಹ ಯಾವುದೇ ಜಾಗವನ್ನು ಗುರುತಿಸಿಲ್ಲ. ರಾಜ್ಯದಲ್ಲಿ ಕೇಂದ್ರದಿಂದ ಏನೇ ಕೆಲಸ ಆಗಬೇಕಿದ್ದರೂ ರಾಜ್ಯದ ಸಹಕಾರ ಬೇಕಿದೆ. ಮುಂದಿನ ದಿನಗಳಲ್ಲಿ ಸರ್ಕಾರದ ಸಹಕಾರ ಕುಮಾರಸ್ವಾಮಿ ಅವರಿಗೆ ಸಿಗುತ್ತದೆ ಎಂಬ ನಂಬಿಕೆ ಇದೆ ಎಂದರು.

ಇನ್ನು ಮುಂದಾದರೂ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯ ಸರ್ಕಾರ ಕುಮಾರಸ್ವಾಮಿ ಅವರ ಜತೆಗೆ ಸಹಕಾರ ನೀಡಬೇಕು. ಬೃಹತ್ ಕೈಗಾರಿಕೆಗಳನ್ನು ರಾಜ್ಯದಲ್ಲಿ ಸ್ಥಾಪನೆ ಮಾಡುವ ಮೂಲಕ ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸಲು ಪಕ್ಷಾತೀತವಾಗಿ ಮುಂದಾಗಬೇಕೆಂದು ಸಲಹೆ ನೀಡಿದರು.

ಬ್ರಿಟಿಷ್ ಸೈನ್ಯಕ್ಕೆ ಸಿಂಹ ಸ್ವಪ್ನವಾಗಿದ್ದರು ಬಿರ್ಸಾ ಮುಂಡ


ಬಿರ್ಸಾ ಮುಂಡ ಅವರ ಭಾವಚಿತ್ರಕ್ಕೆ ಜಿಪಂ ಸಿಇಓ ನಂದಿನಿ ಪುಷ್ಪಾರ್ಚನೆ ಮಾಡಿದರು.

ಮಂಡ್ಯ, ನ.15– ಜಾರ್ಖಂಡ್‌ನ ಛೋಟಾ ನಾಗ್ಪುರ್ ಪ್ರಸ್ಥಭೂಮಿಯಲ್ಲಿ ಜನಿಸಿದ ಒಬ್ಬ ಸಾಮಾನ್ಯ ಬುಡಕಟ್ಟು ಸಮುದಾಯದಲ್ಲಿ ಜನಿಸಿದ ಬಿರ್ಸಾ ಮುಂಡ ಅವರು ಬ್ರಿಟಿಷ್ ಸೈನ್ಯಕ್ಕೆ ಸಿಂಹ ಸ್ವಪ್ನವಾಗಿದ್ದರು ಎಂದು ಜಿಪಂ ಸಿಇಓ ಕೆ.ಆರ್.ನಂದಿನಿ ಹೇಳಿದರು.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಭಗವಾನ್ ಶ್ರೀ ಬಿರ್ಸಾ ಮುಂಡಾರವರ 150ನೇ ಜಯಂತಿ ಅಂಗವಾಗಿ 5ನೇ ವರ್ಷದ ಜನ ಜಾತೀಯ ಗೌರವ್ ದಿವಸ್ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಬಿರ್ಸಾ ಮುಂಡ ಬುಡಕಟ್ಟು ಜನಾಂಗದ ಅತ್ಯಂತ ಮಹತ್ವಪೂರ್ಣ ಹಾಗೂ ಪ್ರಭಾವಶಾಲಿ ವ್ಯಕ್ತಿ ಎಂದು ಜಗತ್ತಿನಲ್ಲಿ ಗುರುತಿಸಿಕೊಂಡಿದ್ದಾರೆ ಎಂದು ಹೇಳಿದರು.

ಛೋಟಾ ನಾಗ್ಪುರ ಪ್ರಸ್ಥಭೂಮಿಯಲ್ಲಿ ಬ್ರಿಟಿಷ್ ಆಡಳಿತದಿಂದ ಬುಡಕಟ್ಟು ಸಮುದಾಯಕ್ಕೆ ಆಗುತ್ತಿದ್ದ ಅನ್ಯಾಯದ ವಿರುದ್ಧ ದ್ವನಿ ಎತ್ತಿದವರು ಬಿರ್ಸಾ ಮುಂಡ. ಬುಡಕಟ್ಟು ಸಮುದಾಯದ ಜನರು ಪ್ರಕೃತಿಯನ್ನು ದೇವರೆಂದು ಆರಾಧಿಸುತ್ತಾರೆ. ಪ್ರಕೃತಿ ಹಾಗೂ ಬುಡಕಟ್ಟು ಜನಾಂಗದವರ ನಡುವೆ ಅವಿನಾಭಾವ ಸಂಬಂಧವಿರುತ್ತದೆ ಎಂದು ಹೇಳಿದರು.

ಬ್ರಿಟಿಷ್ ಆಡಳಿತ ಭೂ ಕಂದಾಯ ಕಾಯ್ದೆ ತಂದಿದ್ದರಿಂದ ಬುಡಕಟ್ಟು ಸಮುದಾಯವನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆದಿತ್ತು ಆದರೆ ಬಿರ್ಸಾ ಮುಂಡ ಅವರು ಬುಡಕಟ್ಟು ಸಮುದಾಯದ ಜನರನ್ನು ಒಗ್ಗೂಡಿಸಿ ಬ್ರಿಟೀಷರ ವಿರುದ್ಧ ಸಮರ ಸಾರಿದರು ಎಂದು ತಿಳಿಸಿದರು.

ಮಂಡ್ಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಮಂಜು ಅವರು ಮಾತನಾಡಿ 2021ರಲ್ಲಿ ಕೇಂದ್ರ ಸರ್ಕಾರ ಬಿರ್ಸಾ ಮುಂಡ ಜನ್ಮದಿನಾಚರಣೆ ಆಚರಣೆ ಮಾಡಲು ಆದೇಶ ಹೊರಡಿಸಿತು. ಬಿರ್ಸಾ ಮುಂಡ ಆದಿವಾಸಿಗಳ ಆರಾಧ್ಯ ದೈವ ಆಗಿದ್ದರು. ಇತಿಹಾಸ ಪುಟಗಳಲ್ಲಿ ಚರಿತ್ರೆ ದಾಖಲಿಸಿದವರು ಭಗವಾನ್ ಬಿರ್ಸಾ ಮುಂಡ ಅವರು ಬದುಕಿದ್ದು ಕೇವಲ 25 ವರ್ಷಗಳು ಮಾತ್ರ. 1894ರಲ್ಲಿ ಬಿರ್ಸಾ ಮುಂಡ ಬ್ರಿಟಿಷ್ ಸೈನ್ಯದ ವಿರುದ್ಧ ಎಲ್ಲಾ ಬುಡಕಟ್ಟು ಸಮುದಾಯದ ಯುವಕರನ್ನು ಒಗ್ಗೂಡಿಸಿ ಬಹುದೊಡ್ಡ ಹೋರಾಟ ಕೈಗೊಂಡರು ಎಂದು ತಿಳಿಸಿದರು.

ಭಾರತದಲ್ಲಿ 600ಕ್ಕೂ ಹೆಚ್ಚು ಬುಡಕಟ್ಟು ಸಮುದಾಯಗಳಿವೆ. ಸರ್ಕಾರ ಬುಡಕಟ್ಟು ಜನಾಂಗದ ಶಿಕ್ಷಣ, ಸಾಮಾಜಿಕ ಸ್ಥಿತಿ, ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದರು.

ನಂತರ ಭಗವಾನ್ ಬಿರ್ಸಾ ಮುಂಡ ಅವರ 150ನೇ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಪ್ರಬಂಧ ಸ್ಪರ್ಧೆ, ಚಿತ್ರ ಕಲೆ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆಆರ್ ನಂದಿನಿ ಅವರು ಪ್ರಮಾಣ ಪತ್ರ ನೀಡಿ ಗೌರವಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಕಾವ್ಯ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಡಿಸಿಸಿ ಬ್ಯಾಂಕ್ ನಿರ್ದೇಶಕರಿಗೆ ಅಭಿನಂದನೆ


ನೂತನ ಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್.ಸಿ.ಪುಟ್ಟಸ್ವಾಮೀಗೌಡರನ್ನು ಅಭಿನಂಧಿಸಲಾಯಿತು.

ಪಾಂಡವಪುರ: ಮಂಡ್ಯ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್(ಡಿಸಿಸಿ)ನ ನಿರ್ದೇಶಕರಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ನಿರ್ದೇಶಕ ಎಚ್.ಸಿ.ಪುಟ್ಟಸ್ವಾಮೀಗೌಡ (ಹೊಸಕೋಟೆಪುಟ್ಟಣ್ಣ) ಅವರನ್ನು ತಾಲೂಕಿನ ಹಳೇಬೀಡು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ವತಿಯಿಂದ ಅಭಿನಂಧಿಸಲಾಯಿತು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್.ಡಿ. ಪುಟ್ಟಸ್ವಾಮೀಗೌಡ ಮಾತನಾಡಿ, ತಾಲೂಕಿನ ಕೃಷಿಪತ್ತಿನ ಸಹಕಾರ ಸಂಘಗಳ ಪ್ರತಿನಿಧಿಗಳ ಸಹಕಾರದಿಂದ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಆಶೀರ್ವಾದದಿಂದಾಗಿ ಡಿಸಿಸಿ ಬ್ಯಾಂಕ್ ನಿರ್ದೇಶಕನಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ರೈತರ ಪ್ರತಿನಿಧಿಯಾಗಿ ಕೆಲಸ ಮಾಡುವ ಮೂಲಕ ಬ್ಯಾಂಕ್‌ನಿಂದ ದೊರೆಯುವ ಸೌಲಭ್ಯಗಳನ್ನು ಒದಗಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಹೊಸಕೋಟೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಕ್ಕೆ ನನನ್ನು ಈ ಭಾಗದ ರೈತರು ನಿರ್ದೇಶಕನಾಗಿ ಆಯ್ಕೆ ಮಾಡಿದ ಪರಿಣಾಮವಾಗಿ ಇಂದು ಡಿಸಿಸಿ ಬ್ಯಾಂಕ್ ನಿರ್ದೇಶಕನಾಗಿ ಆಯ್ಕೆಯಾಗಲು ಸಾಧ್ಯವಾಗಿದೆ. ಇಂದು ಅದೇ ಸಹಕಾರ ಸಂಘದ ವತಿಯಿಂದ ಎಲ್ಲರು ಸೇರಿ ಅಭಿನಂಧನೆ ಸಲ್ಲಿಸುತ್ತಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಸಂದರ್ಭದಲ್ಲಿ ಅಧ್ಯಕ್ಷ ಎಚ್.ಲಿಂಗರಾಜು, ಉಪಾಧ್ಯಕ್ಷ ಗುರುಮೂರ್ತಿ, ನಿರ್ದೇಶಕರಾದ ಹೊಸಕೋಟೆ ಅರವಿಂದ್, ಎಚ್.ಕೆ. ಕುಳ್ಳೇಗೌಡ, ಎಚ್.ಎಂ.ರಮೇಶ್, ಎಚ್.ವಿ. ಕುಮಾರ್, ಎಚ್.ಆರ್.ತಿಮ್ಮೇಗೌಡ, ಪುಟ್ಟರಾಮಯ್ಯ ಹಲವರು ಹಾಜರಿದ್ದರು.

ಭ್ರಷ್ಟಾಚಾರದ ಜೀವನ ಸುಖ ಶಾಂತಿಯಿಂದ ದೂರ: ನ್ಯಾಯಮೂರ್ತಿ ಸಂತೋಷ್ ಹೆಗ್ಗಡೆ

ಮಂಡ್ಯ, ನ.15– ಮನುಷ್ಯ ತನಗೆ ದಕ್ಕಿದಷ್ಟಕ್ಕೇ ತೃಪ್ತಿಪಟ್ಟುಕೊಂಡರೆ ತನ್ನ ಜೀವನದಲ್ಲಿ ಸುಖ ಶಾಂತಿಯನ್ನು ಕಾಣಬಹುದು. ಇಲ್ಲದಿದ್ದರೆ ಭ್ರಷ್ಟಾಚಾರ ನಡೆಸಿ ಅಶಾಂತಿಯಿಂದ ನರಳಬೇಕಾಗುತ್ತದೆ ಎಂಬುದಕ್ಕೆ ದೇಶದಲ್ಲಿ ನಡೆದಿರುವ ಹಲವಾರು ಹಗರಣಗಳೇ ಸಾಕ್ಷಿ ಎಂದು ವಿಶ್ರಾಂತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಗಡೆ ಎಚ್ಚರಿಸಿದರು.


ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಕನ್ನಡರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ಗಾಂಧಿ ಭವನದಲ್ಲಿ ಕನ್ನಡಸೇನೆ ಕರ್ನಾಟಕ ಜಿಲ್ಲಾ ಘಟಕದ ವತಿಯಿಂದ ಏರ್ಪಡಿಸಿದ್ದ ಕನ್ನಡ ಜಾಗೃತಿ ಸಮಾವೇಶ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಬೋಫೋರ್ಸ್ ಸೇರಿದಂತೆ ನಡೆದಿರುವ ಬಹುತೇಕ ಹಗರಣಗಳು ಲಕ್ಷ ಲಕ್ಷ ಕೋಟಿಯಲ್ಲಿವೆ ಅವರೆಲ್ಲ ನೂರಾರು ವರ್ಷ ಬಾಳಿ ಬದುಕಿದವರೇನಲ್ಲ. ಇವತ್ತಿಗೂ ನಮ್ಮ ರಾಜ್ಯದಲ್ಲಿ 40 ಪರ್ಸೆಂಟ್ 60 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಆಡಳಿತ ವಿರೋಧ ಪಕ್ಷಗಳವರು ಪರಸ್ಪರ ಆರೋಪ ಮಾಡಿಕೊಳ್ಳುತ್ತಿದ್ದಾರೆ. ಮಾಜಿ ಪ್ರಧಾನಿ ದಿ.ರಾಜೀವ್‌ಗಾಂಧಿಯವರು 1985ರಲ್ಲೇ ಒಂದು ಮಾತು ಹೇಳಿದ್ದರು. ನಾನು ಪ್ರಧಾನಿಯಾಗಿ ಒಂದು ರೂ. ಬಿಡುಗಡೆ ಮಾಡಿದರೆ, 18 ಪೈಸೆಯಷ್ಟು ಮಾತ್ರ ಕೆಲಸವಾಗಿರುತ್ತದೆ ಎಂದು ಭ್ರಷ್ಟಾಚಾರದ ವಿರಾಟ್ ದರ್ಶನ ಮಾಡಿಸಿದ್ದರು. ಹಾಗಾಗಿ ಪ್ರತಿಯೊಬ್ಬರಲ್ಲೂ ತೃಪ್ತಿ ಎಂಬುದಿದ್ದರೆ ದುರಾಸೆ ಬರೊಲ್ಲ. ನಮ್ಮಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಂಡರೆ ಸಂತೃಪ್ತ ಬದುಕು ನಮ್ಮದಾಗುತ್ತದೆಂದರು.

ಕನ್ನಡ ರತ್ನ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಮಾಜಿ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಅವರು ಮಾತನಾಡಿ, 19 ಸಾವಿರ ಭಾಷೆಗಳಿರುವ ಭಾರತದ ನೆಲದಲ್ಲಿ ಕೇವಲ 22 ಭಾಷೆಗಳು ಮಾತ್ರ ಅಧಿಕೃತವಾಗಿವೆ ಎಂದು ಹೇಳಿದರು. ಇಂತಹ ನೆಲದಲ್ಲಿ ಜನತೆ, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸರಿಹೋದರೆ ಮಾತ್ರ ಸಮಾಜ ಉನ್ನತಿಗೊಳ್ಳುತ್ತದೆ. ಎಲ್ಲಿ ಹಕ್ಕಿರುತ್ತದೊ ಅಲ್ಲಿ ಕರ್ತವ್ಯವಿರುತ್ತದೆ. ಎಲ್ಲಿ ಕರ್ತವ್ಯ ಇರುತ್ತದೋ ಅಲ್ಲಿ ಜವಾಬ್ದಾರಿ ಇರುತ್ತದೆಂದ ಅವರು, 30 ಕೋಟಿ ಜನರು ಇಂದಿಗೂ ಕಡು ಬಡತನದಲ್ಲಿದ್ದಾರೆ. ಆದ್ದರಿಂದ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಜನರು ಇದರ ವಿರುದ್ಧ ಹೋರಾಡಬೇಕೆಂದರು.

ಕನ್ನಡಸೇನೆ ಜಿಲ್ಲಾಧ್ಯಕ್ಷ ಎಚ್.ಸಿ.ಮಂಜುನಾಥ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಕನ್ನಡ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪಾಲಹಳ್ಳಿಯಲ್ಲಿ ಪುರುಷ, ಮಹಿಳೆಯರ ಕುಸ್ತಿ ಪಂದ್ಯಾವಳಿ

ಪಾಲಹಳ್ಳಿ: ಶ್ರೀರಂಗಪಟ್ಟಣದ ಪಾಲಹಳ್ಳಿ ಗ್ರಾಮದಲ್ಲಿ ಶಂಭುಲಿಂಗೇಶ್ವರ ಜಾತ್ರೆ ಮಹೋತ್ಸವದ ಪ್ರಯುಕ್ತ ಮಂಗಳವಾರ (ನ.18)ಮಧ್ಯಾಹ್ನ 2:30ಕ್ಕೆ ಪುರುಷ ಹಾಗೂ ಮಹಿಳೆಯರ 30 ಜೊತೆ ಪ್ರತ್ಯೇಕ ಕುಸ್ತಿ ಪಂದ್ಯಾವಳಿಯನ್ನು ಏರ್ಪಡಿಸಲಾಗಿದೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್, ಜೆಡಿಎಸ್ ಮುಖಂಡ ನಿಖಿಲ್ ಕುಮಾರ್‌ಸ್ವಾಮಿ, ಮಾಜಿ ಸಚಿವ ಪುಟ್ಟರಾಜು, ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಹರೀಶ್‌ಗೌಡ, ಉದಯ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಪುಟ್ಟಣ್ಣಯ್ಯ ಬಿಜೆಪಿ ಮುಖಂಡರಾದ ಸಚ್ಚಿದಾನಂದ, ಮಾಜಿ ಶಾಸಕ ಶ್ರೀ ರವೀಂದ್ರ ಕಂಠಯ್ಯ ಹಾಗೂ ಕುಸ್ತಿ ವ್ಯವಸ್ಥಾಪಕರಾದ ಪೈ. ಮುಕುಂದ, ರಘುಗೌಡ ಅವರುಗಳು ಪಾಲ್ಗೊಳ್ಳುವರು.

ಶ್ರೀ ಆಂಜನೇಯಸ್ವಾಮಿ ಉತ್ಸವ


ಚಿನಕುರಳಿ ಗ್ರಾಮದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಶನಿವಾರ ಗ್ರಾಮದ ಫ್ಯಾಕ್ಟರಿ ಶಿವಣ್ಣ ಹಾಗೂ ನಂಜೇಗೌಡರ ಕುಟುಂಬ ವರ್ಗದಿಂದ ಎಲ್ಲ ದೇವಸ್ಥಾನಗಳಿಗೆ ಅಭಿಷೇಕ ಹಾಗೂ ವಿಶೇಷ ಪೂಜೆ ನೆರವೇರಿಸಿ ಶ್ರೀ ಆಂಜನೇಯ ಸ್ವಾಮಿ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ಮೂರನೇ ಪುಟದಿಂದ

ಪ್ರಮುಖರೊಂದಿಗೆ ಚರ್ಚೆ


ನವದೆಹಲಿಯಲ್ಲಿ 'ದಿಲ್ ಸೇ ವಿದ್ ಕಪಿಲ್ ಸಿಬಿಲ್' ಸರಣಿಯ ಮೂರನೇ ಆವೃತ್ತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ್ದರು.

ನೀಡಬೇಕೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವರಿಷ್ಠರ ಮುಂದೆ ಪಟ್ಟು ಹಿಡಿದಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಭರ್ಜರಿ ಜಯಗಳಿಸಿ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಜಿದ್ದಾಜಿದ್ದಿ ನಡೆದಿತ್ತು. ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ್ದ ಸೋನಿಯಾ ಗಾಂಧಿ ಅವರು, ಶಿವಕುಮಾರ್ ಅವರಿಗೆ ಇದೇ ಅವಧಿಯಲ್ಲಿ ಮುಖ್ಯಮಂತ್ರಿ ಅವಕಾಶ ನೀಡುವುದಾಗಿ ಭರವಸೆ ನೀಡಿದ್ದರು ಎನ್ನಲಾಗಿದೆ. ನವೆಂಬರ್ 20 ಸನಿಹವಾಗುತ್ತಿದ್ದಂತೆ ಎಐಸಿಸಿ ನಾಯಕರು ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ನನಗೇನು ಬೇಕೋ ಅದನ್ನು ಹೇಳುತ್ತೇನೆ

ಅವರು ಯಾರನ್ನು ಭೇಟಿ ಮಾಡಿದ್ದಾರೋ, ಏನನ್ನು ಮಾತನಾಡಿದ್ದಾರೋ ನನಗೆ ತಿಳಿದಿಲ್ಲ. ಮುಖ್ಯಮಂತ್ರಿಯೊಬ್ಬರು ಭೇಟಿಗೆ ಬಂದಾಗ ಸಮಯ ನೀಡುವ ವಾಡಿಕೆ ಇದೆ ಎಂದರು. ಪಕ್ಷದ ಶಿಸ್ತಿನ ಸಿಪಾಯಿ ನೀವು ಎಂದು ಮಾಧ್ಯಮದವರು ಹೇಳಿದಾಗ, ಪಕ್ಷ ಹೇಗೆ ಹೇಳುತ್ತದೆಯೋ ಆ ರೀತಿ ಕೇಳಿಕೊಂಡು ಹೋಗಬೇಕು ನಾವೆಲ್ಲ. ಅಷ್ಟೇ ನಮ್ಮ ಕೆಲಸ ಎಂದರು. ಮುಖ್ಯಮಂತ್ರಿಯವರು ಪ್ರಧಾನಿಯವರನ್ನು ಹಾಗೂ ಹೈಕಮಾಂಡ್ ಅನ್ನು ಭೇಟಿ ಮಾಡುತ್ತಿರುವ ಬಗ್ಗೆ ಕೇಳಿದಾಗ, ಭೇಟಿಯಾಗುವುದು ತಪ್ಪೇನ್ರೀ? ನೀವುಗಳು ಬೇರೆ ಪಕ್ಷದವರ ಬಳಿ ಮಾತನಾಡಿದಂತೆ ಮಾತನಾಡುತ್ತಿದ್ದೀರಿ. ಅವರು ಎಲ್ಲರನ್ನೂ ಭೇಟಿ ಮಾಡುವ ಹಕ್ಕು ಹೊಂದಿದ್ದಾರೆ. ಪ್ರಧಾನಮಂತ್ರಿ, ಗೃಹಸಚಿವರು, ನಿಮ್ಮನ್ನು, ನಮ್ಮ ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡಬಹುದು ಎಂದರು.

ಸಂಪುಟ ಪುನಾರಚನೆ ಬಗ್ಗೆ ನೀವು ಹೈಕಮಾಂಡ್ ಜತೆ ಮಾತನಾಡುವಿರಾ ಎಂದು ಕೇಳಿದಾಗ, ನಾನು ಏನನ್ನೂ ಮಾತನಾಡುವುದಿಲ್ಲ. ನನ್ನನ್ನು ಅವರೇನಾದರೂ ಕೇಳಿದರೆ ನನಗೆ ಏನು ಬೇಕೋ ಅದನ್ನು ಹೇಳುತ್ತೇನೆ. ಹೈಕಮಾಂಡ್‌ನವರು ನನ್ನನ್ನು ಏನು ಕೇಳುತ್ತಾರೆ, ಏನನ್ನು ಕೇಳುವುದಿಲ್ಲ ಎಂದು ನನಗೆ ಗೊತ್ತಿದೆ. ಅದರ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡುವುದಿಲ್ಲ ಎಂದರು. ಹೈಕಮಾಂಡ್ ಭೇಟಿ ಯಾವಾಗ ಎನ್ನುವುದರ ಬಗ್ಗೆ ತಿಳಿದಿಲ್ಲ. ಭಾನುವಾರ ಭೇಟಿಯಾಗಬಹುದು ಎಂದರು.

ಪರಿಸರದಲ್ಲಿ ತಿಮ್ಮಕ್ಕ ಲೀನ

ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಈ ವೇಳೆ ಆಗಸದೆಡೆಗೆ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಪೊಲೀಸರು ತಿಮ್ಮಕ್ಕ ಅವರಿಗೆ ವಿಶೇಷ ಗೌರವ ಸಲ್ಲಿಸಿದರು. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೇರಿದಂತೆ ಹಲವು ಗಣ್ಯರು ವೃಕ್ಷಮಾತೆಗೆ ಅಂತಿಮ ಗೌರವ ಸಲ್ಲಿಸಿದರು. ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ತಿಮ್ಮಕ್ಕ ಅವರನ್ನು ಎರಡು ದಿನಗಳ ಹಿಂದೆ ಬೆಂಗಳೂರಿನ ಜಯನಗರದ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಬೆಳಗ್ಗೆ ಕೊನೆಯುಸಿರೆಳೆದರು. ಅನಕ್ಷರಸ್ಥೆಯಾಗಿದ್ದ ತಿಮ್ಮಕ್ಕನವರು ತಮಗೆ ಮಕ್ಕಳಿಲ್ಲದ ಕಾರಣಕ್ಕೆ ರಸ್ತೆಯ ಬದಿಯಲ್ಲಿ ಆಲದ ಸಸಿಗಳನ್ನು ನೆಟ್ಟು, ಅವುಗಳನ್ನೇ ಮಕ್ಕಳಂತೆ ಭಾವಿಸಿ ಬೆಳೆಸಿದ ಅಪ್ರತಿಮ ಪರಿಸರವಾದಿ. ಪರಿಸರ ಸಂರಕ್ಷಣೆಯಲ್ಲಿ ಮಹತ್ತರ ಕಾರ್ಯ ಮಾಡಿದ್ದರ ಹಿನ್ನೆಲೆ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳೂ ಅವರು ಭಾಜನರಾಗಿದ್ದರು.

ಕೆ.ಸಿ.ವೇಣುಗೋಪಾಲ್‌ಗೆ ವಿವಾದ ಇತ್ಯರ್ಥ ಜವಾಬ್ದಾರಿ

ಉಳಿದ ಅವಧಿಗೆ ತಮಗೆ ನಾಯಕತ್ವ ನೀಡಬೇಕೆಂದು ವರಿಷ್ಠರ ಮೇಲೆ ಒತ್ತಡ ಹೇರಿದ್ದಾರೆ. ಕಳೆದ 3 ತಿಂಗಳಿಂದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಬೆಂಬಲಿಗರು ಪರ ಹಾಗೂ ವಿರೋಧ ಹೇಳಿಕೆಗಳನ್ನು ಸಾರ್ವಜನಿಕವಾಗಿ ನೀಡುತ್ತಾ ಗೊಂದಲ ಸೃಷ್ಟಿ ಮಾಡಿದ್ದಾರೆ. ಶಿವಕುಮಾರ್ ಪಕ್ಷದ ಅಧಿನಾಯಕರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ದೆಹಲಿ ಮಟ್ಟದ ಪ್ರಮುಖ ನಾಯಕರನ್ನು ಪದೇ ಪದೇ ಭೇಟಿ ಮಾಡಿ ತಮ್ಮ ಹಕ್ಕೊತ್ತಾಯ ಮಂಡಿಸಿದ್ದಾರೆ.

ಕರ್ನಾಟಕದಲ್ಲಿ ಪಕ್ಷ ಅಧಿಕಾರ ಉಳಿಸಿಕೊಂಡು, ನಾಯಕತ್ವ ಗೊಂದಲವನ್ನು ಬಗೆಹರಿಸಲು ರಾಹುಲ್ ಮತ್ತು ಖರ್ಗೆ ಅವರು ವೇಣುಗೋಪಾಲ್ ಅವರಿಗೆ ಅಧಿಕಾರ ನೀಡಿದ್ದಾರೆ. ಬಿಹಾರ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ವೇಣುಗೋಪಾಲ್ ಇತ್ತ ಕಡೆ ಗಮನಹರಿಸಲು ಸಾಧ್ಯವಾಗಿರಲಿಲ್ಲ. ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ವಿಚಾರವನ್ನು ವೇಣುಗೋಪಾಲ್ ಅವರಿಗೆ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗುತ್ತಿದ್ದಂತೆ ಸಿದ್ದರಾಮಯ್ಯ ಬಣದ ಸಚಿವರಾದ ಸತೀಶ್ ಜಾರಕಿಹೊಳಿ, ಜಮೀರ್ ಅಹಮದ್ ಖಾನ್, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ ಸೇರಿದಂತೆ ಕೆಲವರು ಕಳೆದ ವಾರ ದೆಹಲಿಗೆ ತೆರಳಿ ರಾಜಕೀಯ ಕಾರ್ಯದರ್ಶಿ ಅವರನ್ನು ಭೇಟಿ ಮಾಡಿದ್ದಾರೆ.

ಈ ಭೇಟಿ ವೇಳೆ ಸಿದ್ದರಾಮಯ್ಯ ಅವರನ್ನು ಪೂರ್ಣಾವಧಿಗೆ ಅಧಿಕಾರದಲ್ಲಿ ಮುಂದುವರಿಸುವುದೂ ಸೇರಿದಂತೆ ನಾಯಕತ್ವ ಬದಲಾವಣೆ ನಂತರ ಆಗಬಹುದಾದ ರಾಜಕೀಯ ಸನ್ನಿವೇಶಗಳನ್ನು ಬಿಡಿಸಿಟ್ಟಿದ್ದಾರೆ. ಖಾಸಗಿ ಕಾರ್ಯಕ್ರಮ ನಿಮಿತ್ತ ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರು, ಮಲ್ಲಿಕಾರ್ಜುನ ಖರ್ಗೆ ಮತ್ತು ವೇಣುಗೋಪಾಲ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ ಅವರು ವಿಶೇಷ ವಿಮಾನದಲ್ಲಿ ತಡರಾತ್ರಿಯೇ ನಗರಕ್ಕೆ ಹಿಂತಿರುಗಲಿದ್ದು, ಶಿವಕುಮಾರ್ ದೆಹಲಿಯಲ್ಲಿಯೇ ಕೆಲವು ದಿನ ಉಳಿಯಲಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನವೆಂಬರ್ 20ಕ್ಕೆ ಎರಡೂವರೆ ವರ್ಷ ಪೂರೈಸಲಿದೆ. ನವೆಂಬರ್‌ನಲ್ಲೇ ತಾವು ನಾಯಕತ್ವ ವಹಿಸಿಕೊಳ್ಳಬೇಕೆಂದು ಪಣತೊಟ್ಟಂತಿರುವ ಡಿ.ಕೆ.ಶಿವಕುಮಾರ್, ಅಧಿನಾಯಕ ರಾಹುಲ್ ಮತ್ತು ಉಳಿದ ನಾಯಕರನ್ನು ಭೇಟಿ ಮಾಡಿ ತಮ್ಮ ಹಕ್ಕೋತ್ತಾಯ ಮಾಡಲಿದ್ದಾರೆ. ದೆಹಲಿಗೆ ತೆರಳುವುದಕ್ಕೂ ಮುನ್ನ ತಮ್ಮ ಆಪ್ತರ ಬಳಿ ಖಾಸಗಿ ಚರ್ಚೆ ಮಾಡುತ್ತಾ ಮುಖ್ಯಮಂತ್ರಿ ಆಗುವುದು ಖಚಿತ ಎಂಬ ಸಂದೇಶ ನೀಡಿದ್ದಾರೆ.

ಕೆ.ಸಿ.ವೇಣುಗೋಪಾಲ್ ಅವರಿಗೆ ಪೂರ್ಣ ಅಧಿಕಾರ ನೀಡಿದ್ದಾರೆ. ಆದರೆ, ಅವರಿನ್ನೂ ನಾಯಕತ್ವದ ಬಗ್ಗೆ ಯಾವುದೇ ವಿಚಾರ ಕೈಗೊಂಡಿಲ್ಲ. ಬಿಹಾರ ವಿಧಾನಸಭಾ ಚುನಾವಣಾ ಪ್ರಕ್ರಿಯೆ ಮುಗಿದಿರುವುದರಿಂದ ಕರ್ನಾಟಕ ವಿಚಾರವನ್ನು ಕೈಗೆತ್ತಿಕೊಳ್ಳುವ ಅವಕಾಶ ಇದ್ದು, ದೆಹಲಿ ಪ್ರವಾಸ ಸಂದರ್ಭದಲ್ಲಿ ವೇಣುಗೋಪಾಲ್ ಸೇರಿದಂತೆ ಇತರ ವರಿಷ್ಠರನ್ನು ಭೇಟಿ ಮಾಡುತ್ತೇನೆ ಎಂದಿದ್ದಾರೆ.

ಪತಿ ಸೇರಿ ಮೂವರ ವಿಚಾರಣೆ

ನೇಣು ಬಿಗಿದುಕೊಂಡು ಆತ್ಮಹತ್ಯೆ: ಇವರಿಬ್ಬರ ನಡುವೆ ಆಗಾಗ ಗಲಾಟೆ ನಡೆಯುತ್ತಿತ್ತು. ಶುಕ್ರವಾರ ರಾಕೇಶ್‌ಕುಮಾರ್ ಕೆಲಸಕ್ಕೆ ಹೋಗಿದ್ದಾಗ ಆತನ ಮೊಬೈಲ್‌ಗೆ ಕರೆ ಮಾಡಿದ ನಾನ್ಸಿದೇವಿ, ಮಾತಿನ ಚಕಮಕಿ ನಡೆಸಿದ್ದು, ಕೊನೆಗೆ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿ ಕರೆ ಕಟ್ ಮಾಡಿದಳಂತೆ. ತಕ್ಷಣವೇ ರಾಕೇಶ್‌ಕುಮಾರ್ ಮನೆಗೆ ಆಗಮಿಸಿ, ಅಕ್ಕಪಕ್ಕದವರ ಸಹಾಯದೊಂದಿಗೆ ಬಾಗಿಲು ಒಡೆದು ಒಳ ಪ್ರವೇಶಿಸಿ ವೇಲ್‌ನಲ್ಲಿ ನೇತಾಡುತ್ತಿದ್ದ ಆಕೆಯನ್ನು ಕೆಳಗಿಳಿಸಿದ್ದಾನೆ. ಆಗ ಆಕೆ ಉಸಿರಾಡುತ್ತಿದ್ದಳು. ಹೀಗಾಗಿ ಅಕ್ಕಪಕ್ಕದ ಮನೆಯವರು ಆಸ್ಪತ್ರೆಗೆ ಕರೆದೊಯ್ಯುವಂತೆ ಹೇಳಿದರಂತೆ. ಅಷ್ಟರಲ್ಲಾಗಲೇ ಆತನ ಸ್ನೇಹಿತರಾದ ವಿಕಾಸ್ ಮತ್ತು ಸತ್ವೀರ್ ಸ್ಥಳಕ್ಕೆ ಬಂದಿದ್ದು, ವಿಕಾಸ್‌ಗೆ ಸೇರಿದ ಆಲ್ಟೋ ಕಾರಿನಲ್ಲಿ ನಾನ್ಸಿದೇವಿಯನ್ನು ಕರೆದೊಯ್ದಿದ್ದಾರೆ. ಆದರೆ ಮೂರ್ಛೆ ರೋಗದಿಂದ ಬಳಲುತ್ತಿದ್ದ ಆಕೆ ಕಾರಿನಲ್ಲೇ ಸಾವಿಗೀಡಾಗಿದ್ದಾಳೆ ಎಂದು ವಿಚಾರಣೆ ವೇಳೆ ಇವರು ಪೊಲೀಸರಿಗೆ ತಿಳಿಸಿದ್ದಾರೆ.

ಮಡಿಕೇರಿ ಆಸ್ಪತ್ರೆ: ನಾನ್ಸಿದೇವಿ ದೇಹವನ್ನು ಮಡಿಕೇರಿ ಆಸ್ಪತ್ರೆಗೆ ಕೊಂಡೊಯ್ಯುತ್ತಿದ್ದುದಾಗಿ ಮೂವರೂ ಪೊಲೀಸರಿಗೆ ತಿಳಿಸಿದ್ದು, ಮಡಿಕೇರಿಯ ಮಾರ್ಗ ತಿಳಿಯದೆ ಕುಶಾಲನಗರದ ಮೂಲಕ ಹೋಗುವ ಬದಲು ವಿರಾಜಪೇಟೆ ಮಾರ್ಗವಾಗಿ ತಾವು ಬಂದಿರುವುದಾಗಿ ಈ ವ್ಯಕ್ತಿಗಳು ಪೊಲೀಸರಿಗೆ ಹೇಳಿದ್ದಾರೆ. ಆದರೆ ನಾನ್ಸಿದೇವಿ ಮೃತಪಟ್ಟ ನಂತರ ದೇಹವನ್ನು ಯಾಕೆ ಮಡಿಕೇರಿ ಆಸ್ಪತ್ರೆಗೆ ಕೊಂಡೊಯ್ಯಬೇಕು? ಒಂದು ವೇಳೆ ಆಕೆ ಉಸಿರಾಡುತ್ತಿದ್ದರೆ ಚಿಕಿತ್ಸೆಗಾಗಿ ಮೈಸೂರಿನಲ್ಲೇ ಯಾವುದಾದರೂ ಆಸ್ಪತ್ರೆಗೆ ಕರೆದೊಯ್ಯಬಹುದಾಗಿತ್ತು ಎಂಬ ಪ್ರಶ್ನೆಗಳಿಗೆ ಅವರಿಂದ ಸಮರ್ಪಕವಾದ ಉತ್ತರ ಸಿಕ್ಕಿಲ್ಲ.

ನಾನ್ಸಿದೇವಿಯನ್ನು ಹತ್ಯೆ ಮಾಡಿ ದೇಹವನ್ನು ಅರಣ್ಯದಲ್ಲಿ ಬಿಸಾಡಲು ಕೊಂಡೊಯ್ಯುತ್ತಿದ್ದರೇ ಎಂಬ ಶಂಕೆಯೂ ಪೊಲೀಸರಿಗೆ ಉಂಟಾಗಿದೆ. ಅದೇ ವೇಳೆ ಹುಣಸೂರು ದಾಟಿದ ಬಳಿಕ ಮಾಲ್ದಾರೆವರೆಗೂ ಅರಣ್ಯ ಪ್ರದೇಶವೇ ಇದ್ದು, ಅಲ್ಲಿ ಎಲ್ಲಾದರೂ ದೇಹವನ್ನು ಬಿಸಾಡಬಹುದಾಗಿತ್ತು. ಆದರೆ ಹಾಗೆ ಮಾಡದೇ ಇವರು ಎಲ್ಲಿಗೆ ಶವವನ್ನು ಕೊಂಡೊಯ್ಯುತ್ತಿದ್ದರು ಎಂಬುದರ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ.

ಸದ್ಯಕ್ಕೆ ಸಿದ್ದಾಪುರ ಠಾಣೆಯಲ್ಲಿ ಸಂಶಯಾಸ್ಪದ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಸಾವು ಸಂಭವಿಸಿರುವುದು ಹೇಗೆ ಎಂಬುದರ ಬಗ್ಗೆ ಮರಣೋತ್ತರ ಪರೀಕ್ಷೆಯಿಂದ ತಿಳಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಡಿಕೇರಿ ಟೌನ್ ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಕೆ.ರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಒಂದು ವೇಳೆ ನಾನ್ಸಿದೇವಿ ಕತ್ತಿಗೆ ಹಗ್ಗ ಅಥವಾ ವೇಲ್ ಬಿಗಿದು ಹತ್ಯೆ ಮಾಡಿದ್ದರೆ ಈ ವ್ಯಕ್ತಿಗಳ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗುತ್ತದೆ. ಆಕೆ ನೇಣು ಬಿಗಿದು ಆತ್ಮಹತ್ಯೆಗೆ ಪ್ರಯತ್ನಿಸಿ ಈ ವ್ಯಕ್ತಿಗಳು ಕಾರಿನಲ್ಲಿ ಆಸ್ಪತ್ರೆಗೆ ಒಯ್ಯುವ ವೇಳೆ ಸಾವನ್ನಪ್ಪಿದ್ದರೆ ಅಕ್ರಮವಾಗಿ ಮೃತದೇಹ ಸಾಗಾಟ ಪ್ರಕರಣ ದಾಖಲಿಸಬಹುದಾಗಿದೆ. ಪ್ರಮುಖವಾಗಿ ದೇಹವನ್ನು ಎಲ್ಲಿಗೆ ಕೊಂಡೊಯ್ಯುತ್ತಿದ್ದರು ಎಂಬುದು ವಿಚಾರಣೆ ವೇಳೆ ಬಹಿರಂಗಗೊಂಡ ಬಳಿಕ ಈ ಮೂವರ ವಿರುದ್ಧವೂ ಕ್ರಿಮಿನಲ್ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗುತ್ತದೆ ಎಂದು ಕಾನೂನು ತಜ್ಞರು ತಿಳಿಸಿದ್ದಾರೆ.

ಇಂದು ವಿದ್ಯಾವರ್ಧಕ ಕಾಲೇಜಲ್ಲಿ ಬೃಹತ್ ರಕ್ತದಾನ ಶಿಬಿರ

ಮೈಸೂರು,ನ.15(ಜಿಎ)–ಡಾ.ಪಿ. ಬೋರೇಗೌಡ ಮತ್ತು ಪ್ರಭಾ ಪ್ರತಿಷ್ಠಾನದ ವತಿಯಿಂದ ನ.16ರಂದು ಬೆಳಗ್ಗೆ 10.30ಕ್ಕೆ ನಗರದ ವಿದ್ಯಾವರ್ಧಕ ಕಾಲೇಜಿನಲ್ಲಿ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಕಾರ್ಯದರ್ಶಿ ಲೋಕೇಶ್ ಈ ವಿಷಯ ತಿಳಿಸಿ, ಯುವಕರಲ್ಲಿ ರಕ್ತದಾನದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಜೆಎಸ್‌ಎಸ್ ರಕ್ತನಿಧಿ, ಕೆ.ಆರ್.ಆಸ್ಪತ್ರೆ ರಕ್ತನಿಧಿ ಕೇಂದ್ರಗಳ ಸಹಯೋಗದಲ್ಲಿ ಶಿಬಿರ ಆಯೋಜಿಸಲಾಗಿದೆ. ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಐಡಿಬಿಐ ಬ್ಯಾಂಕ್ ಮ್ಯಾನೇಜರ್ ದುರ್ಗೇಶ್ ಹಟ್ಟಿ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪಿ.ವಿಶ್ವನಾಥ್, ಜಿಲ್ಲಾ ವೈದ್ಯಾಧಿಕಾರಿ ಡಾ.ಸಿ.ಪಿ.ಕುಮಾರಸ್ವಾಮಿ, ಪತ್ರಕರ್ತ ಕೆ.ನರಸಿಂಹಮೂರ್ತಿ ಅತಿಥಿಗಳಾಗಿರುವರು.

ನಕಲಿ ತುಪ್ಪ ಮಾರಾಟ ಜಾಲ ಪತ್ತೆ


8,136 ಲೀಟರ್ ನಕಲಿ ತುಪ್ಪ, ತಯಾರಿಕೆಗೆ ಸಂಬಂಧಪಟ್ಟ ಯಂತ್ರೋಪಕರಣಗಳು, ಟಿನ್‌ಗಳು ಹಾಗೂ 4 ವಾಹನಗಳು ಸೇರಿ 1 ಕೋಟಿ 26 ಲಕ್ಷ ರೂಪಾಯಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದೆ. ಮಹೇಂದ್ರ ಎಂಬ ಕೆಎಂಎಫ್ ಡಿಸ್ಟ್ರಿಬ್ಯೂಟರ್ ಮತ್ತು ಅವರ ಪುತ್ರ ದೀಪಕ್ ಈ ಜಾಲದ ಪ್ರಮುಖ ಆರೋಪಿಗಳಾಗಿ ದ್ದಾರೆಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಮಹೇಂದ್ರ ಮತ್ತು ದೀಪಕ್ ಅವರಿಂದ ಖರೀದಿಸಿದ ಅಸಲಿ ತುಪ್ಪವನ್ನು ತಮಿಳುನಾಡಿನ ಮುನಿರಾಜು ಮತ್ತು ಅಭಿ ಅರಸು ಅವರಿಗೆ ಕಳುಹಿಸಲಾಗುತ್ತಿತ್ತು. ಅಲ್ಲಿ ಒರಿಜಿನಲ್ ತುಪ್ಪಕ್ಕೆ ಫಾರ್ಮ್ ಆಯಿಲ್, ತೆಂಗಿನ ಎಣ್ಣೆ, ದಾಲ್ಡಾ ಸೇರಿಸಿ ಒಂದಕ್ಕೆ ನಾಲ್ಕು ಲೀಟರ್ ಆಗುವಂತೆ ನಕಲಿ ತುಪ್ಪ ತಯಾರಿಸಲಾಗುತ್ತಿತ್ತು.

ಅಲ್ಲಿ ಕಲಬೆರಕೆ ತುಪ್ಪವನ್ನು ತಯಾರಿಸಿ ನಂದಿನಿ ಮಾದರಿಯಲ್ಲಿಯೇ ರೂಪ ನೀಡಿ ಪ್ಲಾಸ್ಟಿಕ್ ಬಾಟಲಿಗಳಲ್ಲಿ ತುಂಬಿ ಬೆಂಗಳೂರು ನಗರದಾದ್ಯಂತ ಮಾರಾಟ ಮಾಡುತ್ತಿದ್ದರು. ಅದರಲ್ಲೂ ಕೆಎಂಎಫ್ ಕಡೆಯಿಂದ ಅಧಿಕೃತ ಪರವಾನಗಿಯನ್ನು ಪಡೆದಂತಹ ಬೆಂಗಳೂರಿನ ವ್ಯಾಪಾರಿಗಳಿಗೆ ಸರಬರಾಜು ಮಾಡುತ್ತಿದ್ದರು ಎಂಬ ಮಾಹಿತಿ ವಿಚಾರಣೆಯಲ್ಲಿ ಗೊತ್ತಾಗಿದೆ. ತಮಿಳುನಾಡಿನ ತಿರುಪೂರು ಜಿಲ್ಲೆಯಲ್ಲಿರುವ ಮಷಿನ್ ಯೂನಿಟ್‌ನಲ್ಲಿ ನಕಲಿ ತುಪ್ಪ ತಯಾರಿಸಿದ ಬಳಿಕ ಅದನ್ನು ಮತ್ತೇ ಕರ್ನಾಟಕಕ್ಕೆ ಸಾಗಿಸಿ, ಇಲ್ಲಿನ ನಂದಿನಿ ಪಾರ್ಲರ್‌ಗಳಿಗೆ ಹಾಗೂ ಮಾರುಕಟ್ಟೆಗೆ ಸಾಗಿಸಲಾಗುತ್ತಿತ್ತು. ಈ ನಕಲಿ ಉತ್ಪನ್ನಗಳನ್ನು ಪ್ಯಾಕೆಟ್‌ಗಳು ಹಾಗೂ ಪ್ಲಾಸ್ಟಿಕ್ ಬಾಟಲಿಗಳಲ್ಲಿ ಸಂಗ್ರಹಿಸಲಾಗುತ್ತಿತ್ತು. ದಾಳಿಯ ವೇಳೆ ತಮಿಳುನಾಡಿನಲ್ಲಿ ಕಲಬೆರಕೆ ತುಪ್ಪವನ್ನು ತಯಾರಿಸಿ, ನಂದಿನಿ ಬ್ರಾಂಡ್‌ನ ಸ್ಯಾಚೆಟ್‌ಗಳಿಗೆ ಮತ್ತು ಪ್ಲಾಸ್ಟಿಕ್ ಬಾಟಲಿಗಳಿಗೆ ತುಂಬಿ ಬೆಂಗಳೂರಿನ ಅಂಗಡಿಗಳಿಗೆ ಸಾಗಿಸುತ್ತಿದ್ದ ವಾಹನ ಚಾಲಕ ಮತ್ತು ಆತನು ಉಪಯೋಗಿಸುತ್ತಿದ್ದ ಸರಕು ಸಾಗಾಣಿಕೆ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳಿಂದ ಕೃತ್ಯಕ್ಕೆ ಬಳಸುತ್ತಿದ್ದ 5 ಮೊಬೈಲ್‌ಗಳು, 60 ಲಕ್ಷ ರೂ. ಮಾಲ್ಯದ 4 ವಾಹನಗಳು, ಕೃತ್ಯದಿಂದ ಸಂಪಾದಿಸಿದ 1,19,640 ರೂ., ನಗದು, 56,95,200 ರೂ. ಬೆಲೆ ಬಾಳುವ 8,136 ಲೀಟರ್ ಕಲಬೆರಕೆಯ ತುಪ್ಪ ತುಂಬಿದ ವಿವಿಧ ನಮೂನೆಯ ನಕಲಿ ನಂದಿನಿ ಬ್ರಾಂಡ್‌ನ ಬಾಟಲಿಗಳು, ತೆಂಗು ಮತ್ತು ಪಾಮ್ ಎಣ್ಣೆ ತುಂಬಿದ ಕ್ಯಾನುಗಳನ್ನು, ವಶಪಡಿಸಿಕೊಂಡು ತನಿಖೆ ಮುಂದುವರೆಸಲಾಗಿದೆ. ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಘಟನೆ ಕುರಿತು ಮಾತನಾಡಿ, ಕೆಎಂಎಫ್ ವಿಜಿಲೆನ್ಸ್ ಮಾಹಿತಿ ಮೇರೆಗೆ ಜಂಟಿಯಾಗಿ ಈ ಪ್ರಕರಣ ಪತ್ತೆ ಮಾಡಿದ್ದೇವೆ. ಈಗಾಗಲೇ ನಾಲ್ವರನ್ನು ಬಂಧಿಸಲಾಗಿದೆ ಮತ್ತು ಮತ್ತೊಬ್ಬನ ವಿಚಾರಣೆ ನಡೆಯುತ್ತಿದೆ ಎಂದರು. ಒಂದು ಕೋಟಿಗೂ ಅಧಿಕ ಮೌಲ್ಯದ ವಸ್ತುಗಳು ಸೀಜ್ ಆಗಿರುವುದಾಗಿ ತಿಳಿಸಿದರು. ಪ್ರಾಥಮಿಕ ತನಿಖೆಯ ಪ್ರಕಾರ ಆರೋಪಿಗಳು 2018ರಿಂದಲೇ ಈ ಕೃತ್ಯ ಮಾಡುತ್ತಾ ಬಂದಿದ್ದು, ಕಳೆದ 2 ವರ್ಷಗಳಿಂದ ದೊಡ್ಡ ಪ್ರಮಾಣದಲ್ಲಿ ನಕಲಿ ತುಪ್ಪವನ್ನು ರಾಜ್ಯಕ್ಕೆ ತರುತ್ತಿದ್ದರೆಂಬ ಅಚ್ಚರಿಯ ವಿಷಯ ಹೊರಬಿದ್ದಿದೆ. ಈ ಕೇಸ್‌ನ ಪ್ರಮುಖ ಅಂಶವೇನೆಂದರೆ ಈ ಕೃತ್ಯದ ಮುಖ್ಯ ಆರೋಪಿ ಬಗ್ಗೆ ಯಾವುದೇ ಮಾಹಿತಿ ಸಧ್ಯಕ್ಕೆ ತಿಳಿದುಬಂದಿಲ್ಲ.

ಆಧಾರ್ ಕೇಂದ್ರ ಬಂದ್!

ಆಧಾರ್ ಸೇವಾ ಕೇಂದ್ರದ ಮುಖ್ಯಸ್ಥ ನಿವೃತ್ತ ಕರ್ನಲ್ ಎನ್.ಜಿ.ಕೃಷ್ಣಪ್ರಸಾದ್ ಮಾತನಾಡಿ, ಮೈಸೂರಿನ ವಿಜಯನಗರ ಹಾಗೂ ಸರಸ್ವತಿಪುರಂನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಎರಡು ಆಧಾರ್ ಸೇವಾ ಕೇಂದ್ರಗಳು ಡಿ.1ರಿಂದ ಸ್ಥಗಿತಗೊಳ್ಳಲಿವೆ. ಡಿಸೆಂಬರ್ ನಂತರ ಮೈಸೂರಲ್ಲಿ ಒಂದೇ ಒಂದು ಆಧಾರ್ ಸೇವಾ ಕೇಂದ್ರ ಕಾರ್ಯನಿರ್ವಹಿಸಲಿದೆ ಎಂದರು.



ವಿಜಯನಗರ ಆಧಾರ್ ಸೇವಾ ಕೇಂದ್ರದ ವ್ಯವಸ್ಥಾಪಕ ಚೇತನ್ ಮಾತನಾಡಿ, ಕಳೆದ ಆರು ವರ್ಷದಿಂದ ಮೈಸೂರಿನ ವಿಜಯನಗರ ಹಾಗೂ ಸರಸ್ವತಿಪುರಂನಲ್ಲಿ ಎರಡು ಆಧಾರ್ ಸೇವಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದವು. ಇವೆರಡರಲ್ಲಿ ದಿನಕ್ಕೆ 300ರಿಂದ 350 ಮಂದಿಗೆ ಹೊಸದಾಗಿ ಆಧಾರ್ ಕಾರ್ಡ್ ಮಾಡಿಕೊಡುವುದು, ತಿದ್ದುಪಡಿ ಮಾಡಲಾಗುತ್ತಿತ್ತು. ಆದರೆ, ಗುತ್ತಿಗೆ ಅವಧಿ ಮುಗಿದಿದೆ ಎಂದು ತಿಳಿಸಿದರು.

ಹೊಸ ಕೇಂದ್ರಕ್ಕೆ ಸ್ಥಳ ಪರಿಶೀಲನೆ: ಹೊಸ ಸಂಸ್ಥೆ ಮೂಲಕ ಆಧಾರ್ ಸೇವಾ ಕೇಂದ್ರ ಸ್ಥಾಪನೆಗೆ ಜನರಿಗೆ ಅನುಕೂಲವಾಗುವಂತಹ ಸ್ಥಳ ಆಯ್ಕೆ ಪ್ರಕ್ರಿಯೆ ಆರಂಭವಾಗಿದೆ. ಕರ್ನಾಟಕ ಒನ್, ಮೈಸೂರು ಒನ್ ಕೇಂದ್ರಗಳೂ ಸೇರಿದಂತೆ ಕೆಲವು ಸೈಬರ್ ಕೇಂದ್ರಗಳಲ್ಲಿ ಹೊಸದಾಗಿ ಆಧಾರ್ ಕಾರ್ಡ್ ಮಾಡುವ, ತಿದ್ದುಪಡಿ ಮಾಡುವ ಸೇವೆ ಒದಗಿಸಲಾಗುತ್ತಿದೆ.

ಮೊದಲ ಟೆಸ್ಟ್ ಮೇಲೆ ಭಾರತದ ಹಿಡಿತ



ಕೋಲ್ಕತ್ತಾ, ನ.15(ವಿವಿಹೆಚ್)– ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ನಡೆಯುತ್ತಿರುವ ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ನಡುವಿನ ಮೊದಲ ಟೆಸ್ಟ್ ಮೇಲೆ ಭಾರತ ನಿಯಂತ್ರಣ ಸಾಧಿಸಿದೆ. ದಕ್ಷಿಣ ಆಫ್ರಿಕಾ ಎರಡನೇ ದಿನದಾಟದ ಅಂತ್ಯಕ್ಕೆ ತನ್ನ ದ್ವಿತೀಯ ಇನಿಂಗ್ಸ್‌ನಲ್ಲಿ 93 ರನ್‌ಗಳಿಗೆ ಪ್ರಮುಖ 7 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದೆ.

30 ರನ್‌ಗಳ ಮೊದಲ ಇನಿಂಗ್ಸ್ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿರುವ ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್‌ಗಳು ಭಾರತೀಯರ ಸ್ಪಿನ್ ದಾಳಿಗೆ ಮಂಕಾಗಿ ಒಬ್ಬರ ಹಿಂದೆ ಒಬ್ಬರಂತೆ ಪೆವಿಲಿಯನ್‌ನತ್ತ ಹೆಜ್ಜೆಹಾಕಿದರು.

ರಿಯಾನ್ ರಿಕಲ್ಟನ್ (11), ಏಡಮ್ ಮಾರ್ಕರು (11) ಹಾಗೂ ಮಾರ್ಕೋ ಜಾನ್ಸನ್ (13) ಎರಡಂಕಿ ಗಡಿ ದಾಟಿದರು. ಸ್ಟಬ್ಸ್, ಝೋರ್ಜಿ ಸೇರಿದಂತೆ ಪ್ರಮುಖ ಆಟಗಾರರು ಒಂದಂಕಿಗೆ ವಿಕೆಟ್ ಒಪ್ಪಿಸಿ ಹೊರನಡೆದರು.

ಸದ್ಯ ಕ್ರೀಜ್‌ನಲ್ಲಿರುವ ನಾಯಕ ತೆಂಬಾ ಬವುಮಾ ಅಜೇಯ 29 ರನ್ ಹಾಗೂ ಕಾರ್ಬಿನ್ ಬಾಷ್ 1 ರನ್ ಗಳಿಸಿ, ಮೂರನೇ ದಿನಕ್ಕೆ ಆಟ ಕಾಯ್ದಿರಿಸಿಕೊಂಡಿದ್ದಾರೆ. ಇದರೊಂದಿಗೆ ದಕ್ಷಿಣ ಆಫ್ರಿಕಾ ಎರಡನೇ ಇನಿಂಗ್ಸ್‌ನಲ್ಲಿ 63 ರನ್‌ಗಳ ಮುನ್ನಡೆ ಸಾಧಿಸಿದೆ. ಭಾರತದ ಪರ ಎರಡನೇ ಇನಿಂಗ್ಸ್‌ನಲ್ಲಿ ಕಮಾಲ್ ಮಾಡಿದ ರವೀಂದ್ರ ಜಡೇಜಾ 29ಕ್ಕೆ4 ವಿಕೆಟ್ ಪಡೆದರು. ಕುಲ್ದೀಪ್ ಯಾದವ್ 2 ಹಾಗೂ ಅಕ್ಷರ್ ಪಟೇಲ್ 1 ವಿಕೆಟ್ ಪಡೆದು ಮಿಂಚಿದರು.

ಟೀಂ ಇಂಡಿಯಾ ಇನ್ನಿಂಗ್ಸ್: ಎರಡನೇ ದಿನ 37 ರನ್‌ಗಳೊಂದಿಗೆ ಮೊದಲ ಇನ್ನಿಂಗ್ಸ್ ಆರಂಭಿಸಿದ ಭಾರತ ಕೂಡ 62.2 ಓವರ್‌ಗಳಲ್ಲಿ ಕೇವಲ 189 ರನ್ ಗಳಿಗೆ ಸರ್ವಪತನ ಕಂಡಿತು.

ಭಾರತದ ಪರ ಮೊದಲ ಇನಿಂಗ್ಸ್‌ನಲ್ಲಿ ಕೆ.ಎಲ್. ರಾಹುಲ್ (39 ರನ್) ಅತ್ಯಧಿಕ ರನ್ ಗಳಿಸಿದ ಆಟಗಾರ ಎನಿಸಿಕೊಂಡರು. ವಾಷಿಂಗ್‌ಟನ್ ಸುಂದರ್ (29), ರಿಷಬ್ ಪಂತ್ (27) ರನ್ ಹಾಗೂ ಆಲ್‌ರೌಂಡರ್ ರವೀಂದ್ರ ಜಡೇಜಾ (27) ರನ್ ಗಳಿಸಿ ಔಟ್ ಆದರು. ದಕ್ಷಿಣ ಆಫ್ರಿಕಾ ಪರ ಸೈಮನ್ ಹಾರ್ಮರ್ 30ಕ್ಕೆ4, ಮಾರ್ಕೋ ಜಾನ್ಸನ್ 35ಕ್ಕೆ3 ವಿಕೆಟ್ ಕಬಳಿಸಿದರು.

ಕೆಪಿಆರ್ ಹ್ಯುಂಡೈನಿಂದ ಹೊಸ ಹ್ಯುಂಡೈ ವೆನ್ಯೂ ಬಿಡುಗಡೆ



ಮೈಸೂರು ಹುಣಸೂರು ರಸ್ತೆಯಲ್ಲಿನ ಕೆಪಿಆರ್ ಹ್ಯುಂಡೈ ಶೋ ರೂಂನಲ್ಲಿ ನ.8ರಂದು ಹೆಸರಾಂತ ಆಟೋಮೋಟಿವ್ ಡೀಲರ್‌ಗಳಾದ ಹ್ಯುಂಡೈ ವತಿಯಿಂದ ಹೊಸ ಹ್ಯುಂಡೈ ವೆನ್ಯೂವನ್ನು ಕಾಂತರಾ ಚಾಪ್ಟರ್–1 ಖ್ಯಾತಿಯ ನಟ ಬಾಲ ರಾಜ್ವಾಡಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗಕರ್ಮಿ ಮೈಮ್ ರಮೇಶ್, ಕೆಪಿಆರ್ ಹ್ಯುಂಡೈ ಮ್ಯಾನೇಜಿಂಗ್ ಡೈರೆಕ್ಟರ್ ವಿ.ಜೆ.ಹೇಮಂತ್, ಕೆಪಿಆರ್ ಹ್ಯುಂಡೈನ ಗ್ರಾಹಕರ ಸಮ್ಮುಖದಲ್ಲಿ ಬಿಡುಗಡೆ ಮಾಡಲಾಯಿತು.

ನಾಳೆ ಮೈಸೂರು ವಿವಿಯಿಂದ ಕನ್ನಡ ರಾಜ್ಯೋತ್ಸವ



ಮೈಸೂರು,ನ.15– ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ 70ನೇ ಕನ್ನಡ ರಾಜ್ಯೋತ್ಸವ ದಿನಾಚರಣೆಯನ್ನು ನ.17ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಸೇಂಟ್ ಫಿಲೋಮಿನಾಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಮತ್ತು ಸಾಹಿತಿ ಪ್ರೊ.ಎಂ. ಕೃಷ್ಣೇಗೌಡ ಆಗಮಿಸಲಿದ್ದು, ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಕುರಿತು ವಿಶೇಷ ಉಪನ್ಯಾಸ ನೀಡುವರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮಕ್ಕಳ ದಿನಾಚರಣೆಯಂದೇ ಹೆಣ್ಣು ಮಗು ಬೀದಿಗೆ ಬಿಸಾಡಿದ ಮಹಾತಾಯಿ

ಮೈಸೂರು,ನ.15(ಎಂಟಿವೈ)–ಮಕ್ಕಳ ದಿನಾಚರಣೆಯಂದೇ ನವಜಾತ ಶಿಶುವೊಂದನ್ನು ಮಹಾತಾಯಿಯೊಬ್ಬರು ರಸ್ತೆಬದಿ ಬೀಸಾಡಿದ್ದು, ಮಗುವಿನ ಚೀರಾಟ ಕೇಳಿ ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಅದನ್ನು ರಕ್ಷಣೆ ಮಾಡಿ ಸರ್ಕಾರಿ ದತ್ತು ಕೇಂದ್ರಕ್ಕೆ ಸ್ಥಳಾಂತರಿಸಿದ್ದಾರೆ.

ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿಯ ಹೆಗ್ಗೂರು ಗ್ರಾಮದ ಯಾಚೇನಹಳ್ಳಿ ಸುಲ್ತಾನ್ ರಸ್ತೆಯ ಸರ್ಕಲ್ ಬಳಿ ಕಳೆದ (ಡಿ.14) ರಾತ್ರಿ 8.30ರ ವೇಳೆಯಲ್ಲಿ ಬಿಸಾಡಿದ್ದ ಎರಡು ದಿನಗಳ ನವಜಾತ ಹೆಣ್ಣು ಶಿಶುವಿನ ಚೀರಾಟ ಗಮನಿಸಿದ ಹೆಗ್ಗೂರು ಗ್ರಾಮದ ಸಂದೇಶ್ ಕೂಡಲೇ ಸ್ಥಳೀಯರೊಂದಿಗೆ ರಕ್ಷಣೆ ಮಾಡಿ, ತಮ್ಮ ಮನೆಗೆ ಕೊಂಡೊಯ್ದಿದ್ದಾರೆ.

ನಂತರ ಸ್ಥಳೀಯ ಆಶಾ ಕಾರ್ಯಕರ್ತೆ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ವಿಷಯವನ್ನು ಮಕ್ಕಳ ಸಿಡಿಪಿಓ ಗಮನಕ್ಕೆ ತರಲಾಗಿದೆ. ಸಿಡಿಪಿಓ ಅವರು ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಿದ್ದಾರೆ. ಕೂಡಲೇ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಅಪೇಕ್ಷಿತ ಭಾಸ್ಕರ್ ಮತ್ತು ಕೌನ್ಸಿಲರ್ ದಿವ್ಯ ಅವರೊಂದಿಗೆ ಸಿಡಿಪಿಓ ಗೋವಿಂದರಾಜು ಕೂಡಲೇ ಊರಿಗೆ ಧಾವಿಸಿ ಪೊಲೀಸರ ಸಹಾಯದೊಂದಿಗೆ ಸುವರ್ಣ ಮತ್ತು ಸಂದೇಶ ಅವರಿಂದ ಮಗುವನ್ನು ವಶಕ್ಕೆ ಪಡೆದರು. ಬಳಿಕ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ರವಿಚಂದ್ರ ಅವರ ಮುಂದೆ ಹಾಜರುಪಡಿಸಿದ್ದು, ಅದನ್ನು ಸರ್ಕಾರಿ ದತ್ತು ಕೇಂದ್ರಕ್ಕೆ ಒಪ್ಪಿಸಲಾಗಿದೆ. ಈ ವೇಳೆ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ರವಿಚಂದ್ರ ಮಾತನಾಡಿ, ಮಗು ಅಥವಾ ಮಕ್ಕಳು ದೇಶದ ಸಂಪತ್ತು. ಯಾರಿಗಾದರೂ ಮಕ್ಕಳು ಬೇಡವಾದರೆ ಬೀದಿಯಲ್ಲಿ ಎಸೆಯಬೇಡಿ. ಹತ್ತಿರದ ಅಂಗನವಾಡಿ ಅಥವಾ ಮಕ್ಕಳ ಕಲ್ಯಾಣ ಸಮಿತಿಗೆ ತಂದು ಒಪ್ಪಿಸಿ. ಅದು ಸಾಧ್ಯವಾಗದಿದ್ದಲ್ಲಿ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡಿ ಮಕ್ಕಳ ಜೀವ ಉಳಿಸಿ ಎಂದು ಮನವಿ ಮಾಡಿದ್ದಾರೆ.

ಅಂಜನಾದ್ರಿ ಬೆಟ್ಟಕ್ಕೆ ವಾಲ್ಮೀಕಿ ಅಭಯಾರಣ್ಯ ಎಂದು ಘೋಷಿಸಲು ಶಾಸಕ ಜನಾರ್ಧನ ರೆಡ್ಡಿ ಆಗ್ರಹ

ಮೈಸೂರಲ್ಲಿ ಬಿರ್ಸಾಮುಂಡಾ ಜಯಂತಿಯಲ್ಲಿ ಭಾಗಿ; ಆದಿವಾಸಿ ಯುವಕನ ಸಾಹಸ, ಹೋರಾಟ ಸ್ಮರಣೆ

ಮೈಸೂರು,ನ.15(ಎಂಟಿವೈ)–ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖವಿರುವ ಅಂಜನಾದ್ರಿ ಬೆಟ್ಟ ಪ್ರದೇಶವನ್ನು ವಾಲ್ಮೀಕಿ ಅಭಯಾರಣ್ಯ ಎಂದು ಘೋಷಿಸುವಂತೆ ಶಾಸಕ ಜನಾರ್ಧನ ರೆಡ್ಡಿ ಒತ್ತಾಯಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಬಿಜೆಪಿ ವತಿಯಿಂದ ನಡೆದ ಆದಿವಾಸಿ ನಾಯಕ ಬಿರ್ಸಾ ಮುಂಡಾ ಅವರ ಜಯಂತಿ ಅಂಗವಾಗಿ ಆಯೋಜಿಸಿದ್ದ ಜನಜಾತಿ ಗೌರವ ದಿವಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಸಂಸ್ಕೃತಿ ಮತ್ತು ಪರಂಪರೆಗೆ ಆದಿವಾಸಿಗಳ ಕೊಡುಗೆ ಅಪಾರ. ವಾಲ್ಮೀಕಿ ಬರೆದ ರಾಮಾಯಣದಲ್ಲಿ ರಾಮ ಮತ್ತು ಲಕ್ಷ್ಮಣ ಕಿಷ್ಕಿಂಧೆಗೆ ಬಂದಿದ್ದು, ಅಲ್ಲಿ ಹನುಮನ ಪರಿಚಯ ಆದದ್ದು, ಬಳಿಕ ವಾಲಿಯನ್ನು ವಧೆ ಮಾಡಿದ ಸಂಗತಿಗಳನ್ನು ಉಲ್ಲೇಖಿಸಲಾಗಿದೆ. ಹಾಗಾಗಿ ಇಲ್ಲಿರುವ ಅರಣ್ಯ ಪ್ರದೇಶಕ್ಕೆ ವಾಲ್ಮೀಕಿ ಅಭಯಾರಣ್ಯ ಎಂದು ರಾಜ್ಯ ಸರ್ಕಾರ ಘೋಷಿಸಬೇಕು. ಈ ಕುರಿತು ಈಗಾಗಲೇ ಮನವಿ ಸಲ್ಲಿಸಲಾಗಿದೆ ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಬಿಜೆಪಿ ವತಿಯಿಂದ ನಡೆದ ಬಿರ್ಸಾ ಮುಂಡಾ ಜಯಂತಿಯಲ್ಲಿ ಬಿರ್ಸಾಮುಂಡಾ ಅವರ ಭಾವಚಿತ್ರಕ್ಕೆ ಜನಾರ್ಧನ್ ರೆಡ್ಡಿ ಪುಷ್ಪಾರ್ಚನೆ ಮಾಡಿದರು.

ಆದಿವಾಸಿಗಳ ಮೇಲೆ ಬ್ರಿಟಿಷ್ ದಬ್ಬಾಳಿಕೆ, ಆಕ್ರಮಣದ ವಿರುದ್ಧ ಆದಿವಾಸಿ ಯುವಕ ಬಿರ್ಸಾ ಮುಂಡಾ ಹೋರಾಟ ಮಾಡುವ ಮೂಲಕ ತಮ್ಮ ಸಂಸ್ಕೃತಿ ಉಳಿವಿಗೆ ಶ್ರಮ ವಹಿಸಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಹೋರಾಟ ಮಾಡಿದವರ ಹೆಸರು ಎಂದರೆ ಗಾಂಧಿ, ನೆಹರು, ಸುಭಾಷ್ ಚಂದ್ರ ಬೋಸ್ ಹೆಸರು ಮಾತ್ರ ಬರುತ್ತವೆ. ಆದರೆ, ಇನ್ನು ಸಾಕಷ್ಟು ಮಂದಿ ಹೋರಾಟಗಾರರು ಇದ್ದಾರೆ. ಆದರೆ, ಈ ಬಗ್ಗೆ ನಮಗೆ ಮಾಹಿತಿ ಇಲ್ಲ. ಸ್ವಾತಂತ್ರ್ಯಕ್ಕಾಗಿ ಬಿರ್ಸಾ ಮುಂಡಾ ಹೋರಾಟ ಮಾಡಿ, ತನ್ನ 25ನೇ ವಯಸ್ಸಿಗೇ ಬ್ರಿಟಿಷರ ಸಂಚಿಗೆ ಬಲಿಯಾದರು ಎಂದರು.

ಮುಂದಿನ ದಿನಗಳಲ್ಲಿ ಆದಿವಾಸಿ ನಾಯಕ ಬಿರ್ಸಾ ಮುಂಡಾ ಅವರ ಜಯಂತಿ ಒಂದು ಕೊಠಡಿಗೆ ಸೀಮಿತವಾಗದೇ, ಸಾರ್ವಜನಿಕ ಸ್ಥಳದಲ್ಲಿ ವಿಜೃಂಭಣೆಯಿಂದ ನಡೆಯಬೇಕು. ಹಾಗೆಯೆ ಮುಧೋಳದ ಹಲಿಗಲಿಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದ ಬೇಡರ ಸ್ಮರಣಾರ್ಥ ಒಂದು ಶಾಶ್ವತ ಯೋಜನೆ ರೂಪಿಸಬೇಕಿದೆ. ಅದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಸಂಸದ ಯದುವೀರ್ ಒಡೆಯರ್ ಮಾತನಾಡಿ, ಪ್ರಕೃತಿ ಆರಾಧನೆ ಬುಡಕಟ್ಟು ಸಂಸ್ಕೃತಿಯ ಭಾಗವಾಗಿದೆ. ಜತೆಗೆ ಅದೇ ಅವರ ಧರ್ಮವೂ ಆಗಿದೆ. ಇದೇ ಸಿದ್ಧಾಂತ ಇಟ್ಟುಕೊಂಡು ಹೋರಾಟ ಮಾಡಿದ್ದು ಬಿರ್ಸಾ ಮುಂಡಾ. ಇದು ಸ್ವಾತಂತ್ರ್ಯ ಹೋರಾಟ ಅಷ್ಟೇ ಅಲ್ಲದೇ ಸಾಂಸ್ಕೃತಿಕ ಹೋರಾಟವೂ ಆಗಿತ್ತು. ಈ ಬಗ್ಗೆ ನನಗೆ ಐದು ವರ್ಷಗಳ ಹಿಂದೆ ತಿಳಿಯಿತು. ಕಾರಣ ಪಠ್ಯದಲ್ಲಿ ಇದ್ಯಾವುದನ್ನೂ ಹೇಳಿಕೊಡಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ಸಮಾಜದ ನಾಯಕರು ಹೋರಾಟ ಮಾಡಿದ್ದಾರೆ. ಆದರೆ, ಅವರ ಬಗ್ಗೆ ಎಲ್ಲಿಯೂ ಉಲ್ಲೇಖ ಇಲ್ಲ. ಈ ಕಾರ್ಯಕ್ರಮಗಳ ಮೂಲಕ ಬಿರ್ಸಾ ಮುಂಡಾ ಬಗ್ಗೆ ತಿಳಿಸಿಕೊಡುವ ಕೆಲಸ ಶ್ಲಾಘನೀಯ ಎಂದರು.

ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಮಾತನಾಡಿ, ಜನಜಾತಿಯ ಗೌರವ ದಿವಸ್ ಆಚರಣೆ ಮೂಲಕ ಬಿರ್ಸಾ ಮುಂಡಾ ಅವರ ಜನ್ಮ ದಿನ ಆಚರಿಸಲಾಗುತ್ತಿದೆ. ಒಬ್ಬ ಬುಡಕಟ್ಟು ಹುಡುಗನನ್ನು ದೇಶವಿಡೀ ಸ್ಮರಣೆ ಮಾಡ್ತಿದೆ ಎಂದರೆ ಅವರ ಕೊಡುಗೆ ಸಾಕ್ಷಿದೆ. ಇಪ್ಪತ್ತೈದು ವರ್ಷ ಜೀವಿಸಿದ ಹುಡುಗ ಬ್ರಿಟಿಷರ ವಿರುದ್ಧ ಹೋರಾಡಿದ್ದರು. ಇದರ ಬಗ್ಗೆ ಪಠ್ಯಗಳಲ್ಲಿ ಹೇಳಿಕೊಡಲಾಗಿಲ್ಲ. ಕೇವಲ ಗಾಂಧಿ, ನೆಹರು ಸ್ವಾತಂತ್ರ್ಯ ಹೋರಾಟ ಮಾಡಿದರು ಎಂದು ತಿಳಿಸಲಾಗುತ್ತದೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಬಿರ್ಸಾ ಮುಂಡಾ ಅಂತ ಸಾವಿರಾರು ಮಂದಿ ಭಾಗಿಯಾಗಿದ್ದಾರೆ. ಇವರಲ್ಲಿ ಭಗತ್ ಸಿಂಗ್, ಅಜಾದ್ ಅವರುಗಳು ಇದ್ದಾರೆ ಎಂದರು.

ಬಿರ್ಸಾ ಮುಂಡಾ ಮಾಡಿದ ಜನಜಾಗೃತಿ ಕೆಲಸ ಮತ್ತು ಹೋರಾಟದ ನೆನಪಿಗೆ ಕೇಂದ್ರ ಸರ್ಕಾರ 2021ರಿಂದ ಜನಜಾತಿಯ ಗೌರವ ದಿನ ಎಂದು ಆಚರಿಸುತ್ತಿದೆ. ಈ ಮೂಲಕ ದೇಶದಲ್ಲಿ ಮೊದಲ ಬಾರಿಗೆ ಆದಿವಾಸಿ ಹುಡುಗನ ದಿನ ಆಚರಿಸಲಾಗುತ್ತಿದೆ. ಇದಕ್ಕೆ ಕಾರಣ ಆದವರು ಪ್ರಧಾನಿ ಮೋದಿ ಎಂದರು. ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ರಾಜ್ಯ ಎಸ್.ಟಿ. ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತು, ಬಿಜೆಪಿ ರಾಜ್ಯ ವಕ್ತಾರ ಎಂ.ಜಿ. ಮಹೇಶ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕೆ.ಎನ್.ಸುಬ್ಬಣ್ಣ, ಮುಖಂಡರಾದ ಸಂದೇಶ್‌ಸ್ವಾಮಿ, ಅಪ್ಪಣ್ಣ, ಶಿವರಾಜು, ಮಂಗಳಾ ಸೋಮಶೇಖರ್, ಮಿರ್ಲೆ ಶ್ರೀನಿವಾಸ ಗೌಡ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದಿಂದ ಕನ್ನಡ ರಾಜ್ಯೋತ್ಸವ



ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದಿಂದ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನವನ್ನು ಶಾರದಾ ನಿಲಯದ ಮಕ್ಕಳೊಂದಿಗೆ ಆಚರಿಸಲಾಯಿತು. ಈ ವೇಳೆ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಸುಪ್ರೀಂಕೋರ್ಟ್ ತೀರ್ಪಿನಿಂದ ರಾಜ್ಯಕ್ಕೆ ಅನುಕೂಲ

ಸರ್ಕಾರ ಕೂಡಲೇ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಬೇಕು



ಜಯಪ್ರಕಾಶ್

ಮೈಸೂರು,ನ.15(ಜಿಎ)–ಮೇಕೆದಾಟು ಯೋಜನೆ ಕುರಿತು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಸ್ವಾಗತಾರ್ಹವಾಗಿದೆ. ಹೀಗಾಗಿ ಕೇಂದ್ರ ಸರ್ಕಾರದ ನೆರವು ಪಡೆದು ರಾಜ್ಯ ಸರ್ಕಾರ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು ಎಂದು ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮೇಕೆದಾಟು ಯೋಜನೆ ಬಗ್ಗೆ ಬಹಳಷ್ಟು ವರ್ಷಗಳಿಂದ ಚರ್ಚೆಯಾಗುತ್ತಿದೆ. ಆದರೆ ನೆರೆಯ ತಮಿಳುನಾಡು ಸರ್ಕಾರ ಕಾವೇರಿ ನೀರಿಗೆ ಸಂಬಂಧಿಸಿದಂತೆ ಪದೇ ಪದೇ ಕ್ಯಾತೆ ತೆಗೆಯುವುದಲ್ಲದೆ ಕಾವೇರಿ ಯೋಜನೆಗಳಿಗೆ ಅಡ್ಡಗಾಲು ಹಾಕುತ್ತಿದೆ. ಹೀಗಿರುವಾಗ ಸುಪ್ರೀಂಕೋರ್ಟ್ ತೀರ್ಪು ರಾಜ್ಯಕ್ಕೆ ಅನುಕೂಲಕರವಾಗಿದೆ ಎಂದರು.

ಈ ಹಿಂದೆ ತಮಿಳುನಾಡಿಗೆ 177 ಟಿಎಂಸಿ ನೀರು ಬಿಡಬೇಕೆಂದು ಪ್ರಾಧಿಕಾರ ಆದೇಶ ನೀಡಿದ ಬಳಿಕ ಕಾವೇರಿ ಹೋರಾಟ ತಣ್ಣಗಾಯಿತು. ಆದೇಶ ಬಂದ ಮೇಲೆ ನಾವು ಏನನ್ನೂ ಮಾಡಲಾಗದು ಎಂದು ಸುಮ್ಮನಾದರು. ಇದು ಸರಿಯಲ್ಲ. ಪ್ರಾಧಿಕಾರದ ಪುನಾರಚನೆಗಾಗಿ, ಮೇಕೆದಾಟು ಯೋಜನೆ ಪ್ರಾರಂಭಕ್ಕಾಗಿ ಈಗಲೂ ಹೋರಾಟ ನಡೆಸಬೇಕೆಂದು ಮನವಿ ಮಾಡಿದರು.

ಕೆಲ ತಿಂಗಳ ಹಿಂದೆ ಕಾವೇರಿ ನೀರಿ ಗಾಗಿ ಕ್ರಿಯಾ ಸಮಿತಿ ಹೋರಾಟ ಮಾಡಿ ದಾಗ ಯಾವೊಬ್ಬ ಜನಪ್ರತಿನಿಧಿಯೂ ಸೌಜನ್ಯಕ್ಕಾದರೂ ಆಗಮಿಸಿ ಬೆಂಬಲ ಸೂಚಿಸದಿರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಈಗಲೂ ಕಾಲ ಮಿಂಚಿಲ್ಲ, ರಾಜ್ಯದ ಎಲ್ಲಾ ಸಂಸದರು, ಜನಪ್ರತಿನಿಧಿಗಳು ಈ ನಿಟ್ಟಿನಲ್ಲಿ ಕಾವೇರಿ ನದಿ ನೀರು ಉಳಿಸಿಕೊಳ್ಳಲು ಹೋರಾಟ ಮಾಡಬೇಕು, ಕೇಂದ್ರದ ಮೇಲೆ ಒತ್ತಡ ಹೇರಬೇಕೆಂದು ಜಯಪ್ರಕಾಶ್ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ತೇಜಸ್ ಲೋಕೇಶ್‌ಗೌಡ, ಮೂಗೂರು ನಂಜುಂಡ ಸ್ವಾಮಿ, ಸಿಂಧುವಳ್ಳಿ ಶಿವಕುಮಾರ್, ಹೊನ್ನೇಗೌಡ, ಕೃಷ್ಣಪ್ಪ ಉಪಸ್ಥಿತರಿದ್ದರು.

ಬೇಲದಕುಪ್ಪೆ ಶ್ರೀ ಮಹದೇಶ್ವರ ಸ್ವಾಮಿಯ ವಾರ್ಷಿಕ ಜಾತ್ರೆ

ಮೈಸೂರು,ನ.15–ನವೆಂಬರ್ 16ರಿಂದ 18ರವರೆಗೆ ನಡೆಯುವ ಬೇಲದಕುಪ್ಪೆ ಶ್ರೀ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುವುದರಿಂದ ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗುವ ಸಂಭವವಿದ್ದು, ಆಕಸ್ಮಿಕವಾಗಿ ವನ್ಯಪ್ರಾಣಿಗಳು ಮನುಷ್ಯನ ಮೇಲೆ ದಾಳಿ ಮಾಡುವ ಸಾಧ್ಯತೆಗಳಿರುತ್ತವೆ. ಸದರಿ ದೇವಸ್ಥಾನದ ಆವರಣದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಜನರು ಸೇರುವುದು, ವಾಸ್ತವ್ಯ ಹೂಡುವುದರಿಂದ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ವನ್ಯಪ್ರಾಣಿಗಳು ಹೊರಬಂದು ಮಾನವ–ವನ್ಯಪ್ರಾಣಿ ಸಂಘರ್ಷ ಹೆಚ್ಚಾಗುವ ಸಂಭವವಿರುತ್ತದೆ. ಆದ್ದರಿಂದ ವಿಷಯದ ಗಂಭೀರತೆಯನ್ನು ಅರಿತು ಮುಂದೆ ಆಗಬಹುದಾದಂತಹ ಅನಾಹುತವನ್ನು ತಡೆಗಟ್ಟುವ ಉದ್ದೇಶದಿಂದ ಸದರಿ ಜಾತ್ರೆಗೆ ಜನದಟ್ಟಣೆಯನ್ನು ತಡೆಯುವ ಹಿತದೃಷ್ಟಿಯಿಂದ ಹೊರಗಿನ, ಬೇರೆ ಸ್ಥಳಗಳಿಂದ ಬರುವ ಭಕ್ತಾದಿಗಳಿಗೆ ಅವಕಾಶ ನೀಡದೇ, ಸ್ಥಳೀಯರು ಮಾತ್ರ ಶಾಂತ ರೀತಿಯಲ್ಲಿ ಕೇವಲ ಪೂಜಾ ಕಾರ್ಯ ಕೈಗೊಂಡು ಹಿಂದಿರುಗುವಂತೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಸನ್ಮಾನ

ಮೈಸೂರು,ನ.15(ಎಂಟಿವೈ)– ಕನ್ನಡ ಕಟ್ಟುವ ಕೆಲ ಕೆಲಸವನ್ನು ಪ್ರತಿಯೊಬ್ಬರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾಡುವ ಮೂಲಕ ಕನ್ನಡ ಭಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸಬೇಕು ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷೆ, ಮೈಸೂರು ಲೇಡಿಸ್ ಅಸೋಸಿಯೇಷನ್ ಅಧ್ಯಕ್ಷೆ ಮಲ್ಲಿಗೆ ವೀರೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಮೈಸೂರು ಲೇಡಿಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯಾದ್ಯಂತ ಕನ್ನಡ ರಾಜ್ಯೋತ್ಸವದ ಸಂಭ್ರಮ ಮನೆ ಮಾಡಿದೆ. ಎಲ್ಲೆಲ್ಲೂ ಕನ್ನಡಾಂಭೆಯ ಗುಣಗಾನವಾಗುತ್ತಿದೆ. ಆದರೆ, ಕೇವಲ ಆಚರಣೆ ಮಾತ್ರ ಸೀಮಿತಗೊಳ್ಳಬಾರದು. ನಾವು ನವೆಂಬರ್ ತಿಂಗಳಿಗೆ ಮಾತ್ರ ಕನ್ನಡಿಗರಾಗಬಾರದು. ವರ್ಷವಿಡೀ ಕನ್ನಡ ಬಳಸುವ, ಬೆಳೆಸುವ ಕಾಯಕ ಮಾಡಬೇಕು. ವಿವಿಧ ಕಾರಣಗಳಿಂದ ಕರುನಾಡಿನಲ್ಲಿರುವ ಅನ್ಯಭಾಷಿಗರು ಕನ್ನಡಕ್ಕೆ ಗೌರವ ನೀಡಿ, ಕನ್ನಡ ಕಲಿಯಬೇಕು. ಶ್ರೀಮಂತ ಭಾಷೆಯಾಗಿರುವ ಕನ್ನಡ ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪಣ ತೊಡಬೇಕು ಎಂದರು.



ಮೈಸೂರು ಲೇಡಿಸ್ ಅಸೋಸಿಯೇಷನ್ ವತಿಯಿಂದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತರ ಸನ್ಮಾನಿಸಲಾಯಿತು.

ಮೈಸೂರು ಲೇಡಿಸ್ ಅಸೋಸಿಯೇಷನ್ ವತಿಯಿಂದ ಕಳೆದ 24 ವರ್ಷಗಳಿಂದ ನಿರಂತರವಾಗಿ ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತಿದೆ. ಮುಂದಿನ ತಿಂಗಳು ವಸ್ತುಪ್ರದರ್ಶನದಲ್ಲಿ ಮಹಿಳಾ ಸಮಾವೇಶ ನಡೆಸಲು ಯೋಜನೆ ರೂಪಿಸಲಾಗಿದೆ. ಇದೇ ವೇಳೆ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ನಂತರ, ಸಂಘದ ಮಹಿಳೆಯರು ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್, ಅಂಬರೀಶ್ ಚಿತ್ರದ ಹಾಡುಗಳು, ಕುವೆಂಪು, ಬೇಂದ್ರೆ ಅವರ ಗೀತೆಗಳನ್ನು ಹಾಡಿದರು.

ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪತ್ರಕರ್ತರಾದ ಎಂ.ಟಿ. ಯೋಗೇಶ್‌ಕುಮಾರ್, ಕೆ.ಬಿ.ರಮೇಶ ನಾಯಕ, ಎಂ.ಮಹೇಶ್ ಭಗೀರಥ, ಹಂಪಾ ನಾಗರಾಜ್, ಪತ್ರಿಕಾ ಛಾಯಾಗ್ರಾಹಕರಾದ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್, ಎಂ.ಎಸ್.ಬಸವಣ್ಣ (ಅನುರಾಗ್ ಬಸವರಾಜ್) ಹಾಗೂ ಎಸ್.ಆರ್.ಮಧುಸೂದನ್ ಅವರನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು. ಮೈಸೂರು ಲೇಡಿಸ್ ಅಸೋಸಿಯೇಷನ್ ಉಪಾಧ್ಯಕ್ಷೆ ಪವಿತ್ರಾ, ಕಾರ್ಯದರ್ಶಿ ವಿದ್ಯಾ, ಖಜಾಂಜಿ ಪ್ರಭಾ ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

ನ.18, ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.15–ಮೇಗಳಾಪುರ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ನ.18ರಂದು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಇನಾಂ ಉತ್ತನಹಳ್ಳಿ, ಎಂ.ಸಿ. ಹುಂಡಿ, ಕೀಳನಪುರ, ಸಿದ್ದರಾಮನ ಹುಂಡಿ, ಮೇಗಳಾಪುರ, ಮಾಧವಗೆರೆ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮೀಪುರ, ಪಿ.ಜಿ ಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿ ಪಾಳ್ಯ, ಹೊಸಹಳ್ಳಿ, ರಂಗನಾಥಪುರ, ಶ್ರೀನಿವಾಸಪುರ, ಯಡಕೊಳ, ಕಡವೆಕಟ್ಟೆಹುಂಡಿ, ಅಂಚೆಹುಂಡಿ, ದೇವೇಗೌಡನಹುಂಡಿ, ಮುದ್ದೇಗೌಡನಹುಂಡಿ, ಕುಪ್ಪೆಗಾಲ, ವರಕೋಡು ಪೇಪರ್ ಮಿಲ್, ಎಸ್.ಆರ್ ಇಂಡಸ್ಟ್ರೀಸ್, ಜಾಗ್ವರಿ ಸಿಮೆಂಟ್ ಇಂಡಸ್ಟ್ರೀಸ್, ರಾಜಶ್ರೀ ಇಂಡಸ್ಟ್ರೀಸ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಯಮಿತ ನಿಲುಗಡೆಯಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.


ದೇಶ – ವಿದೇಶ

ಬಿಹಾರ ಚುನಾವಣೆ ಫಲಿತಾಂಶ: ಕುಟುಂಬಕ್ಕೆ ಲಾಲು ಪುತ್ರಿ ಗುಡ್ ಬೈ



ಪಾಟ್ನಾ: ಬಿಹಾರ ವಿಧಾನಸಭಾ ಚುನಾವಣೆ ಫಲಿತಾಂಶ ಆರ್‌ಜೆಡಿ ನಾಯಕ ಲಾಲು ಪ್ರಸಾದ್‌ಗೆ ರಾಜಕೀಯವಾಗಿ ಹೊಡೆತ ನೀಡಿರುವುದಷ್ಟೇ ಅಲ್ಲದೇ ಕೌಟುಂಬಿಕವಾಗಿಯೂ ಆಘಾತ ಉಂಟು ಮಾಡಿದೆ. ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶಗಳಲ್ಲಿ ರಾಷ್ಟ್ರೀಯ ಜನತಾದಳ (ಆರ್‌ಜೆಡಿ)–ಕಾಂಗ್ರೆಸ್ ನೇತೃತ್ವದ ಮಹಾಘಟಬಂಧನ್ ಸೋತ ಒಂದು ದಿನದ ನಂತರ ಲಾಲು ಪ್ರಸಾದ್ ಯಾದವ್ ಅವರ ಪುತ್ರಿ ಮತ್ತು ತೇಜಸ್ವಿ ಯಾದವ್ ಅವರ ಸಹೋದರಿ ರೋಹಿಣಿ ಆಚಾರ್ಯ ರಾಜಕೀಯವನ್ನು ತೊರೆಯುತ್ತಿರುವುದಾಗಿ ಘೋಷಿಸಿದ್ದಾರೆ. ರೋಹಿಣಿ ಆಚಾರ್ಯ, ಸಂಜಯ್ ಯಾದವ್ ಮತ್ತು ರಮೀಜ್ ಅವರು ರಾಜಕೀಯವನ್ನು ತೊರೆಯುವಂತೆ ಮತ್ತು ಕುಟುಂಬವನ್ನು ತ್ಯಜಿಸುವಂತೆ ಕೇಳಿಕೊಂಡಿದ್ದಾರೆ. ಆದ್ದರಿಂದ, ಅವರು ಎಲ್ಲಾ ಆಪಾದನೆಗಳನ್ನು ನನ್ನ ಮೇಲೆ ಹೊರಿಸುತ್ತಿದ್ದಾರೆ. ನಾನು ರಾಜಕೀಯ ತ್ಯಜಿಸುತ್ತಿದ್ದೇನೆ ಮತ್ತು ನನ್ನ ಕುಟುಂಬವನ್ನು ತ್ಯಜಿಸುತ್ತಿದ್ದೇನೆ. ಸಂಜಯ್ ಯಾದವ್ ಮತ್ತು ರಮೀಜ್ ನನ್ನನ್ನು ಕೇಳಿಕೊಂಡಿದ್ದು ಇದನ್ನೇ. ಮತ್ತು ನಾನು ಎಲ್ಲಾ ಆಪಾದನೆಗಳನ್ನು ಹೊರುತ್ತಿದ್ದೇನೆ ಎಂದು ರೋಹಿಣಿ X ನಲ್ಲಿ ತಮ್ಮ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಬಿಬಿಸಿ ವಿರುದ್ಧ 44 ಸಾವಿರ ಕೋಟಿ ಮಾನನಷ್ಟ ಮೊಕದ್ದಮೆಯ ಬೆದರಿಕೆ ಹಾಕಿದ ಟ್ರಂಪ್



ವಾಷಿಂಗ್ಟನ್: ಕಳೆದ ವರ್ಷ ಪ್ರಸಾರವಾದ ಸುದ್ದಿ ಸಾಕ್ಷ್ಯಚಿತ್ರವೊಂದರಲ್ಲಿ ತಮ್ಮ ಭಾಷಣವನ್ನು ಎಡಿಟ್ ಮಾಡಿ ಪ್ರಸಾರ ಮಾಡಿದ್ದಕ್ಕಾಗಿ ಬಿಬಿಸಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಕ್ಯಾಪಿಟಲ್ ಹಿಲ್ಸ್ ಗಲಭೆಗೆ ಪ್ರಚೋದನೆ ಎಂಬಂತೆ ಭಾಷಣವನ್ನು ಎಡಿಟ್ ಮಾಡಿ ಬಳಸಲಾಗಿದೆ ಎಂಬುದು ಅವರ ಆರೋಪವಾಗಿದೆ. ಈ ಸಂಬಂಧ ಬಿಬಿಸಿ ಕ್ಷಮೆ ಕೇಳಿದ್ದರೂ ಕಾನೂನು ಕ್ರಮ ಕೈಗೊಳ್ಳುವುದಾಗಿ ಟ್ರಂಪ್ ಗುಡುಗಿದ್ದಾರೆ. ಬಹುಶಃ ಮುಂದಿನ ವಾರ ನಾವು ಅವರ(ಬಿಬಿಸಿ) ವಿರುದ್ಧ ಮೊಕದ್ದಮೆ ಹೂಡುತ್ತೇವೆ. ಒಂದು ಶತಕೋಟಿ ಡಾಲರ್ ನಿಂದ (ಅಂದಾಜು 8,873 ಕೋಟಿ) 5 ಶತಕೋಟಿ ಡಾಲರ್‌ಗಳವರೆಗೆ(ಅಂದಾಜು 44,365 ಕೋಟಿ) ಪರಿಹಾರ ಕೇಳುತ್ತೇವೆ ಎಂದು ಟ್ರಂಪ್ ಶನಿವಾರ ರಾತ್ರಿ ಏರ್ ಫೋರ್ಸ್ ಒನ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ. ಟ್ರಂಪ್ ಅವರ ಭಾಷಣವನ್ನು ಎಡಿಟ್ ಮಾಡಿ, 2021ರ ಕ್ಯಾಪಿಟಲ್ ಗಲಭೆಗೆ ಕುಮ್ಮಕ್ಕು ನೀಡಿದಂತೆ ಬಿಂಬಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ಗುರುವಾರ ಟ್ರಂಪ್ ಅವರನ್ನು ಕ್ಷಮೆಯಾಚಿಸಿತ್ತು.

ಮಂಗಳೂರು ಬಳಿ ಸರಣಿ ಅಪಘಾತ: ಮೂವರು ಸಾವು

ಮಂಗಳೂರು: ಮಂಗಳೂರಿನ ಹೊರವಲಯದ ಪಣಂಬೂರು ಜಂಕ್ಷನ್ ಬಳಿ ಶನಿವಾರ ಎರಡು ಟ್ಯಾಂಕರ್‌ಗಳು, ಒಂದು ಆಟೋರಿಕ್ಷಾ ಮತ್ತು ಒಂದು ಎಸ್‌ಯುವಿ ಕಾರಿನ ನಡುವೆ ಸರಣಿ ಅಪಘಾತ ಸಂಭವಿಸಿದ್ದು, ಮೂವರು ಸಾವನ್ನಪ್ಪಿದ್ದಾರೆ. ಇಂದು ಬೆಳಗ್ಗೆ 11 ಗಂಟೆ ಸುಮಾರಿಗೆ ಪಣಂಬೂರು ಜಂಕ್ಷನ್‌ನಲ್ಲಿ ಹಸುವೊಂದು ಇದ್ದಕ್ಕಿದ್ದಂತೆ ರಸ್ತೆ ದಾಟಲು ಪ್ರಯತ್ನಿಸಿದಾಗ, ಮುಲ್ಕಿಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಗ್ಯಾಸ್ ಟ್ಯಾಂಕರ್ ಚಾಲಕ ಇದ್ದಕ್ಕಿದ್ದಂತೆ ಬ್ರೇಕ್ ಹಾಕಿ ನಿಲ್ಲಿಸಿದ್ದಾರೆ.



ಆ ಟ್ಯಾಂಕರ್ ಅನ್ನು ಹಿಂಬಾಲಿಸಿದ ಆಟೋರಿಕ್ಷಾ ಸಕಾಲದಲ್ಲಿ ನಿಲ್ಲಿಸುವಲ್ಲಿ ಯಶಸ್ವಿಯಾಯಿತು. ಅಲ್ಲದೆ, ಅದರ ಹಿಂದೆ ಬರುತ್ತಿದ್ದ ಎಸ್‌ಯುವಿ ಕಾರು ಸಹ ಹಾಗೆಯೇ ನಿಂತಿತು. ಆದರೆ ಅತಿ ವೇಗದಲ್ಲಿ ಹಿಂಭಾಗದಿಂದ ಬರುತ್ತಿದ್ದ ಮತ್ತೊಂದು ಟ್ಯಾಂಕರ್ ಬ್ರೇಕ್ ಹಾಕಲು ವಿಫಲವಾಗಿ ನೇರವಾಗಿ ಎಸ್‌ಯುವಿ ಕಾರು ಹಾಗೂ ಆಟೋಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಎರಡು ಟ್ಯಾಂಕರ್‌ಗಳ ನಡುವೆ ಸಿಲುಕಿಕೊಂಡಿದ್ದ ಆಟೋರಿಕ್ಷಾ ತಕ್ಷಣವೇ ನಜ್ಜುಗುಜ್ಜಾಯಿತು. ಆಟೋ ಚಾಲಕ ಮತ್ತು ಇಬ್ಬರು ಪ್ರಯಾಣಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಎಐ ಮೂಲಕ ತಾನೇ ಸೃಷ್ಟಿಸಿದ ವ್ಯಕ್ತಿ ಮದುವೆಯಾದ ಜಪಾನ್ ಯುವತಿ



ಜಪಾನ್: ಜಪಾನ್‌ನ ಒಕಯಾಮಾ ನಗರದ ನಿವಾಸಿ 32 ವರ್ಷದ ಕಾನೋ ಎಂಬಾಕೆ ತಾನು ಎಐ ಮೂಲಕ ಸೃಷ್ಟಿರುವ ವ್ಯಕ್ತಿ ಕ್ಲಾಸ್ ಎಂಬುವವರನ್ನು ಮದುವೆಯಾಗಿ ಅಚ್ಚರಿ ಮೂಡಿಸಿದ್ದಾಳೆ. ಈಕೆ ಚಾಟ್ ಜಿಪಿಟಿ ಮೂಲಕ ಕ್ಲಾಸ್ ಅಭಿವೃದ್ಧಿಪಡಿಸಿದ್ದಾಳೆ. ಜಪಾನಿನ ಸಂಪ್ರದಾಯಗಳಿಗೆ ಬದ್ಧವಾಗಿ ಮತ್ತು ಈವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯ ಸಹಕಾರದಿಂದ ಈ ವಿವಾಹ ಪೂರ್ಣಗೊಂಡಿದೆ. ಅಲ್ಲಿ ಕ್ಯಾನೊ ಮತ್ತು ಕ್ಲಾಸ್ ಹಲವಾರು ಆಹ್ವಾನಿತ ಅತಿಥಿಗಳ ಸಮ್ಮುಖದಲ್ಲಿ ಉಂಗುರಗಳನ್ನು ಬದಲಾಯಿಸಿಕೊಂಡರು. ಕ್ಲಾಸ್‌ನ ಚಿತ್ರವನ್ನು ದೊಡ್ಡ ಪರದೆಯ ಮೇಲೆ ಪ್ರದರ್ಶಿಸಲಾಯಿತು. ದೈಹಿಕವಾಗಿ ಉಪಸ್ಥಿತಿ ಇಲ್ಲದಿದ್ದರೂ ಆತ ಜೀವಂತವಾಗಿದ್ದಾನೆಂದು ತೋರಿಸಲಾಯಿತು. ಕ್ಯಾನೋ ಕೆಲವು ಸಮಯದಿಂದ ಮಾನಸಿಕವಾಗಿ ಕುಗ್ಗಿ ಹೋಗಿದ್ದಳು, ಈ ಸಮಯದಲ್ಲಿ ಈ ಎಐ ಸ್ನೇಹಿತನನ್ನು ಮೊದಲು ಕಂಡುಕೊಂಡಳು.

ಡ್ಯಾಮ್‌ಗೆ ಕಾರು ಉರುಳಿ ಬಿದ್ದು, ನ್ಯಾಯಾಧೀಶರ ಇಬ್ಬರು ಬಾಡಿಗಾರ್ಡ್ ಸೇರಿ ಮೂವರು ಸಾವು

ರಾಂಚಿ: ಜಾರ್ಖಂಡ್ ರಾಜಧಾನಿ ರಾಂಚಿಯಲ್ಲಿರುವ ಡ್ಯಾಮ್‌ಗೆ ಕಾರು ಉರುಳಿ ಬಿದ್ದ ಪರಿಣಾಮ ಜೆಮ್ಶೆಡ್‌ಪುರದ ಪ್ರಧಾನ ಜಿಲ್ಲಾ ನ್ಯಾಯಾಧೀಶರ ಇಬ್ಬರು ಅಂಗರಕ್ಷಕರು ಸೇರಿದಂತೆ ಮೂವರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಮತ್ತು ಒಬ್ಬರು ನಾಪತ್ತೆಯಾಗಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಶುಕ್ರವಾರ ತಡರಾತ್ರಿ ನಾಗ್ರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ರಾಂಚಿಯ ಹಟಿಯಾ ಅಣೆಕಟ್ಟಿನಲ್ಲಿ ಈ ಅಪಘಾತ ಸಂಭವಿಸಿದೆ. ನಮಗೆ ಸಿಕ್ಕಿರುವ ಮಾಹಿತಿ ಪ್ರಕಾರ ಕಾರಿನಲ್ಲಿ ನಾಲ್ಕು ಜನರಿದ್ದರು.



ಇಲ್ಲಿಯವರೆಗೆ ನಾವು ಕಾರಿನ ಚಾಲಕ ಮತ್ತು ಇಬ್ಬರು ಪೊಲೀಸ್ ಸಿಬ್ಬಂದಿಯ ಶವಗಳನ್ನು ಪತ್ತೆಹಚ್ಚಿದ್ದೇವೆ. ಒಬ್ಬರು ಇನ್ನೂ ಕಾಣೆಯಾಗಿದ್ದಾರೆ ಎಂದು ಹಟಿಯಾ ಪೊಲೀಸ್ ಉಪ ವರಿಷ್ಠಾಧಿಕಾರಿ ಪ್ರಮೋದ್ ಮಿಶ್ರಾ ತಿಳಿಸಿದ್ದಾರೆ. ಪ್ರಧಾನ ಜಿಲ್ಲಾ ನ್ಯಾಯಾಧೀಶರ ಅಂಗರಕ್ಷಕರನ್ನು ರಾಬಿನ್ ಕುಜೂರ್ ಮತ್ತು ಉಪೇಂದ್ರ ಕುಮಾರ್ ಸಿಂಗ್ ಎಂದು ಗುರುತಿಸಲಾಗಿದೆ. ಈ ಇಬ್ಬರೂ ಜಾರ್ಖಂಡ್ ಪೊಲೀಸ್ ಕಾನ್‌ಸ್ಟೆಬಲ್‌ಗಳಾಗಿ ನೇಮಕಗೊಂಡಿದ್ದರು.

ಮೈಸೂರು ಮಿತ್ರ ಭಾನುವಾರ 16 ನವೆಂಬರ್ 2025

ಬಾಂಬ್ ಸ್ಫೋಟ: ಹಿಂದು ಜಾಗರಣಾ ವೇದಿಕೆ ಪ್ರತಿಭಟನೆ



ದೆಹಲಿ ಭಯೋತ್ಪಾದಕ ಬಾಂಬ್ ಸ್ಫೋಟ ಪ್ರಕರಣವನ್ನು ಖಂಡಿಸಿ ಹಿಂದು ಜಾಗರಣಾ ವೇದಿಕೆ ಪ್ರತಿಭಟನೆ ನಡೆಸಿತು.

ಮಡಿಕೇರಿ, ನ.15–ಹಲವು ಅಮಾಯಕರನ್ನು ಬಲಿ ತೆಗೆದುಕೊಂಡ ದೆಹಲಿ ಭಯೋತ್ಪಾದಕ ಬಾಂಬ್ ಸ್ಫೋಟ ಪ್ರಕರಣವನ್ನು ಖಂಡಿಸಿ ಹಿಂದು ಜಾಗರಣಾ ವೇದಿಕೆ ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿತು. ಹಿಂದು ಜಾಗರಣಾ ವೇದಿಕೆಯ ದಕ್ಷಿಣ ಪ್ರಾಂತ ಸದಸ್ಯ ಕುಕ್ಕೇರ ಅಜಿತ್, ರಾಜ್ಯ ಸಂಚಾಲಕ ಕಾರ್ಯದರ್ಶಿ ಪ್ರಶಾಂತ್, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ನೇತೃತ್ವದಲ್ಲಿ ಶನಿವಾರ ಬೆಳಿಗ್ಗೆ ವೃತ್ತದಲ್ಲಿ ಸಮಾವೇಶಗೊಂಡ ಸಂಘಟನೆಯ ಕಾರ್ಯಕರ್ತರು, ಘೋಷಣೆಗಳ ಸಹಿತ ಪ್ರತಿಭಟನೆ ನಡೆಸಿದರು.

ಕುಕ್ಕೇರ ಅಜಿತ್ ಮಾತನಾಡಿ, ಇಸ್ಲಾಮಿಕ್ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ಹತ್ತಿಕ್ಕುವ ಕಾರ್ಯ ನಡೆಯಬೇಕಾಗಿದೆ. ಇಂತಹ ಭಯೋತ್ಪಾದಕ ಕೃತ್ಯಗಳನ್ನು ಮಟ್ಟ ಹಾಕುವವರೆಗೆ ಹಿಂದೂ ಸಮಾಜಕ್ಕೆ ಆತಂಕ ತಪ್ಪಿದ್ದಲ್ಲ ಎಂದು ತೀವ್ರ ಕಳವಳ ವ್ಯಕ್ತಪಡಿಸಿದರು. ಹಿಂದೆ ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದಕರು ರಕ್ಷಣಾ ಪಡೆಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾಗ, ರಾಜಕೀಯ ಕಾರಣಗಳ ಹಿನ್ನೆಲೆಯಲ್ಲಿ ಅವರನ್ನು ಬಡವರು, ಉದ್ಯೋಗ ರಹಿತರು ಎಂದು ನಮ್ಮ ಸೋಗಲಾಡಿತನದ ರಾಜಕಾರಣಿಗಳು ಸಮರ್ಥಿಸಿಕೊಂಡಿದ್ದರು. ಇದೀಗ ದೆಹಲಿಯಲ್ಲಿ ನಡೆದಿರುವ ಭಯೋತ್ಪಾದಕ ಬಾಂಬ್ ಸ್ಫೋಟದ ಸಂಚು ರೂಪಿಸಿದವರೆಲ್ಲರು ಶಿಕ್ಷಣವಂತರು ಮಾತ್ರವಲ್ಲ ವೈದ್ಯರಾಗಿದ್ದಾರೆ. ಅಂದು ಭಯೋತ್ಪಾದಕರನ್ನು ಸಮರ್ಥಿಸಿಕೊಂಡವರು ಇಂದಿನ ಈ ದಾಳಿಯ ಬಗ್ಗೆ ಏನನ್ನು ಹೇಳುತ್ತಾರೆ ಎಂದು ಪ್ರಶ್ನಿಸಿದರು. ತಮ್ಮ ರಾಜಕೀಯ ಲಾಭಕ್ಕಾಗಿ ಭಯೋತ್ಪಾದಕರನ್ನು ಸೋಗಲಾಡಿ ರಾಜಕಾರಣಿಗಳು ಸಮರ್ಥಿಸಿಕೊಳ್ಳುವ ಪ್ರಯತ್ನ ನಡೆಸುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕೇವಲ ವೋಟ್ ಬ್ಯಾಂಕ್‌ಗಾಗಿ ಇಂತಹ ಓಲೈಕೆಯ ಪ್ರಯತ್ನಗಳು ಬೇಡ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಹಿಂದು ಜಾಗರಣಾ ವೇದಿಕೆಯ ಜಿಲ್ಲಾ ಸಹ ಸಂಚಾಲಕ ಚೇತನ್, ಸುನಿಲ್, ಮಡಿಕೇರಿ ನಗರಸಭಾ ಅಧ್ಯಕ್ಷ ಪಿ.ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ನಗರಸಭಾ ಸದಸ್ಯರಾದ ಅರುಣ್ ಶೆಟ್ಟಿ, ಸವಿತಾ, ಕಲಾವತಿ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ತಳೂರು ಕಿಶೋರ್ ಕುಮಾರ್, ಜಿಲ್ಲಾ ವಕ್ತಾರ ಬಿ.ಕೆ.ಅರುಣ್ ಕುಮಾರ್, ಪಿ.ಎಂ. ರವಿ, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಕೆ.ಜಗದೀಶ್, ಮನು ಮಂಜುನಾಥ್, ಉಮಾ ಪ್ರಭು, ಕನ್ನಿಕೆ ಮೊದಲಾದವರು ಉಪಸ್ಥಿತರಿದ್ದರು.

ಎನ್‌ಡಿಎ ಗೆಲುವಿಗೆ ಬಿಜೆಪಿ ವಿಜಯೋತ್ಸವ



ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಗೆಲುವು ದೊರೆತ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ವಿರಾಜಪೇಟೆ, ನ.15–ಬಿಹಾರ ಚುನಾವಣೆಯ ಫಲಿತಾಂಶದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಐತಿಹಾಸಿಕ ಗೆಲುವು ದೊರೆತ ಹಿನ್ನೆಲೆಯಲ್ಲಿ ನಗರ ಬಿಜೆಪಿ ಅಧ್ಯಕ್ಷ ಅನಿಲ್ ಮಂದಣ್ಣ ನೇತೃತ್ವದಲ್ಲಿ ಇಲ್ಲಿನ ಗಡಿಯಾರ ಕಂಬದ ಬಳಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ರಾಜ್ಯ ಮಹಿಳಾ ಘಟಕದ ಬಿಜೆಪಿ ಸದಸ್ಯೆ ಪಟ್ಟಡ ರೀನಾ ಪ್ರಕಾಶ್ ಮಾತನಾಡಿ, ಬಿಜೆಪಿ ಮತಗಳ್ಳತನ ಮಾಡಿದೆ ಎಂಬ ರಾಹುಲ್ ಗಾಂಧಿ ಆರೋಪಕ್ಕೆ ಬಿಹಾರದ ಪ್ರಜ್ಞಾವಂತ ಮತದಾರರು ತಕ್ಕ ಪಾಠ ಕಲಿಸುವ ಮೂಲಕ ಇತಿಹಾಸಕ್ಕೆ ಮುನ್ನುಡಿ ಬರೆದಿದ್ದಾರೆ. ಮೋದಿ ಜನಪ್ರಿಯತೆಗೆ ಇದೇ ಸಾಕ್ಷಿ. ಮುಂದಿನ ದಿನಗಳಲ್ಲಿ ದೇಶದ ಎಲ್ಲ ಕಡೆಗಳಲ್ಲಿ ಪಕ್ಷದ ಸದಸ್ಯರು ಹೆಚ್ಚಿನ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಹೇಳಿದರು.

ಜಿ.ಪಂ. ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಮಾತನಾಡಿ ರಾಹುಲ್ ಗಾಂಧಿಯವರ ವೋಟ್ ಚೋರಿ ಪ್ರಕರಣ ಬಿಹಾರ್ ಚುನಾವಣಾ ಸಂದರ್ಭದಲ್ಲಿ ಯಾವುದೇ ಪ್ರಯೋಜನ ಪಡೆಯಲಿಲ್ಲ. ಮುಂದೆ ಕರ್ನಾಟಕ ರಾಜ್ಯದಲ್ಲೂ ಕಾಂಗ್ರೆಸ್ ಪಕ್ಷ ನೆಲಕಚ್ಚಲಿದೆ ಎಂದು ಆಶಾಭಾವನೆ ವ್ಯಕ್ತಪಡಿಸಿದರು.

ವಿಜಯೋತ್ಸವದಲ್ಲಿ ಬಿಜೆಪಿ ಓಬಿಸಿ ಅಧ್ಯಕ್ಷ ಸುರೇಶ್, ಮುಖಂಡರಾದ ರಘು ನಾಣಯ್ಯ, ಬಿ.ಡಿ.ಸುನೀತಾ, ಸಾಯಿನಾಥ್ ನಾಯಕ್, ಆನಂದ ನಂಜಪ್ಪ ಶಿವು, ಸಚಿನ್ ಕುಟ್ಟಯ್ಯ, ಪ್ರದೀಪ್ ರೈ, ಉಣ್ಣಿ, ಯತಿರಾಜ್, ಸಂಪಿ ಪೂಣಚ್ಚ, ಯತಿರಾಜ್, ಅನುಪಮ ಕಿಶೋರ್, ಶಿನೋಜ್, ದಿವಾಕರ್ ಶೆಟ್ಟಿ, ಶಂಕರ್ ಶೆಟ್ಟಿ ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ತಿಮ್ಮಯ್ಯ ನಿಧನ


ನಾಪೋಕ್ಲು, ನ.15– ಇಲ್ಲಿಗೆ ಸಮೀಪದ ಪಾಲೂರು ಗ್ರಾಮದ ಉದ್ದುಬರಿಕೆ ನಿವಾಸಿ ವ'ಂರಾ ಠಿ ತಿಮ್ಮಯ್ಯ (45) ಅನಾರೋಗ್ಯದಿಂದ ಶನಿವಾರ ನಿಧನರಾದರು.



ಮೃತರು ಸಹೋದರ ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮೃತರ ಸಹೋದರ ಹರಿಶ್ಚಂದ್ರ ನಿವಾಸದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ಧಾರ್ಥ

ನಾಪೋಕ್ಲು: ಇಲ್ಲಿಗೆ ಸಮೀಪದ ಚೇಯ್ಯಂಡಾಣೆ ನರಿಯಂದಡ ಗ್ರಾಮದ ನಿವಾಸಿ ಪೊಕ್ಕುಳಂಡ್ರ ದಿ. ಕುಶಾಲಪ್ಪನವರ ಪುತ್ರ ಸಿದ್ಧಾರ್ಥ (ರಾಜು 86) ರವರು ಗುರುವಾರ ನಿಧನರಾದರು.



ಮೃತರು ಪತ್ನಿ ಪುತ್ರ ಮತ್ತು ಮೂವರು ಪುತ್ರಿಯರು ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆ ಶುಕ್ರವಾರ ನರಿಯಂದಡ ಗ್ರಾಮದ ಪೊಕ್ಕುಳಂಡ್ರ ಕುಟುಂಬದ ರುದ್ರ ಭೂಮಿಯಲ್ಲಿ ನೆರವೇರಿತು.

ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಭಾಗವಹಿಸಿ ಛಲದಿಂದ ಗುರಿ ಮುಟ್ಟಿ

ವಿರಾಜಪೇಟೆ: ವಿದ್ಯಾರ್ಥಿಗಳು ಸರಕಾರ ನೀಡುತ್ತಿರುವ ಸೌಲಭ್ಯಗಳನ್ನು ಬಳಸಿಕೊಂಡು ಪಾಠದೊಂದಿಗೆ ಕ್ರೀಡೆಯಲ್ಲೂ ಭಾಗವಹಿಸುವ ಮೂಲಕ ಛಲದಿಂದ ಗುರಿ ಮುಟ್ಟುವಂತಾಗಬೇಕು ಎಂದು ಹಿಂದು ಮಲಯಾಳಿ ಮಹಿಳಾ ಅಸೋಸಿಯೇಷನ್ ಅಧ್ಯಕ್ಷೆ ಶೀಭಾ ಪೃಥ್ವಿನಾಥ್ ಹೇಳಿದರು.

ಮಕ್ಕಳ ದಿನಾಚರಣೆ ಅಂಗವಾಗಿ ಕೊಡಗು ಹಿಂದು ಮಲಯಾಳಿ ಮಹಿಳಾ ಅಸೋಸಿಯೇಷನ್ ಸರಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಆಟೋಟಗಳ ಸ್ಪರ್ಧೆ ಹಾಗೂ ಶಾಲಾ ಬ್ಯಾಗ್ ವಿತರಣೆ ಕಾರ್ಯಕ್ರಮದಲ್ಲಿ ಗಿಡಕ್ಕೆ ನೀರು ಎರೆಯುವ ಮೂಲಕ ಉದ್ಘಾಟಿಸಿ, ಮಲಯಾಳಿ ಮಹಿಳಾ ಅಸೋಸಿಯೇಷನ್ ಈಗಾಗಲೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಮಹಿಳೆಯರಿಗೆ ಟೈಲರಿಂಗ್, ಸ್ವ ಉದ್ಯೋಗಕ್ಕಾಗಿ ಧನ ಸಹಾಯ, ಅನಾರೋಗ್ಯದಿಂದ ಬಳಲುತ್ತಿರುವರಿಗೆ ಸಹಾಯ ಹಸ್ತ ನೀಡಲಾಗಿದ್ದು ಮುಂದಿನ ದಿನದಲ್ಲಿ ಶಾಲೆಗಳಲ್ಲಿ ಮಕ್ಕಳಿಗಾಗಿ ಹೆಚ್ಚು ಕಾರ್ಯಕ್ರಮವನ್ನು ಹಮ್ಮಿಕೊಳುವುದಾಗಿ ಹೇಳಿದರು.



ಮಕ್ಕಳ ದಿನಾಚರಣೆ ಅಂಗವಾಗಿ 'ಕೊಡಗು ಹಿಂದು ಮಲಯಾಳಿ ಮಹಿಳಾ ಅಸೋಸಿಯೇಷನ್' ಏರ್ಪಡಿಸಿದ್ದ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಉರ್ದು ಶಾಲಾ ಮುಖ್ಯ ಶಿಕ್ಷಕ ಎನ್. ಅನುಸೂಯ ಮಾತನಾಡಿ, ಮಕ್ಕಳು ಸರಿಯಾದ ದಾರಿಯಲ್ಲಿಯೇ ಸಾಗಬೇಕು. ಕಷ್ಟಪಟ್ಟು ಮಕ್ಕಳು ವಿದ್ಯಾಭ್ಯಾಸ ಕಲಿತು ಉನ್ನತ ಹುದ್ದೇರಬೇಕೆಂಬ ಆಸೆ ಪೋಷಕರು ಇಟ್ಟುಕೊಂಡಿರುತ್ತಾರೆ ಅದನ್ನು ನೆರವೇರಿಸುವ ಮೂಲಕ ದೇಶದ ಉತ್ತಮ ಪ್ರಜೆಗಳಾಗುವಂತೆ ಹೇಳಿದರಲ್ಲದೆ, ಅಕ್ಕ ಪಕ್ಕದ ಮನೆಯವರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಕಳಿಸುವಂತೆ ಮನವಿ ಮಾಡಿದರು.

ಅಸೋಸಿಯೇಷನ್ ಕಾರ್ಯದರ್ಶಿ ಪುಷ್ಪಲತಾ ಶಿವಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಮಲಯಾಳಿ ಅಸೋಸಿಯೇಷನ್ ಉಪಾಧ್ಯಕ್ಷೆ ಚೈತ್ರ ಮೋಹನ್, ಗೌ. ಅಧ್ಯಕ್ಷೆ ರೀತಾ ರಾಜನ್, ಸಹ ಕಾರ್ಯದರ್ಶಿ ಪದ್ಮ, ಖಜಾಂಚಿ ಶ್ರೀಕಲಾ, ಸ್ಮಿತಾ ಸಂತೋಷ್, ರಾಖಿ ಸಜೀವನ್, ಶ್ರೀದೇವಿ ಸಂತೋಷ್, ಶಾಂತ ಚಂದ್ರನ್, ಶೀಲಾ ಸುನೀಲ್, ಹೇಮಾ, ಸಿ.ಕೆ. ಪೃಥ್ವಿನಾಥ್ ಮತ್ತಿತರರು ಭಾಗವಹಿಸಿದ್ದರು. ಪುಷ್ಪಲತಾ ಶಿವಪ್ಪ ನಿರೂಪಿಸಿದರು.

ಸಾಲು ಮರದ ತಿಮ್ಮಕ್ಕ ನೆನಪಿಗಾಗಿ ವೃಕ್ಷಾರೋಪಣಾ



ನಗರದ 'ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ'ದಲ್ಲಿ ವೃಕ್ಷಾರೋಪಣಾ ಜರುಗಿತು.

ಮಡಿಕೇರಿ, ನ.15– ಸಾಲು ಮರದ ತಿಮ್ಮಕ್ಕ ಅವರ ಪ್ರೀತಿಯ ಸ್ಮರಣಾರ್ಥವಾಗಿ ನಗರದ 'ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ'ದಲ್ಲಿ ಅರ್ಥ ಪೂರ್ಣವಾಗಿ ವೃಕ್ಷಾರೋಪಣಾ ಜರುಗಿತು. ಕೊಡಗು ವಿದ್ಯಾಲಯದ ಪ್ರಾಂಶುಪಾಲೆ ಕೆ.ಎಸ್. ಸುಮಿತ್ರಾ, ಆಡಳಿತಾಧಿಕಾರಿ ಪಿ.ರವಿ, ಕ್ಲಬ್ ಇನ್ ಚಾರ್ಜ್ ಶಿಕ್ಷಕರು, ಹಾಗೂ ಡಿಆರ್ ಎಫ್‌ಓ ಸುನಿಲ್ ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಜೀವನ ಪರ್ಯಂತ ಮರಗಳನ್ನು ನೆಟ್ಟು ಪೋಷಿಸಿದ ತಿಮ್ಮಕ್ಕರವರ ಮಹತ್ತರ ಸೇವೆಯನ್ನು ಸ್ಮರಿಸುವುದರೊಂದಿಗೆ ಅವರ ಪರಿಸರ ಸಂರಕ್ಷಣೆಯ ಜವಾಬ್ದಾರಿ, ಪ್ರಕೃತಿಯ ಮೌಲ್ಯಗಳನ್ನು ತಿಳಿಸಿತು. ವಿದ್ಯಾರ್ಥಿಗಳು ಉದ್ಯಾನವನದಲ್ಲಿ ಸಸಿಗಳನ್ನು ಉತ್ಸಾಹದಿಂದ ನೆಟ್ಟಿದ್ದಲ್ಲದೆ ಶಾಲಾ ಆವರಣದಲ್ಲೂ ಮತ್ತೊಂದು ಸಸಿಯನ್ನು ಸಾಲು ಮರದ ತಿಮ್ಮಕ್ಕ ಸ್ಮರಣೆಯಲ್ಲಿ ನೆಡುವ ಮೂಲಕ ಹಸಿರು ಮತ್ತು ಆರೋಗ್ಯಕರ ಪರಿಸರ ನಿರ್ಮಾಣದತ್ತ ಸಂಸ್ಥೆಯ ಬದ್ಧತೆಯನ್ನು ಸ್ಪಷ್ಟಪಡಿಸಿದರು.

ಕಡಮಕಲ್ಲು ಗ್ರಾಮಸ್ಥರ ಕುಂದುಕೊರತೆ ಆಲಿಸಿದ ಶಾಸಕ ಡಾ.ಮಂತರ್ ಗೌಡ

ಮಡಿಕೇರಿ: ವಿಧಾನಸಭಾ ಕ್ಷೇತ್ರದ ಕಟ್ಟಕಡೆಯ ಗ್ರಾಮವಾದ ಗಾಳಿಬೀಡು ಪಂಚಾಯತ್ ವ್ಯಾಪ್ತಿಯ ಕಡಮಕಲ್ ಗ್ರಾಮಕ್ಕೆ ಮೂಲಭೂತ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಗ್ರಾಮದ ಸಂಕ್ಷಿಪ್ತ ವರದಿಯನ್ನು ವಾರದ ಒಳಗೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಶಾಸಕ ಡಾ ಮಂತರ್ ಗೌಡ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಕಂದಾಯ, ಗ್ರಾಮೀಣಾಭಿವೃದ್ಧಿ, ಅರಣ್ಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸೇರಿ ಕಡಮಕಲ್ ನಿವಾಸಿಗಳೊಂದಿಗೆ ಕುಂದುಕೊರತೆ ಸಭೆ ನಡೆಸಿ, ಮನೆ ಮತ್ತು ಜಮೀನಿನ ದಾಖಲೆಗಳು, ಕುಡಿಯುವ ನೀರು ಸರಬರಾಜು, ಟ್ಯಾಂಕ್ ನಿರ್ಮಾಣ, ವಿದ್ಯುತ್ ವ್ಯವಸ್ಥೆ ಉನ್ನತೀಕರಣ, ರಸ್ತೆ ನಿರ್ಮಾಣ, ಅರಣ್ಯ ಇಲಾಖೆ ಮತ್ತು ಗ್ರಾಮದ ಗಡಿ ಗೊಂದಲಗಳ ನಿವಾರಣೆ ಹಾಗೂ ಪಡಿತರ ವಿತರಣೆಯ ಬಗ್ಗೆ ಚರ್ಚೆ ಮಾಡಿ ನಿಯಮಾನುಸಾರ ಕ್ರಮ ಜರುಗಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಇದೇ ಪ್ರಪ್ರಥಮ ಬಾರಿಗೆ ಶಾಸಕರೊಬ್ಬರು ಅಧಿಕಾರಿಗಳೊಂದಿಗೆ ತಮ್ಮ ಬಳಿ ಬಂದು ಕುಂದು ಕೊರತೆ ನಿವಾರಣೆ ಸಭೆ ನಡೆಸಿದ ಹಿನ್ನಲೆಯಲ್ಲಿ ಗ್ರಾಮಸ್ಥರು ಉತ್ಸಾಹದಿಂದ ಪಾಲ್ಗೊಂಡು ತಮ್ಮ ಅಹವಾಲುಗಳನ್ನು ಸಲ್ಲಿಸಿದರು.

ಕಡಮಕಲ್ ಗ್ರಾಮದಲ್ಲಿ 200 ಜನಸಂಖ್ಯೆ ಇದ್ದು, ಬಹುತೇಕ ಕೂಲಿ ಕಾರ್ಮಿಕರೆ ವಾಸಿಸುತ್ತಿದ್ದಾರೆ. ಸುಳ್ಯ ಮೂಲಕ 80 ಕಿಮೀ ಕ್ರಮಿಸಿ ಜಿಲ್ಲಾ ಕೇಂದ್ರಕ್ಕೆ ಬಂದು ಕೆಲಸ ಮಾಡಿಕೊಂಡು ಹೋಗುವುದು ಅಸಾಧ್ಯದ ಕೆಲಸವಾಗಿರುವುದರಿಂದ ಇಲ್ಲಿಯವರೆಗೆ ಯಾವುದೇ ಮೂಲಭೂತ ವ್ಯವಸ್ಥೆ ಸಮರ್ಪಕವಾಗಿರುವುದಿಲ್ಲ. ಆದ್ದರಿಂದ ಸರ್ಕಾರದ ಸೌಲಭ್ಯ ಪಡೆಯುವುದು ಪ್ರತಿಯೊಬ್ಬ ನಾಗರಿಕನ ಮೂಲ ಹಕ್ಕಾಗಿದ್ದು, ಅದನ್ನು ಒಬ್ಬ ಜನಪ್ರತಿನಿಧಿಯಾಗಿ ತಾವು ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಪ್ರಮುಖರಾದ ಎಚ್.ಎ.ಹಂಸ, ತೆನ್ನಿರ ಮೈನಾ, ಸುಭಾಷ್ ಆಳ್ವ, ಪುಷ್ಪ ಪೂಣಚ್ಚ, ವಿ.ಜಿ.ಮೋಹನ್, ಕೋಚನ ಹರಿಪ್ರಸಾದ್, ಹಂಚೆಟ್ಟಿರ ಮನು ಮುದ್ದಪ್ಪ ಅಪ್ರ ರವೀಂದ್ರ, ಕಿರಣ್, ರೋಷನ್ ಗಣಪತಿ, ಇದ್ದರು.

ನ.26, ಕೊಡವ ನ್ಯಾಷನಲ್ ಡೇ ಆಚರಣೆ

ಮಡಿಕೇರಿ: ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ವತಿಯಿಂದ ನ.26ರಂದು ಮಡಿಕೇರಿಯ ಹೊರವಲಯದಲ್ಲಿರುವ ಕ್ಯಾಪಿಟಲ್ ವಿಲೇಜ್‌ನಲ್ಲಿ ಬೆಳಿಗ್ಗೆ 10.30 ಗಂಟೆಗೆ ಭಾರತೀಯ ಸಂವಿಧಾನ ದಿನದೊಂದಿಗೆ 35ನೇ ಕೊಡವ ನ್ಯಾಷನಲ್ ಡೇ ಆಚರಿಸಲಾಗುತ್ತದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ತಿಳಿಸಿದ್ದಾರೆ. ಕೊಡವರ ಆಕಾಂಕ್ಷೆಗಳನ್ನು ಸಾಧಿಸುವತ್ತ ಶಾಂತಿಯುತ ಹೋರಾಟಗಳನ್ನು ಅವಿರತವಾಗಿ ನಡೆಸಿಕೊಂಡು ಬಂದಿರುವ ಸಿಎನ್‌ಸಿ ಸಂಘಟನೆ, 'ಕೊಡವ ನ್ಯಾಷನಲ್ ಡೇ'ಯಲ್ಲಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಿ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಲಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜ್ಯೋತಿಗೌಡನಪುರ ಪ್ರಕರಣ ನಿರಪರಾಧಿಗಳ ಬಿಡುಗಡೆಗೆ ಆಗ್ರಹಿಸಿ

ನಾಯಕ ಸಮುದಾಯದಿಂದ ಬೃಹತ್ ಪ್ರತಿಭಟನೆ



ಜ್ಯೋತಿಗೌಡನಪುರ ಗ್ರಾಮದಲ್ಲಿ ನಿರಪರಾಧಿಗಳ ಮೇಲೆ ಹಲ್ಲೆ ನಡೆಸಿರುವ ಪೋಲೀಸ್ ಅಧಿಕಾರಿಗಳ ಅಮಾನತ್ತಿಗೆ ಆಗ್ರಹಿಸಿ ನಾಯಕ ಸಮಾಜದವರು ಶನಿವಾರ ಬೃಹತ್ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ನ.15–ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ರವರ ಫ್ಲೆಕ್ಸ್ ಹರಿದ ಹಾಗೂ ಬುದ್ದರ ಪ್ರತಿಮೆಯನ್ನು ಧ್ವಂಸಗೊಳಿಸಿದ ಪ್ರಕರಣದಲ್ಲಿ ಪೊಲೀಸರು ನೈಜ ಅಪರಾಧಿಗಳನ್ನು ಬಂಧಿಸಿ, ನಿರಪರಾಧಿಗಳನ್ನು ಬಿಡುಗಡೆಗೊಳಿಸಬೇಕು, ನಿರಪರಾಧಿ ಮೇಲೆ ಹಲ್ಲೆ ಮಾಡಿರುವ ಪೊಲೀಸ್ ಅಧಿಕಾರಿಗಳನ್ನು ಅಮಾನತು ಪಡಿಸಬೇಕು ಎಂದು ಒತ್ತಾಯಿಸಿ ಜಿಲ್ಲಾ ನಾಯಕ ಜನಾಂಗದ ಹೋರಾಟ ಸಮಿತಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿತು.

ನಗರದ ಮಾರಿಗುಡಿ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಕೆಲಹೊತ್ತು ರಸ್ತೆ ತಡೆ ನಡೆಸಿ, ಪೊಲಿಸ್ ದೌರ್ಜನ್ಯ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು. ನಂತರ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲ ಕಾಲ ಧರಣಿ ನಡೆಸಿದ ನಂತರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಸ್ಥಳೀಯ ಅಧಿಕಾರಿಗಳಿಂದ ತನಿಖೆಯನ್ನು ವಾಪಸ್ ಪಡೆದು ಸರ್ಕಾರ ಕೂಡಲೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್.ಐ.ಟಿ. ಅಥವಾ ಹಾಲಿ ನ್ಯಾಯಾಧೀಶರಿಂದ ತನಿಖೆಗೆ ಆದೇಶಿಸಿ, ಈ ಕೃತ್ಯದಲ್ಲಿ ನಿರಪರಾಧಿಗಳ ಮೇಲೆ ದೈಹಿಕವಾಗಿ ಹಲ್ಲೆ ಮಾಡಿರುವ ಸರ್ಕಲ್ ಇನ್ಸ್‌ಪೆಕ್ಟರ್ ಸಾಗರ್‌ರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಒತ್ತಡಕ್ಕೆ ಒಳಗಾಗಿ, ನಿರಪರಾಧಿ ವ್ಯಕ್ತಿಗಳಿಗೆ ಶಿಕ್ಷೆಯಾಗಲು ಕಾರಣಕರ್ತರಾಗಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತ, ತನಿಖಾ ತಂಡದಲ್ಲಿರುವ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಕಾಂತ್, ತನಿಖಾಧಿಕಾರಿ ನವೀನ್, ಎ.ಎಸ್.ಐ. ಮಹದೇವು ಅವಮಾನತು ಪಡಿಸಬೇಕು ಎಂದು ಪ್ರತಿಭಟನಾನಿರತರು ಆಗ್ರಹಿಸಿದರು.

ತಾಲೂಕು ಹೊಂಗನೂರು ಗ್ರಾ. ಪಂ. ನಲ್ಲಿ ವಾಟರ್ ಮ್ಯಾನ್ ಆಗಿರುವ ಚಿಕ್ಕೂಸ ನಾಯಕ ಆತ್ಮಹತ್ಯೆ ಮಾಡಿಕೊಳ್ಳುವಾಗ ಡೆತ್ ನೋಟ್ ಬರೆ ದಿದ್ದವರನ್ನು ಇದು ವರೆಗೂ ದಸ್ತಗಿರಿ ಮಾಡಿಲ್ಲ ಆರೋಪಿಗಳು ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಆದ್ದರಿಂದ ಅವರನ್ನು ಈ ಕೂಡಲೇ ಬಂಧಿಸಿ, ಬಡ ಕುಟುಂಬಕ್ಕೆ ಆಧಾರವಾಗಿದ್ದ ಚಿಕ್ಕೂಸನಾಯಕ ಕುಟುಂಬಕ್ಕೆ ಖಾಯಂ ಉದ್ಯೋಗ ನೀಡಬೇಕೆಂದು ಪ್ರತಿಭಟನಾನಿರತರು ಆಗ್ರಹಿಸಿದರು.

ಪ್ರತಿಭಟನೆ ನಿಲ್ಲದು

ಜ್ಯೋತಿಗೌಡನಪುರ ಪ್ರಕರಣದಲ್ಲಿ ನಿರಪರಾಧಿಯನ್ನು ಕರೆದೊಯ್ದು ಹಲ್ಲೆ ಮಾಡಿರುವ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತುಪಡಿಸುವ ತನಕ ನಮ್ಮ ಹೋರಾಟ ಮುಂದುವರಿಯುತ್ತದೆ ಯಾವುದೇ ಕಾರಣಕ್ಕೂ ನಮ್ಮ ಈ ಪ್ರತಿಭಟನೆ ನಿಲ್ಲುವುದಿಲ್ಲ ಎಂದು ನಾಯಕ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸ ನಾಯಕ ಎಚ್ಚರಿಸಿದರು. ಜಿಲ್ಲೆಯಲ್ಲಿ ರಾಜಕೀಯ ಶಕ್ತಿ ಇಲ್ಲ ಎಂದು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ನಾಯಕ ಸಮುದಾಯ ಎದ್ದುನಿಂತರೆ ತಕ್ಕಪಾಠ ಕಲಿಸುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ಪು.ಶ್ರೀನಿವಾಸನಾಯಕ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಯಳಂದೂರು ಉಮಾಶಂಕರ್, ಜಯಸುಂದರ್ ಮಾತನಾಡಿದರು.

ಪ್ರತಿಭಟನೆಯಲ್ಲಿ ನಗರಸಭಾ ಅಧ್ಯಕ್ಷ ಸುರೇಶ್, ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಜಿ.ಪಂ. ಮಾಜಿ ಸದಸ್ಯ ಸೋಮನಾಯಕ, ಯ.ರಾಜು ನಾಯಕ, ಕಪಿನಿನಾಯಕ, ಕೃಷ್ಣನಾಯಕ, ಚೆಂಗುಮಣಿ, ಶಿವುವಿರಾಟ್, ಬುಲೆಟ್ ಚಂದ್ರು, ರಾಜೇಶ್, ನಾಗೇಂದ್ರ, ಚಂದ್ರಶೇಖರ್, ಸೋಮೇಶ್, ರಾಮನಾಯಕ, ಚಾ.ಸಿ. ಸೋಮನಾಯಕ, ಅಜಯ್ ಗೌಸ್, ಶಿವರಾಜ್, ಶಿವರಾಮು, ವರದನಾಯಕ, ಮಹೇಂದ್ರ ಗಣೇಶ್, ಚಂದ್ರಶೇಖರ್, ವೆಂಕಟೇಶ್, ಸುರೇಶ್ ನಾಗ್, ರಾಮಚಂದ್ರ ನಾಯಕ, ಅಗರರಾಜು, ಶಕುಂತಲಾ, ಗೀತಾ ಸಿದ್ದರಾಜು, ರೇಖಾ, ನಾರಾಯಣ್ ಹಾಗೂ ಜಿಲ್ಲೆಯ ಎಲ್ಲ ಗ್ರಾಮದ ನಾಯಕ ಜನಾಂಗದ ಯಜಮಾನರು, ಕುಲಸ್ಥರು ಭಾಗವಹಿಸಿದ್ದರು.

ಬೀದಿನಾಯಿ ಉಪಟಳ ತಡೆಗೆ ಕ್ರಮವಹಿಸಲು ನಗರಸಭೆ ಸೂಚನೆ

ಚಾಮರಾಜನಗರ: ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು ಮತ್ತು ರೈಲ್ವೆ ನಿಲ್ದಾಣದ ಮುಖ್ಯಸ್ಥರು ಸರ್ವೋಚ್ಚ ನ್ಯಾಯಾಲಯ ನೀಡಿರುವ ನಿರ್ದೇಶನದಂತೆ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮವಹಿಸುವಂತೆ ತಿಳಿಸಲಾಗಿದೆ.

ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳು ವಾಸವಿದ್ದಲ್ಲಿ ಪರಿಶೀಲಿಸಿ ಅದರ ಸಂಖ್ಯೆಯನ್ನು ಲೆಕ್ಕ ಮಾಡಿ ನಗರಸಭೆಗೆ ತಿಳಿಸಬೇಕು. ಸಂಸ್ಥೆಯ ಆವರಣದಲ್ಲಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರವೇಶ ನಿಯಂತ್ರಿಸಲು ಕ್ರಮವಹಿಸಬೇಕು. ನಗರ ಸ್ಥಳೀಯ ಸಂಸ್ಥೆಯಿಂದ ಬೀದಿ ನಾಯಿಗಳ ಸ್ಥಳಾಂತರಕ್ಕೆ ಮತ್ತು ಅವುಗಳ ಪ್ರವೇಶ ನಿರ್ಬಂಧಿಸುವುದನ್ನು ಮೇಲ್ವಿಚಾರಣೆ ಮಾಡಲು ಸಂಸ್ಥೆಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಬೇಕು. ಸಂಸ್ಥೆಯ ವ್ಯಾಪ್ತಿಯಲ್ಲಿ ಪುನಃ ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅದನ್ನು ಸ್ಥಳಾಂತರಿಸುವ ವೆಚ್ಚವನ್ನು ಸಂಸ್ಥೆಯಿಂದ ವಸೂಲಿ ಮಾಡಲಾಗುವುದು. ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದಲ್ಲಿ ಕಾನೂನು ಕ್ರಮವಹಿಸಲಾಗುವುದು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸಹಕಾರ ರತ್ನ ಪ್ರಶಸ್ತಿ ಪ್ರದಾನ



ಚಾಮರಾಜನಗರ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಚ್ ಎಸ್ ನಂಜುಂಡ ಪ್ರಸಾದ್‌ರವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕ ಸಹಕಾರ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ನಿರ್ಲಕ್ಷ್ಯ ಸಲ್ಲದು



ಮಾಹಿತಿ ಆಯುಕ್ತರಾದ ಡಾ. ಹರೀಶ್ ಕುಮಾರ್ ಹಾಗೂ ಕೆ.ಬದ್ರುದ್ದೀನ್ ಮಾಹಿತಿ ಹಕ್ಕು ಕಾಯ್ದೆ ಕುರಿತು ಕಾರ್ಯಾಗಾರ ಹಾಗೂ ಸಂವಾದವನ್ನುದ್ದೇಶಿಸಿ ಮಾತನಾಡಿದರು

ಚಾಮರಾಜನಗರ, ನ15–ಉನ್ನತ ಅಧಿಕಾರಸ್ಥರಿಂದ ಹಿಡಿದು ಗ್ರಾಮ ಪಂಚಾಯಿತಿ ವರೆಗಿನ ಎಲ್ಲ ಸಾರ್ವಜನಿಕ ಪ್ರಾಧಿಕಾರಗಳು ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಬರಲಿವೆ. ಹೀಗಾಗಿ ಮಾಹಿತಿ ಹಕ್ಕಿನಡಿ ಕೇಳಲಾಗುವ ಯಾವುದೇ ಅರ್ಜಿಯನ್ನು ನಿರ್ಲಕ್ಷ್ಯ ಮಾಡದೆ ಕಾಲಮಿತಿಯೊಳಗೆ ವಿಲೇವಾರಿ ಮಾಡುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದು ಮಾಹಿತಿ ಆಯುಕ್ತರಾದ ಡಾ. ಹರೀಶ್ ಕುಮಾರ್ ಹಾಗೂ ಕೆ. ಬದ್ರುದ್ದೀನ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಇಲಾಖೆಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಆಯೋಜಿಸಲಾಗಿದ್ದ ಮಾಹಿತಿ ಹಕ್ಕು ಕಾಯ್ದೆ ಕುರಿತು ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮಾಹಿತಿ ಹಕ್ಕಿನಡಿ ಸಲ್ಲಿಕೆಯಾಗುವ ಅರ್ಜಿಗಳ ಬಗ್ಗೆ ಅನಗತ್ಯ ಆತಂಕ ಬೇಡ. ಕಾಯ್ದೆ ಬಗ್ಗೆ ಅಧಿಕಾರಿಗಳು ಸ್ಪಷ್ಟವಾಗಿ ತಿಳಿದುಕೊಂಡರೆ ಅರ್ಜಿಯಲ್ಲಿ ಕೋರುವ ಮಾಹಿತಿಯನ್ನು ಸಮರ್ಪಕವಾಗಿ ನೀಡಬಹುದು. ಮಾಹಿತಿ ಹಕ್ಕು ಅಧಿನಿಯಮದ ಅಧ್ಯಾಯಗಳು, ಕಲಂಗಳನ್ನು ಓದಿ ಮನನ ಮಾಡಿಕೊಂಡಿರಬೇಕು. ಮಾಹಿತಿ ಆಯೋಗ, ನ್ಯಾಯಾಲಯಗಳು ನೀಡಿರುವ ಆದೇಶ ತೀರ್ಪುಗಳ ಬಗ್ಗೆ ತಿಳಿದುಕೊಂಡಿರಬೇಕು. ಇದರಿಂದ ಮಾಹಿತಿ ದಾಖಲೆಗಳನ್ನು ನೀಡುವಲ್ಲಿ ಸಹಕಾರಿಯಾಗಲಿದೆ ಎಂದರು.

ಮಾಹಿತಿ ಹಕ್ಕು ಕಾಯ್ದೆ ಅಧಿಕಾರಿಗಳಿಗೆ ಸ್ವಾತಂತ್ರ್ಯ ರಕ್ಷಣೆ ಕೂಡ ಕೊಡಲಿದೆ. ಮಾಹಿತಿ ಕೋರಿ ಸಲ್ಲಿಸಿದ ಅರ್ಜಿದಾರರಿಗೆ ಮಾಹಿತಿ ನೀಡಬೇಕು ಅಥವಾ ಸೂಕ್ತ ಹಿಂಬರಹ ಕೊಡಬೇಕು. 30 ದಿನಗಳೊಳಗೆ ಕೇಳಲಾದ ಮಾಹಿತಿ ಒದಗಿಸಬೇಕಿದೆ ಸ್ವೀಕರಿಸಿದ ಅರ್ಜಿಯು ಇಲಾಖೆಯ ವ್ಯಾಪ್ತಿಗೆ ಒಳಪಡದಿದ್ದರೆ ಸಂಬಂಧಪಟ್ಟವರಿಗೆ 5 ದಿನಗಳೊಳಗೆ ವರ್ಗಾಯಿಸಬೇಕು. ಈ ಯಾವ ಪ್ರಕ್ರಿಯೆಯನ್ನು ಅನುಸರಿಸದೇ ವಿಳಂಬ ನಿರ್ಲಕ್ಷ್ಯ ಮಾಡಿದ್ದಲ್ಲಿ ದಂಡನೆ, ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿ ಮಾಹಿತಿ ಹಕ್ಕು ಕಾಯ್ದೆಯಡಿ ಕೋರಲಾಗುವ ಅರ್ಜಿಗಳಿಗೆ ಸಕಾಲದಲ್ಲಿ ಅಧಿಕಾರಿಗಳು ದಾಖಲೆ, ಮಾಹಿತಿಯನ್ನ ನೀಡಬೇಕು. ಮಾಹಿತಿ ಹಕ್ಕು ಕಾರ್ಯಾಗಾರಗಳಲ್ಲಿ ಸಲಹೆ ಮಾರ್ಗದರ್ಶನ ಪಡೆದು ಅರ್ಜಿ ವಿಲೇವಾರಿಯಲ್ಲಿ ಸಮರ್ಪಕ ಕ್ರಮಗಳಿಗೆ ಮುಂದಾಗಬೇಕು ಎಂದರು.

ಜಿಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇ ಗೌಡ, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಅಧಿಕಾರಿಗಳೊಂದಿಗೆ ನಡೆದ ಕಾರ್ಯಾಗಾರ ಹಾಗೂ ಸಂವಾದದ ಬಳಿಕ ಮಾಹಿತಿ ಆಯುಕ್ತರು ಸಾರ್ವಜನಿಕರೊಂದಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತು ಸಂವಾದ ಹಾಗೂ ಚರ್ಚೆ ನಡೆಸಿದರು.

ಪುರಾತನ ತಾಣಗಳ ವಸ್ತುಪ್ರದರ್ಶನ ವೀಕ್ಷಿಸಿ ಶಾಸಕರ ಮೆಚ್ಚುಗೆ

ಚಾಮರಾಜನಗರ: ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಇಂದು ಆಯೋಜಿಸಲಾಗಿದ್ದ ರಾಜ್ಯದ ಐತಿಹಾಸಿಕ ಪಾರಂಪರಿಕ ಕೋಟೆಗಳು ಹಾಗೂ ಏಳು ಅದ್ಭುತ ತಾಣಗಳ ಮಾದರಿ ವಸ್ತುಪ್ರದರ್ಶನವನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕದ ಐತಿಹಾಸಿಕ ಪಾರಂಪರಿಕ ಕೋಟೆಗಳು ಹಾಗೂ ಏಳು ಅದ್ಭುತ ಪುರಾತನ ತಾಣಗಳ ಮಾದರಿಗಳ ವಸ್ತುಪ್ರದರ್ಶನ ವೀಕ್ಷಿಸಿ ಮಾತನಾಡಿದ ಅವರು, ಯಾವುದೇ ದೇಶ ಅಥವಾ ರಾಜ್ಯ ಅಭಿವೃದ್ಧಿ ಹೊಂದಲು ಶಿಕ್ಷಣದಿಂದ ಮಾತ್ರ ಸಾಧ್ಯ. ಶಿಕ್ಷಣದಿಂದ ಮಾತ್ರ ಬಡತನ ನಿರ್ಮೂಲನೆ ಮಾಡಲು ಸಾಧ್ಯವಾಗಲಿದೆ. ನಮ್ಮ ಕಣ್ಮುಂದೆ ಅದ್ಭುತವಾದಂತಹ ಐತಿಹಾಸಿಕ ಮಾದರಿಯ ವಸ್ತುಪ್ರದರ್ಶನವನ್ನು ಏರ್ಪಡಿಸಿರುವುದು ಸಂತಸದ ವಿಚಾರವಾಗಿದೆ. ವಸ್ತುಪ್ರದರ್ಶನದ ಮಾದರಿ ತಯಾರಿಸಿದ ವಿದ್ಯಾರ್ಥಿಗಳ ಭವಿಷ್ಯ ಉತ್ತಮವಾಗಲಿ ಎಂದು ಹಾರೈಸಿದರು.

ಚಾ.ನಗರ ವಿವಿ.ಕುಲಪತಿ ಪ್ರೊ. ಎಂ. ಆರ್. ಗಂಗಾಧರ್ ಮಾತನಾಡಿ, ಇತಿಹಾಸ ವಿಭಾಗದಲ್ಲಿ ವಸ್ತುಪ್ರದರ್ಶನ ಮಾಡಿರುವುದು ಸಂತಸದ ವಿಷಯವಾಗಿದೆ. ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಹೊರ ಹೊಮ್ಮಲು ಇಂತಹ ವಸ್ತು ಪ್ರದರ್ಶನ ಉತ್ತಮ ವೇದಿಕೆಯಾಗಿದೆ. ಇಂಥ ವಸ್ತುಪ್ರದರ್ಶನಗಳಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು. ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಬಿ.ಕೆ ರವಿಕುಮಾರ್, ಸಮೀಉಲ್ಲಾ, ವಿಶೇಷ ಅಧಿಕಾರಿ ಡಾ. ಎನ್.ಜಿ. ಪ್ರಕಾಶ್, ಪ್ರಾಂಶುಪಾಲ ಪ್ರೊ. ಬಿ.ಎಸ್ ಮಹದೇವಸ್ವಾಮಿ, ಇತಿಹಾಸ ಮುಖ್ಯಸ್ಥ ಡಾ. ಜಯಣ್ಣ, ಎಂ. ರೋಹಿತ್, ಡಾ.ಲಿಖಿತ ಎಸ್.ಅನುರಾಧ ಇದ್ದರು



ಏಳು ಅದ್ಭುತ ತಾಣಗಳ ಮಾದರಿ ವಸ್ತುಪ್ರದರ್ಶನವನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ಶಾಸಕರೊಂದಿಗಿದ್ದರು.

ಜನರಿಂದ ಜನಪದ



ಜನರಿಂದ ಜನರಿಗೆ ಪರಂಪರಾಗತವಾಗಿ ಹಾಗೂ ಬಾಯಿಂದ ಬಾಯಿಗೆ ಹರಿದು ಬಂದ ಮೌಖಿಕ ಸಾಹಿತ್ಯವೇ ಜನಪದವಾಗಿದೆ. ಜನರು ತಮ್ಮ ಸುಖ–ದುಃಖಗಳನ್ನು , ನೋವು ನಲಿವುಗಳನ್ನು, ಬೇಸರವನ್ನು ಹಾಡುಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ಹೀಗೆ ಆರಂಭವಾದ ಜನಪದ ಹಾಡುಗಳು ಒಬ್ಬರಿಂದ ಮತ್ತೊಬ್ಬರಿಗೆ ರವಾನೆಯಾಗುತ್ತಾ ಜನಪದ ಮೌಖಿಕ ಪರಂಪರೆಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದು ಅದರ ಹೆಗ್ಗಳಿಕೆ.

ಜನಪದ ಹಿನ್ನೆಲೆ: ಆಂಗ್ಲಭಾಷೆಯ Folklore ಎಂಬ ಪದಕ್ಕೆ ಕನ್ನಡದಲ್ಲಿ ಜಾನಪದ ಎಂಬ ಅರ್ಥವಿದೆ. Folk ಎಂದರೆ ಜನಪದ ಎಂತಲೂ, Lore ಎಂದರೆ ಜ್ಞಾನ ಎಂಬ ಅರ್ಥವೂ ಇದ್ದು, ಜನಪದದ ಜ್ಞಾನವನ್ನು ಉಳ್ಳದ್ದು ಜಾನಪದವಾಗಿದೆ ಎಂಬುದು ಹಾ.ಮಾ.ನಾಯಕರ ಅಭಿಪ್ರಾಯವಾಗಿದೆ. ಜನಪದ / ಜಾನಪದ ಎಂಬುದು ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಮೌಖಿಕ ಪರಂಪರೆಯಿಂದ ಮೂಡಿಬಂದವುಗಳಾಗಿವೆ.

ಪ್ರಸ್ತುತ ಕಾಲದಲ್ಲಿ ಮೊಬೈಲ್, ಅಂತರ್ಜಾಲ, ಸಾಮಾಜಿಕ ಜಾಲತಾಣಗಳು ಇರುವಂತೆ ಹಿಂದಿನ ಕಾಲದಲ್ಲಿ ಈ ಬಗೆಯ ಯಾವುದೇ ಮನರಂಜನೆಯ ಸಾಧನಗಳು ಇರಲಿಲ್ಲ. ಮುಂಜಾವಿನಿಂದ ಮುಸ್ಸಂಜೆಯವರೆಗೂ ತಮ್ಮ ನಿರಂತರವಾದ ಕೆಲಸಗಳಿಂದ ಉಂಟಾಗುವ ಬೇಸರವನ್ನು ಕಳೆಯಲೆಂದೇ ಹಾಡುಗಳನ್ನು ಸೃಷ್ಟಿಸಿ ಹಾಡುತ್ತಿದ್ದರು. ಸಂತೋಷವಾಗಲಿ, ದುಃಖ ವಾಗಲಿ, ಬೇಸರವಾಗಲಿ ಎಲ್ಲವನ್ನು ತಮ್ಮ ಅನುಭವದ ಮೂಲಕ ಹಾಡಿನ ರೂಪದಲ್ಲಿ ಕಟ್ಟಿಕೊಟ್ಟ ಹೆಗ್ಗಳಿಕೆ ಜನಪದರಿಗೆ ಸಲ್ಲುತ್ತದೆ. ಜನಪದ ಹಾಡುಗಳಿಗೆ ನಿರ್ದಿಷ್ಟವಾದ ವಿಷಯವಾಗಲಿ, ವಸ್ತುವಾಗಲಿ ಬೇಕಾಗಿರಲಿಲ್ಲ. ಮಕ್ಕಳ ಬಗ್ಗೆ, ಅತ್ತೆ ಮನೆಯಲ್ಲಿ ಸೊಸೆಯಾದವಳು ನಡೆದುಕೊಳ್ಳಬೇಕಾದ ಬಗ್ಗೆ, ಪ್ರಕೃತಿಯ ಬಗ್ಗೆ , ಮಳೆಯ ಬಗ್ಗೆ ಬಡತನದ ಬಗ್ಗೆ ಹೀಗೆ ಎಲ್ಲವೂ ಜನಪದರ ಹಾಡಿಗೆ ಒಂದಲ್ಲ ಒಂದು ಸ್ಫೂರ್ತಿಯನ್ನು ಒದಗಿಸುತ್ತಿದ್ದವು. ಅದರಲ್ಲೂ ಸಾಮಾನ್ಯವಾಗಿ ಈ ಹಾಡುಗಳು ತ್ರಿಪದಿಯ ಸ್ವರೂಪದಲ್ಲಿ ಹೆಚ್ಚು ಕಂಡುಬರುತ್ತಿದ್ದುದು ವಿಶೇಷವಾಗಿತ್ತು.

ಆಡಿ ಬಾ ಎನ ಕಂದ ಅಂಗಾಲ ತೊಳೆದೇನ
ತೆಂಗಿನ ಕಾಯಿ ತಿಳಿನೀರ
ತಕ್ಕೊಂಡು ಬಂಗಾರದ ಮೊರೆ ತೊಳೆದೇನ॥

ಇದು ಮಗುವಿನ ಲಾಲನೆ ಪಾಲನೆಯಲ್ಲಿ ಸಂತೋಷ ಪಡುತ್ತಿದ್ದ ತಾಯಿ ಒಬ್ಬಳ ಸಂತಸದ ಕ್ಷಣಗಳನ್ನು ತಿಳಿಸುವ ತ್ರಿಪದಿ. ಮಕ್ಕಳು ಏನೇ ಮಾಡಿದರು ಅದು ಹೆತ್ತವರಿಗೆ ಅಂದ–ಚೆಂದ. ಆಟವಾಡಲು ಹೋಗಿ ಬಂದ ಮಗುವನ್ನು ಕುರಿತು ತಾಯಿ, ನಿನ್ನ ಅಂಗಾಲನ್ನು ತೆಂಗಿನ ಕಾಯಿಯ ತಿಳಿನೀರ ತೆಗೆದುಕೊಂಡು ತೊಳೆಯುವೆನೆಂದು, ಬಂಗಾರದಂತಹ ನಿನ್ನ ಮೋರೆಯನ್ನು ಅಂದರೆ ಮುಖವನ್ನು ತೊಳೆಯುವೆನೆಂದು ಹೇಳುವುದು ವಿಶೇಷವಾಗಿದೆ. ಮಕ್ಕಳು ಆಟವಾಡಿ ಬಂದಾಗ ಸಹಜವಾಗಿ ಅಂಗಾಲಿನಲ್ಲಿ ಕೊಳೆಯಾಗಿರುತ್ತದೆ. ಮುಖವು ಬಾಡಿ ಹೋಗಿರುತ್ತದೆ. ಅಂತಹ ಮಗುವಿನ ಅಂಗಾಲನ್ನು ತೆಂಗಿನ ಕಾಯಿಯ ತಿಳಿನೀರಿನ ತೆಗೆದುಕೊಂಡು ತೊಳೆಯುವೆ ಎನ್ನುವ ಮೂಲಕ ಮಗುವಿನ ಮೇಲೆ ತನಗಿರುವ ಅಕ್ಕರೆ ವ್ಯಕ್ತಪಡಿಸಿದ್ದಾಳೆ. ತಾಯಿಗೆ ಮಗುವಿನ ಮುಖ ಬಂಗಾರದಷ್ಟೇ ಅಮೂಲ್ಯವಾದುದು ಅಂತಹ ಮುಖವನ್ನು ತೆಂಗಿನ ಕಾಯಿಯ ಎಳೆನೀರಿನ ಮೂಲಕ ತೊಳೆದು ಮಿನುಗುವಂತೆ ಮಾಡುವೆ ಎಂಬಂತಹ ನುಡಿ ತನ್ನ ಮಗುವಿನ ಬಗ್ಗೆ ಆ ತಾಯಿಗಿರುವ ಅಪಾರವಾದ ಪ್ರೀತಿಯನ್ನು ಹಾಗೂ ವಾತ್ಸಲ್ಯದ ಮೆರುಗನ್ನು ಪ್ರಚುರಪಡಿಸುವಂತಿದೆ.

ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕೆ
ಕೂಸು ಕಂದಯ್ಯ ಒಳ ಹೊರಗ
ಆಡಿದರೆ ಬೀಸಣಿಗೆ ಗಾಳಿ ಸುಳಿದಾವ॥

ಜನಪದರಲ್ಲಿ ಮಕ್ಕಳ ಮೇಲಿನ ಪ್ರೀತಿ ಅಗಾಧವಾಗಿತ್ತು ಕೂಸು ಅಂದರೆ ಕಂದಮ್ಮನಿದ್ದ ಮನೆಗೆ ಬೀಸಣಿಗೆಯ ಅವಶ್ಯಕತೆ ಇರುವುದಿಲ್ಲ. ಕೂಸು ಒಳಗೆ ಹೊರಗೆ ಆಡಿದರೆ ತಂಗಾಳಿ ಸುಳಿಯುತ್ತದೆ. ಅದರ ಭಾವ ಭಂಗಿ ಮಗುವಿನ ನಲಿದಾಟ ಒಂದು ಬಗೆಯ ಕೌತುಕ ಆ ಮೂಲಕ ಮಗುವಿನ ಪ್ರಾಮುಖ್ಯತೆ ಜನಪದರಲ್ಲಿ ಎಷ್ಟಿತ್ತು ಎಂಬುದನ್ನು ತಿಳಿಸುತ್ತದೆ. ಸಾಮಾನ್ಯವಾಗಿ ಮಕ್ಕಳು ಒಂದು ಜಾಗದಲ್ಲಿ ಕೂರುವುದಿಲ್ಲ ಮನೆಯಿಂದ ಹೊರಗೆ, ಹೊರಗಿನಿಂದ ಮನೆಗೆ ಓಡಾಡಿಕೊಂಡು ಕಾಲ ಕಳೆಯುತ್ತವೆ. ಹೀಗೆ ಮಗುವು ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡಿದರೆ ಬೀಸಣಿಗೆಯಲ್ಲಿ ಬರುವಂತೆ ತಂಪಾದ ಗಾಳಿ ಸುಳಿಯುತ್ತದೆ ಎನ್ನುವ ಆತ್ಮೀಯತೆ ನಿಜಕ್ಕೂ ಅನನ್ಯವಾದುದು.

ದುಡ್ಡು ಕೊಟ್ಟರೆ ಬೇಕಾದ್ದು ಸಿಗತೈತಿ ಈ ಜಗದಲಿ ಕಾಣೋ
ಹಡೆದ ತಾಯಿಯನು ಕಳಕೊಂಡ ಮ್ಯಾಲ
ಮತ್ತೆ ಸಿಗುವಳೇನೊ ತಮ್ಮ ಮರಳಿ ಬರುವಳೇನೋ॥

ಈ ಜಗತ್ತಿನಲ್ಲಿ ದುಡ್ಡು ಕೊಟ್ಟರೆ ಏನು ಬೇಕಾದರೂ ಸಿಗಬಹುದು. ಆದರೆ ಹಡೆದ ತಾಯಿಯನ್ನು ಕಳೆದುಕೊಂಡ ಮೇಲೆ ಅವಳು ಮರಳಿ ಬರುವಳೇನೋ ಎನ್ನುವ ಮೂಲಕ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು ದುಡ್ಡಿಗಿಂತ ಹಡೆದ ತಂದೆ–ತಾಯಿ ಮುಖ್ಯ ಎಂಬುದು ಇದರ ಸಾರ.

ಉತ್ತಮರ ಗೆಳೆತನ ಪುತ್ಥಳಿ ಬಂಗಾರ
ಮತ್ತ ಹೀನರ ಗೆಳೆತನ ಮಾಡಿದರ
ಹಿತ್ತಾಳೆಗಿಂತ ಬಲು ಹೀನ॥

ಉತ್ತಮರ ಸಹವಾಸ ಮಾಡಿದರೆ ಅದು ಬಂಗಾರದಷ್ಟೇ ಶ್ರೇಷ್ಠವಾದದ್ದು, ಮತಿಹೀನರ ಅಥವಾ ಬುದ್ಧಿ ಇಲ್ಲದವರ ಸಹವಾಸವನ್ನು ಮಾಡಿದರೆ ಅದು ಹಿತ್ತಾಳೆಗಿಂತಲೂ ಬಲು ಹೀನವಾದುದು ಎನ್ನುವ ಮೂಲಕ ನಾವು ಉತ್ತಮರೊಂದಿಗೆ ಬಾಳಿ ಬದುಕಬೇಕು. ಬದುಕಿನಲ್ಲಿ ಗೆಳೆತನ ಅವಶ್ಯಕ, ಅನಿವಾರ್ಯ. ಆದರೆ ಆ ಗೆಳೆತನ ಯಾರೊಂದಿಗೆ ಮಾಡಿಕೊಂಡಿದ್ದೇವೆ ಎಂಬುದು ಮುಖ್ಯವಾಗುತ್ತದೆ ಸರಿ ದಾರಿಯಲ್ಲಿ ನಡೆಯುವಂತೆ ಪ್ರೇರಣೆಯನ್ನು ನೀಡುವವನು, ಗೆಳೆಯನ ಸರಿ ತಪ್ಪುಗಳನ್ನು ತಿಳಿಸಿ ಹೇಳುವವನು, ಒಳ್ಳೆಯ ದಾರಿಯಲ್ಲಿ ನಡೆಯುವಂತೆ ಮಾಡುವವನು ಶ್ರೇಷ್ಠ ಗೆಳೆಯನಾಗುತ್ತಾನೆ. ತಪ್ಪು ದಾರಿಗೆ ಎಳೆಯುವಂತಹ ಗೆಳೆಯರು ತಮ್ಮೊಂದಿಗೆ ತಮ್ಮ ಗೆಳೆಯರನ್ನು ಕೂಡ ಹಾಳು ಮಾಡುವ ಕೆಲಸವನ್ನು ಮಾಡುತ್ತಾರೆ. ಆದ್ದರಿಂದ ಉತ್ತಮರ ಗೆಳೆತನವನ್ನು ಮಾಡಿ ಎಂಬುದನ್ನು, ಬಂಗಾರಕ್ಕೂ ಮತ್ತಹೀನರ ಗೆಳೆತನವನ್ನು ಹಿತ್ತಾಳೆಗೂ ಹೋಲಿಸುವ ಮೂಲಕ ಯಾರೊಂದಿಗೆ ಗೆಳೆತನ ಮಾಡಬೇಕು ಎಂಬುದನ್ನು ಈ ತ್ರಿಪದಿಯ ಮೂಲಕ ತಿಳಿಸಲಾಗಿದೆ.

ಯಾರು ಇದ್ದರೂ ನನ್ನ ತಾಯವ್ವನ್ಹೋಲರ
ಸಾವಿರ ಕೊಳ್ಳಿ ಒಲಿಯಾಗ ಇದ್ದರ
ಜ್ಯೋತಿ ನಿನ್ಯಾರ ಹೋಲರ॥

ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ ಈ ಗಾದೆ ತಾಯಿಯ ಶ್ರೇಷ್ಠತೆಯನ್ನು ತಿಳಿಸಿ ಹೇಳುವಂತದ್ದು. ಹಾಗೆಯೇ ಈ ತ್ರಿಪದಿಯಲ್ಲಿ ಹೆಣ್ಣು ಮಗಳು ಒಬ್ಬಳು ತನ್ನ ತಾಯಿಯ ಮಹತ್ವವನ್ನು ತಿಳಿಸಿದ್ದಾಳೆ. ನನ್ನ ತಾಯಿಯಂತೆ ಹೋಲಿಕೆಯನ್ನು ಉಳ್ಳವರು ಯಾರು ಇರಲು ಸಾಧ್ಯ? ಸಾವಿರ ಕೊಳ್ಳಿ ಒಲೆಯಲ್ಲಿ ಉರಿದರೂ ಅದು ದೇವರ ಮನೆಯ ಜ್ಯೋತಿಗೆ ಸಮನಾಗಲಾರದು. ತನ್ನ ತಾಯಿ ಆ ದೇವರ ಮನೆಯಲ್ಲಿ ಬೆಳಗುವ ಜ್ಯೋತಿ ಇದ್ದಂತೆ. ಇಂತಹ ನನ್ನ ತಾಯಿಯನ್ನು ಹೋಲುವಂತಹ ಗುಣ ಯಾರಿಗಿರಲು ಸಾಧ್ಯ ? ಎನ್ನುವ ಮೂಲಕ ತಾಯಿಯ ಶ್ರೇಷ್ಠತೆಯನ್ನು ಹೆಣ್ಣು ಮಗಳು ಒಬ್ಬಳು ಇಲ್ಲಿ ಎತ್ತಿ ಹಿಡಿದಿದ್ದಾಳೆ. ನಾನು ತಾಯಿಯಂತೆ ನೋಡಿಕೊಂಡೆ ಎಂದು ಯಾರಾದರೂ ಹೇಳಬಹುದು ವಿನಹ ತಾಯಿಯಾಗಿ ನೋಡಿಕೊಳ್ಳಲು ಸಾಧ್ಯವಿಲ್ಲ. ಇಂತಹ ತಾಯಿಯ ಮಹತ್ವವನ್ನು ತಿಳಿಸುವಂತಹ ಈ ಜನಪದ ತ್ರಿಪದಿ ಸರ್ವಕಾಲಕ್ಕೂ ಯಾರು ಎಲ್ಲಿಯೇ ಓದಿದರು ಮೆಚ್ಚಲೇಬೇಕಾದ ಒಪ್ಪಲೇಬೇಕಾದ ತ್ರಿಪದಿಯಾಗಿದೆ.

ಅಮ್ಮಾನ ಮನೆಯಿಂದ ಅತ್ತೇಯ ಮನೆಗೋಗಿ
ಮುತ್ತಂತೆ ಬಾಳು ನನ್ನ ತಂಗಿ ಮುತ್ತಿನುಂಗುರದ
ಮಣಿಯಾಗಿ ಮರಿಬೇಡ ತವರೂರು
ವರ್ಷಕ್ಕೆ ಒಮ್ಮೆ ತೇರುಕಷ್ಟ ಇರಲಿ ನೂರು
ಮರಿಬೇಡ ಅಣ್ಣನ ಸೂರು. ॥ಅಮ್ಮನಾ॥
ನೆರೆಮನೆ ಸಂಗ ಬೇಡ ಅದು ವಿರಸಕ್ಕೆ ದಾರಿ
ನೋಡ ಕೈಯೊಳಗಿರಲಿ ಮನಸು
ಕಾಣಬೇಡ ಹುಚ್ಚು ಕನಸು. ॥ಅಮ್ಮಾನ॥
ನಗ್ ನಗ್ತಾ ಹೇಳೋರೆಲ್ಲಾ ನಿನ್ನ ಕಷ್ಟಕ್ಕೆ ಬರುವಾದಿಲ್ಲ
ಎದೆಯೊಳಗಿರಲಿ ಭೀತಿ
ಮರೆಯದೆ ಎಂದಿಗೂ ನೀತಿ. ॥ಅಮ್ಮಾನ॥
ಸುತ್ತೆಲ್ಲ ಕಣ್ಣಿರಲಿ ನಿನ್ನ ಮಾತಲ್ಲಿ ಮಿತಿಯಿರಲಿ
ಪಡದಿರು ಎಂದಿಗೂ ಅನುಮಾನ
ಬಿಡದಿರು ನಿನ್ನ ಬಿಗುಮಾನ. ॥ಅಮ್ಮಾನ ॥

ಜನಪದದ ಈ ಗೀತೆ ಹೆಣ್ಣು ಮಗಳೊಬ್ಬಳು ತನ್ನ ತವರು ಮನೆಯಿಂದ ಗಂಡನ ಮನೆಗೆ ಹೋದಾಗ ನಡೆದುಕೊಳ್ಳಬೇಕಾದ ರೀತಿಯನ್ನು ತಿಳಿಸುತ್ತದೆ. ಅಮ್ಮನ ಮನೆಯಿಂದ ಅತ್ತೆಯ ಮನೆಗೆ ಹೋಗಿ ಮುತ್ತಿನಂತೆ ಬಾಳು ಎನ್ನುವ ಮೂಲಕ ಎಲ್ಲರೊಂದಿಗೆ ಹೊಂದಾಣಿಕೆಯಿಂದ ಬದುಕನ್ನು ನಡೆಸು ಎಂಬ ನೀತಿಯನ್ನು ತಿಳಿಸಿದ್ದಾರೆ. ಗಂಡನ ಮನೆಯಲ್ಲಿ ಬಾಳಿದರು ಕೂಡ ತವರು ಮನೆಯನ್ನು ಮರೆಯಬೇಡ ಎನ್ನುವ ಮೂಲಕ ಹೆಣ್ಣಿಗೆ ಗಂಡನ ಮನೆಯಷ್ಟೇ ತವರ ಮನೆಯು ಮುಖ್ಯ ಎಂಬುದನ್ನು ತಿಳಿಸಿದ್ದಾರೆ. ವರ್ಷಕ್ಕೆ ಒಮ್ಮೆಯಾದರೂ ತವರುಮನೆಗೆ ಬಂದು ಹೋಗು, ಈ ಅಣ್ಣನ ಮನೆಯಲ್ಲಿ ಕಷ್ಟ ತೇರಿನಷ್ಟಿದ್ದರೂ ಈ ತವರುಮನೆಯನ್ನು ಮರೆಯಬೇಡವೆಂದು ತಿಳಿಸುವ ಮೂಲಕ ತಮ್ಮ ಕಷ್ಟಗಳೇ ನಿದ್ದರೂ ಮನೆಯ ಮಗಳನ್ನು ನೋಡಿಕೊಳ್ಳುವ ತಮ್ಮ ಜವಾಬ್ದಾರಿಯನ್ನು ತಿಳಿಸಿದಂತಿದೆ.

ಮುಂದುವರೆದು ತನ್ನ ತಂಗಿ ಗಂಡನ ಮನೆಯಲ್ಲಿ ಹೇಗೆ ಬಾಳಬೇಕು ಎಂಬುದನ್ನು ಅಣ್ಣನಾದವನು ಬುದ್ಧಿ ಹೇಳುವ ಮೂಲಕ ತಿಳಿಸುವ ಕೆಲಸವನ್ನು ಮಾಡಿದ್ದಾನೆ. ನೆರೆ ಮನೆಯವರ ಸಂಗವನ್ನು ಮಾಡಿ ಬುದ್ದಿಯನ್ನು ಕಳೆದುಕೊಂಡು ಹುಚ್ಚು ಕನಸು ಕಾಣಬೇಡ ಎಂದು, ನಗುನಗುತ ಮಾತನಾಡುವವರು ನಿನ್ನ ಕಷ್ಟಕ್ಕೆ ಬರುವುದಿಲ್ಲ ಎಂದು ಹೇಳಿ ಯಾವುದೇ ಕಾರಣಕ್ಕೂ ನೀತಿಯನ್ನು ಬಿಟ್ಟು ಇರಬೇಡ ಎಂದು, ಸುತ್ತಮುತ್ತ ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸುವ ಕಣ್ಣಿರಲಿ ಎಂದು, ನಿನ್ನ ಮಾತಿನಲ್ಲಿ ಮಿತಿ ಇರಲಿ ಎಂದು, ಅನುಮಾನ ಪಡಬೇಡ ಬಿಗುಮಾನ ನಿನ್ನದು, ನಿನ್ನಲಿರಲಿ ಎಂದು ಗಂಡನ ಮನೆಗೆ ಹೋಗುವ ಹೆಣ್ಣು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಗುಣಗಳನ್ನು ತಿಳಿಸುವ ಈ ಜನಪದ ಗೀತೆ ಅಂದಿಗೂ ಎಂದಿಗೂ ಬದುಕಿನಲ್ಲಿ ಮರೆಯಲಾಗದ ಪಾಠವನ್ನು ತಿಳಿಸುವಂತಿದೆ.

ಪ್ರಸ್ತುತ ದಿನಗಳಲ್ಲಿ ಅತ್ತೆ ಸೊಸೆ ಕಲಹ, ಅತ್ತಿಗೆ ನಾದಿನಿ ಜಗಳ ಹೀಗೆ ಹೊಂದಾಣಿಕೆ ಕೊರತೆಯನ್ನು ಅನುಭವಿಸುವಂತಹ ಹೆಣ್ಣು ಮಕ್ಕಳಿಗೆ ಈ ಜನಪದ ಗೀತೆಯ ಮಹತ್ವವನ್ನು ತಿಳಿಸಿ ನೀತಿಯನ್ನು ಕಲಿಸಬೇಕಾದದ್ದು ಅನಿವಾರ್ಯವೂ, ಅಗತ್ಯವೂ ಆಗಿದೆ.


ಪ್ರಸ್ತುತ ಕಾಲದಲ್ಲಿ ನಾಗರೀಕತೆಯ ಬೆಳವಣಿಗೆಯ ಹಾದಿಯಲ್ಲಿ ಎಲ್ಲಿಯೂ ನಿಲ್ಲದೆ ಓಡುತ್ತಿರುವ ನವ ನಾಗರಿಕರಿಗೆ ಸಂಬಂಧಗಳ ಮೌಲ್ಯಗಳನ್ನು, ಬದುಕಿನ ವಿವಿಧ ಮಜಲುಗಳನ್ನು ತಿಳಿಸುವಂತಹ ಈ ಜನಪದ ಹಾಡುಗಳ ಪರಂಪರೆಯನ್ನು ಪ್ರಚುರಪಡಿಸಿ ಪ್ರಸ್ತುತಪಡಿಸುವ ಅಗತ್ಯವಿದೆ.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ
ವಿದ್ಯಾಶಾಲಾ, ಮೈಸೂರು
ಮೊ: 9036389640

ಮಕ್ಕಳ ಚಿತ್ರಕಥೆ — ಅಮ್ಮ ಗದರಿಸಿ ಕಲಿಸಿದ್ದು...!

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ವಾರಭವಿಷ್ಯ

16.11.2025 ರಿಂದ 22.11.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಚಂದ್ರ–ಕನ್ಯಾ, ತುಲಾ, ವೃಶ್ಚಿಕ, ಕುಜ–ವೃಶ್ಚಿಕ, ಬುಧ–ವೃಶ್ಚಿಕ, ಗುರು–ಕಟಕ, ಶುಕ್ರ–ತುಲಾ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ವಾರದ ಆದಿಗೆ ಕೆಲಸದ ಒತ್ತಡ ಜಾಸ್ತಿ ಇರುತ್ತದೆ. ಜೊತೆಗೆ ಪ್ರತಿಫಲವಿಲ್ಲದ ಓಡಾಟಗಳು. ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್ ಮುಗಿಸಲು ಹೆಚ್ಚಿನ ಪರಿಶ್ರಮ ಪಡಬೇಕಾಗುತ್ತದೆ. ಸಹೋದರರೊಡನೆ ಘರ್ಷಣೆಗೆ ಹೋಗದಿರಿ. ವ್ಯಾಪಾರ ವ್ಯವಹಾರಗಳು ಕುಂಠಿತವಾಗುವುದು. ವಾರಾಂತ್ಯಕ್ಕೆ ಗ್ರಹಗಳ ಶುಭವಿದ್ದು, ಧನ, ಕನಕಾದಿ ಪ್ರಾಪ್ತಿ, ಪ್ರಸಾಧನ ವಸ್ತುಗಳ ಖರೀದಿ ಕನ್ಯೆಯರಿಗೆ ರಕ್ತದೋಷದಿಂದ ದೇಹ ಬಳಲುವುದು.
ಶ್ರೀ ಚಂದ್ರಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–7

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಸಪ್ತಾಹದ ಆದಿಗೆ ನಿಮ್ಮ ನಿರ್ಲಕ್ಷ್ಯದಿಂದ ಕೈಗೆ ಬಂದ ತುತ್ತು ಬಾಯಿಗೆ ಇಲ್ಲದಂತೆ ಆಗುವುದು. ಗುರು–ಹಿರಿಯರ ಬುದ್ಧಿಮಾತನ್ನು ತಿರಸ್ಕರಿಸಬೇಡಿ. ಬರಬೇಕಾದ ಹಣ ಬಂದೇ ಬರುತ್ತದೆ. ವ್ಯಾಪಾರಿಗಳಿಗೆ ಬಾಕಿ ವಸೂಲಿಯೂ ಆಗುತ್ತದೆ. ಕೆಲವು ವಿವಾಹ ಯೋಗ್ಯರಿಗೆ ಆಕಸ್ಮಿಕವಾಗಿ ವಿವಾಹ ಭಾಗ್ಯ ಒದಗಿ ಬರುವ ಸಾಧ್ಯತೆ ಇರುತ್ತದೆ. ಕೃಷಿಕರಿಗೆ ಉತ್ತಮ ಬೆಳೆ ಹಾಗೂ ಪ್ರತಿಫಲ ದೊರೆಯುವುದು. ವಾರಾಂತ್ಯಕ್ಕೆ ಪಿಕ್‌ನಿಕ್.
ಶ್ರೀ ದೇವೀ ವಂದನೆ, ಶುಭ ಸಂಖ್ಯೆ–4

ಮಿಥುನ (ಕ,ಕಿ,ಕು,ಘ,ಜ,ಛ,ಕೆ,ಕೊ,ಹ)
ಅಧಿಕಾರಿ ವರ್ಗದವರು ಮುಂಬಡ್ತಿಯ ನಿರೀಕ್ಷೆಯಲ್ಲಿದ್ದರೆ ಯಶಸ್ಸಾಗುತ್ತದೆ. ಆದಾಯ ಉತ್ತಮವಿದ್ದರೂ ಖರ್ಚು–ವೆಚ್ಚಗಳು ಹೆಚ್ಚಲಿದೆ. ಫೈನಾನ್ಸ್ ವ್ಯವಹಾರ ಮಾಡುವವರು ಸೂಕ್ತ ಸೆಕ್ಯೂರಿಟಿ ಪಡೆಯಿರಿ. ಕರ್ಮ ಸ್ಥಾನದಲ್ಲಿ ಶನಿ ಸಂಚಾರವಿದ್ದು ಮಾಡುವ ಕೆಲಸಗಳು ವಿಳಂಬವಾಗಿ ಫಲ ನೀಡುವುದು. ವಾರದ ಕಡೆಗೆ ವಾಯು ಸಂಬಂಧ ಕಾಯಿಲೆ ಕಾಡುವುದು.
ಶ್ರೀ ಮನೆ ದೇವರ ದರ್ಶನ. ಶುಭ ಸಂಖ್ಯೆ–1

ಕಟಕ (ಹೊ,ಹು,ಹೆ,ಡ,ಡಿ,ಡು)
ನಿಮ್ಮ ಸುತ್ತಲಿನ ವಿದ್ಯಮಾನಗಳು ಸ್ಥಗಿತಗೊಂಡಂತೆ ಭಾಸವಾಗುವುದು. ಮುಖ್ಯ ಕೆಲಸ ಕಾರ್ಯಗಳಲ್ಲಿ ಹಿತಶತ್ರುಗಳಿಂದ ಅಡಚಣೆ ಉಂಟಾಗಲಿದೆ. ವೃಥಾ ಅಪವಾದದ ಭೀತಿ ಇರುತ್ತದೆ. ವಾರದ ಉತ್ತರಾರ್ಧಕ್ಕೆ ತುಸು ಹರುಷದ ವಾತಾವರಣ. ಮನೆ ಮಂದಿಯ ಸಹಕಾರ, ಒಗ್ಗಟ್ಟೇ ಒಬ್ಬಟ್ಟು, ಕಾರ್ಯ ನಿಮಿತ್ತ ಪ್ರಯಾಣಗಳು ಉಂಟಾಗಲಿದೆ. ಗುರುಗಳಿಂದ ಆಧ್ಯಾತ್ಮ ಜ್ಞಾನ ಲಾಭ.
ಶ್ರೀ ದೇವಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–9

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಈ ವಾರದಲ್ಲಿ ಅನಿರೀಕ್ಷಿತ ಖರ್ಚುಗಳು ಹೆಚ್ಚುವ ಕಾರಣ ಸಂಪಾದನೆಯನ್ನು ವೃದ್ಧಿಸಿಕೊಂಡರೆ ಸಮತೋಲನವನ್ನು ಕಾಣುವಿರಿ. ಆಪ್ತ ಮಿತ್ರರ ಸಹಾಯವನ್ನು ಕೋರಿಕೊಳ್ಳಿ. ವಾರ ಮಧ್ಯೆ ಕೆಲವು ಸನ್ನಿವೇಶಗಳಿಂದ ಮನಸ್ಸಿಗೆ ಬೇಸರವಾದೀತು. ಮನೆಯಲ್ಲಿ ಅಸಮಾಧಾನದ ವಾತಾವರಣವಿರುತ್ತದೆ. ಜಾಣ್ಮೆಯಿಂದ ವ್ಯವಹರಿಸಿ. ರಾಹು–ಕೇತುಗಳು ಅಶುಭರಿದ್ದು ಆರೋಗ್ಯ ಹದಗೆಡಬಹುದು.
ಶ್ರೀ ರವಿ ಸ್ತುತಿ. ಶುಭ ಸಂಖ್ಯೆ–6

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ವಾರದ ಆದಿಗೆ ಶುಭ ಸಂಚಾರದ ಫಲವಾಗಿ ಹಣ, ಕೀರ್ತಿ ಸಂಪಾದನೆಗೆ ಹಲವು ಮಾರ್ಗಗಳು ಗೋಚರಿಸಲಿವೆ. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು ಎಂಬಂತೆ ಆಗದಿರಲಿ. ಧೈರ್ಯವಹಿಸಿ ಕಾರ್ಯ ಪ್ರವೃತ್ತರಾಗಿ. ಹೊಸ ವ್ಯಾಪಾರ ಉದ್ಯಮ ಸ್ಥಾಪನೆಗೆ ಹಣಕಾಸು ಸಂಸ್ಥೆಯ ನೆರವು ದೊರೆಯಲಿದೆ. ರತ್ನ ವ್ಯಾಪಾರಿಗಳಿಗೆ ಅಧಿಕ ಧನಲಾಭ. ವಾರಾಂತ್ಯಕ್ಕೆ ವಿನೋದ ಗೋಷ್ಠಿ.
ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ–4

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ವಾರದಾರಂಭಕ್ಕೆ ಶುಭ ಸಮಾಚಾರ ಬರುವುದು. ಪ್ರಸಾಧನ, ಫ್ಯಾನ್ಸಿ ಸ್ಟೋರ್, ಉಡುಗೊರೆ ಪದಾರ್ಥ ಮಾರಾಟಗಾರರಿಗೆ ಉತ್ತಮ ವ್ಯಾಪಾರ ಹಾಗೂ ಧನ ಸಂಪಾದನೆ ಆಗುವುದು. ಹೆಂಗಳೆಯರ ಭೇಟಿಯಿಂದ ಮೈ ಮನಗಳಲ್ಲಿ ಪುಳಕ, ಇದು ಋಣಾತ್ಮಕ ಚಿಂತನೆಗಳಿಂದ ಹೊರ ಬರಲು ಸಹಾಯವಾಗುವುದು. ವೃತ್ತಿ ಸ್ಥಾನದಲ್ಲಿ ಸಹಚರರೊಂದಿಗೆ ತಾಳ್ಮೆಯಿಂದ ವರ್ತಿಸಿ, ಅನ್ಯಥಾ ಪೊಲೀಸ್ ಎಂಟ್ರಿ ಆದೀತು.
ಶ್ರೀ ಸುಬ್ರಹ್ಮಣ್ಯಸ್ವಾಮಿ ಉಪಾಸನೆ. ಶುಭ ಸಂಖ್ಯೆ–3

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ವಾರದ ಪೂರ್ವಾರ್ಧದಲ್ಲಿ ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ ಎಂಬಂತೆ ಸಾಗುವುದು. ಮನಸ್ಸು ಪ್ರಫುಲ್ಲವಾಗಿರುವುದು. ನಿಮ್ಮ ಉತ್ತಮ ನಡತೆಯಿಂದ ಜನಪ್ರಿಯತೆ ಗಳಿಸುವಿರಿ. ವಿವಾಹ ಸಂಬಂಧ ಮಾತುಕತೆಗಳು ಸಕಾರಾತ್ಮಕವಾಗಿ ಸಾಗುವುದು. ಗೃಹೋಪಕರಣ ಖರೀದಿಯಿಂದ ಶ್ರೀಮತಿಗೆ ಸಂತೋಷ. ವಾರದ ಕಡೆಗೆ ರಾಹುಗ್ರಹದಿಂದ ಆರೋಗ್ಯದಲ್ಲಿ ಏರುಪೇರು.
ಶ್ರೀ ಯೋಗಾನರಸಿಂಹ ದರ್ಶನ, ಶುಭ ಸಂಖ್ಯೆ–8

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಈ ವಾರದಲ್ಲಿ ನಿಮ್ಮ ಗ್ರಹಗತಿಗಳು ಚೆನ್ನಾಗಿದೆ. ಸರ್ಕಾರಿ ಕೆಲಸಗಳು ಸುಗಮ ರೀತಿಯಲ್ಲಿ ಸಾಗುವುದು. ನ್ಯಾಯಾಲಯ ಪ್ರಕರಣಗಳು ನಿಮ್ಮ ಪರವಾಗುವ ಸಾಧ್ಯತೆ ಇದೆ. ಉದ್ಯೋಗ ಹುಡುಕುತ್ತಿದ್ದರೆ ಸಫಲರಾಗುವಿರಿ. ಸಾರಿಗೆ ಉದ್ಯಮ ಆರಂಭಿಸಲು ಪ್ರಯತ್ನ ಪಡುವವರಿಗೆ ಕಾಲಾನುಕೂಲವಿದೆ. ಹೊಸ ವಾಹನ ಹೊಂದುವ ಕನಸು ನನಸಾಗಲಿದೆ. ವಾರದ ಕಡೆಗೆ ವಾಯು ಪ್ರಕೋಪ ಕಾಡಬಹುದು.
ಶ್ರೀ ಗುರುಚರಣಗಳಲ್ಲಿ ವಂದನೆ. ಶುಭ ಸಂಖ್ಯೆ–5

ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)
ದಾರಿ ಕಾಣದಾದಾಗ ದೇವರ ಮೊರೆ ಹೋಗುವುದು ಸಹಜ. ಕೆಲವು ಸಮಯ ಆರ್ಥಿಕ ಬಿಕ್ಕಟ್ಟುಗಳು ಅನಿವಾರ್ಯವೆನಿಸುವುದು. ವಾರ ಮಧ್ಯೆ ಮಾನಸಿಕ ಉದ್ವೇಗಕ್ಕೆ ಒಳಗಾಗುವಿರಿ. ಮುಖ್ಯ ಕೆಲಸಗಳ ಸಾಕಾರಕ್ಕೆ ಗುರು ಜನರ ಭೇಟಿಯಿಂದ ಮಾರ್ಗ ತೋರುವುದು, ಜೊತೆಗೆ ಸ್ವಬುದ್ಧಿ ಮತ್ತು ಪ್ರಯತ್ನಗಳಿಂದ ಕಾರ್ಯಸಿದ್ಧಿ. ಸರ್ಕಾರಿ ನೌಕರರು ಸ್ವಸ್ಥಳಕ್ಕೆ ವಾಪಸ್ಸಾಗಬಹುದು. ಮಕ್ಕಳು ನಿಮ್ಮ ಮಾತು ಮೀರಿ ನಡೆಯುವರು.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–2

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಈ ವಾರದಲ್ಲಿ ಉತ್ತಮ ವರಮಾನವಿರುತ್ತದೆ. ಆದರೆ ಖರ್ಚು ಮಾಡುವುದರಲ್ಲಿ ಹಿಡಿತವಿರಲಿ. ನಿಮ್ಮ ವೃತ್ತಿ ಕ್ಷೇತ್ರದಲ್ಲಿ ಯಶಸ್ಸು, ಸ್ಥಾನಮಾನಗಳು ವೃದ್ಧಿಸುವುದು. ಮನೆಯಲ್ಲಿ ದೇವತಾ ಕಾರ್ಯಗಳು ನಡೆದು ನಿಮ್ಮ ಉತ್ಸಾಹ ಇಮ್ಮಡಿ ಆಗುವುದು. ರಾಜಕಾರಣಿಗಳು ಸ್ವಾರ್ಥ ಬಿಟ್ಟು ಸಮಾಜಮುಖಿಗಳಾದರೆ ಉತ್ತಮ ಪರಿವರ್ತನೆಯನ್ನು ಹೊಂದುವರು. ಕೆಲವರಿಗೆ ಸಂತಾನೋತ್ಸವ ಹರುಷ ತಂದೀತು.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–3

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ವಾರದ ಆದಿಗೆ ಅಪಮಾರ್ಗದಿಂದ ಧನ ಸಂಪಾದನೆ ಆಗುವುದು. ಆದರೆ ನೆಮ್ಮದಿ ತರದು. ಸರ್ಕಾರದ ಅವಕೃಪೆಗೆ ಪಾತ್ರರಾಗುವಿರಿ. ಸರ್ಕಾರಿ ಕಚೇರಿಗಳಿಗೆ ವೃಥಾ ಅಲೆದಾಟ. ಕೆಲಸ ಕಾರ್ಯಗಳಲ್ಲಿ ನಂಬಿದವರೇ ಕೈ ಕೊಡುತ್ತಾರೆ. ಸತಿ–ಪತಿಯರಲ್ಲಿ ವಿರಸ ಉಂಟಾಗಲು ಶನಿ–ರಾಹುಗಳು ಕಾರಣರಾಗುತ್ತಾರೆ. ಸಂಯಮದಿಂದ ವರ್ತಿಸಿ ಒಬ್ಬರ ಮನಸ್ಸು ಒಬ್ಬರು ಗೆಲ್ಲಿ. ಸಣ್ಣಪುಟ್ಟ ಅಪಘಾತಗಳು ಸಂಭವಿಸಬಹುದು.
ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4



ಹುಲಿ ಸೆರೆಗೆ ಆಗ್ರಹಿಸಿ ಶನಿವಾರ ಹನಗೋಡಿನಲ್ಲಿ ರೈತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಹನಗೋಡಲ್ಲಿ ಹುಲಿ ಸೆರೆಗೆ ಆಗ್ರಹಿಸಿ ರಸ್ತೆ ತಡೆದು ಪ್ರತಿಭಟನೆ

ಅಧಿಕಾರಿಗಳು, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ, ಸ್ಥಳಕ್ಕೆ ಅರಣ್ಯಾಧಿಕಾರಿಗಳ ಕರೆಸಲು ಪಟ್ಟು

ಹನಗೋಡು, ನ.15– ಹೋಬಳಿ ಕೇಂದ್ರವಾದ ಹನಗೋಡು ಗ್ರಾಮದಲ್ಲಿ ಹುಲಿ ಕಾಟದಿಂದ ರೋಸಿ ಹೋಗಿರುವ ರೈತರು, ಸಾರ್ವಜನಿಕರು ರಸ್ತೆ ತಡೆದು ಪ್ರತಿಭಟಿಸಿದರು.

ಶನಿವಾರ ಹನಗೋಡಿನ ಬಸ್ ನಿಲ್ದಾಣದ ಬಳಿಯ ಸರ್ಕಲ್‌ನಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿ ರಸ್ತೆಗೆ ಕಲ್ಲುಗಳನ್ನು ಅಡ್ಡಯಿಟ್ಟು ಬಂದ್ ಮಾಡಿದ ನೂರಾರು ಮಂದಿ ಪ್ರತಿಭಟನಾಕಾರರು ಅರಣ್ಯ ಇಲಾಖೆ, ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಸುಮಾರು ಒಂದು ಗಂಟೆ ಕಾಲ ಅರಣ್ಯ ಇಲಾಖೆ ವಾಹನ ಸೇರಿದಂತೆ ಎಲ್ಲ ವಾಹನಗಳಿಗೆ ತಡೆಯೊಡ್ಡಿ ರಸ್ತೆ ತಡೆ ನಡೆಸಿದರು.

ಅಧಿಕಾರಿಗಳು ಸ್ಥಳಕ್ಕೆ ಬರಲು ಪಟ್ಟು: ರಸ್ತೆ ತಡೆ ವೇಳೆ ಮುಖಂಡರಾದ ಕಾರ್ತಿಕ್, ಬೋರೇಗೌಡ, ಛಾಯಾ ನಾಗೇಗೌಡ, ಶಿವಣ್ಣ, ಸಂತೋಷ್, ಯೋಗರಾಜ್ ಮತ್ತಿತರರು ಮಾತನಾಡಿ, ಈ ಭಾಗದಲ್ಲಿ ಕಳೆದ ಎರಡು ವರ್ಷಗಳಿಂದ ಹುಲಿ ದಾಳಿಗೆ ನೂರಾರು ಜಾನುವಾರುಗಳು ಬಲಿಯಾಗಿವೆ. ಹುಲಿಗೆ ಹೆದರಿ ರೈತರು ವ್ಯವಸಾಯ ಮಾಡದಂತಾಗಿದೆ. ಜಾನುವಾರುಗಳನ್ನು ಮೇಯಲು ಬಿಡದಂತಾಗಿದೆ ಕೂಲಿ ಕೆಲಸಕ್ಕೆ ಕಾರ್ಮಿಕರು ಬರುತ್ತಿಲ್ಲ, ಇದರಿಂದ ಕೃಷಿಗೆ ದೊಡ್ಡ ಪೆಟ್ಟು ಬಿದ್ದಿದೆ. ಕೂಲಿ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹನಗೋಡು ಸುತ್ತಮುತ್ತಲ ಗ್ರಾಮಗಳಲ್ಲಿ ವಾರದಲ್ಲಿ ಹತ್ತಕ್ಕೂ ಹೆಚ್ಚು ಜಾನುವಾರುಗಳನ್ನು ಕೊಂದು ಹಾಕಿದೆ. ಶುಕ್ರವಾರ ಗೌಡಿಕೆರೆ ಬಳಿ ಎರಡು ತೆನೆ ಹಸುಗಳನ್ನು ಸಾಯಿಸಿದ್ದರೂ ಅರಣ್ಯಾಧಿಕಾರಿಗಳು ಘಟನೆ ನಡೆದ ವೇಳೆ ಕೂಂಬಿಂಗ್ ನಡೆಸುವುದು, ಕ್ಯಾಮರಾ ಕಟ್ಟುವುದು, ಬೋನ್ ಇಡುವುದು ಬಿಟ್ಟರೆ ಹುಲಿ ಸೆರೆ ಹಿಡಿಯುವ ಕೆಲಸವಾಗುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿ, ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬಂದು ಹುಲಿ ಸೆರೆ ಹಿಡಿಯುವ ಬಗ್ಗೆ ಖಾತರಿಪಡಿಸಬೇಕೆಂದು ಆಗ್ರಹಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಡಿಆರ್‌ಎಫ್‌ಓ ಶಿವಕುಮಾರ್ ಹಾಗೂ ಸಿಬ್ಬಂದಿಯನ್ನು ಪ್ರತಿಭಟನಾಕಾರರು ತರಾಟೆಗೆ ತೆಗೆದುಕೊಂಡರು. ಹಿರಿಯ ಅಧಿಕಾರಿಗಳನ್ನು ಕರೆಸಬೇಕೆಂದು ಪಟ್ಟು ಹಿಡಿದರು. ಸರಗೂರಿನಲ್ಲಿ ರೈತರ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಹುಲಿ ಸೆರೆ ಹಿಡಿದಿದ್ದಾರೆ. ಇಲ್ಲೇಕೆ ಸೆರೆ ಹಿಡಿಯುತ್ತಿಲ್ಲವೆಂದು ಪ್ರಶ್ನಿಸಿದಾಗ ಪ್ರಕರಣ ಸಂಬಂಧ ಡಿಸಿಎಫ್, ಎಸಿಎಫ್ ನ್ಯಾಯಾಲಯಕ್ಕೆ ಹೋಗಿದ್ದಾರೆ. ಆರ್‌ಎಫ್‌ಓ ರಜೆಯಲ್ಲಿದ್ದಾರೆಂದು ಡಿಆರ್‌ಎಫ್‌ಓ ಸಬೂಬು ಹೇಳಿದರೂ ಕೇಳದ ಪ್ರತಿಭಟನಾಕಾರರು ಅಧಿಕಾರಿಗಳು ಬರಲೇಬೇಕೆಂದು ಪಟ್ಟು ಹಿಡಿದರು.

ಕೊನೆಗೆ ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ರಾಮು ಹಾಗೂ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಮನವರಿಕೆ ಮಾಡಿಕೊಟ್ಟು, ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಲಾಗುವುದು. ಹುಲಿ ಸೆರೆಗೆ ಕ್ರಮವಹಿಸಲು ಸೂಚಿಸಲಾಗುವುದೆಂಬ ಭರವಸೆ ಮೇರೆಗೆ ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಗಿರಿಧರ್, ಮಂಜು, ಮಲ್ಲೇಶ್, ಸೋಮಣ್ಣ, ರಾಮಚಂದ್ರ, ಆಶು, ನಜೀರ್, ಚೌಡಶೆಟ್ಟಿ, ಸ್ವಾಮಿ, ಮಹೇಶ್, ವೆಂಕಟೇಶ್, ಮಂಜು, ದಿನೇಶ್, ಶಫಿ, ನಜೀರ್ ಸೇರಿದಂತೆ ಹನಗೋಡು ಸುತ್ತಮುತ್ತಲ ನೂರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

> **ಹುಲಿ ಸೆರೆಗೆ ಭರವಸೆ**
>
> ಹನಗೋಡು ಸುತ್ತಮುತ್ತಲ ಗ್ರಾಮಗಳಲ್ಲಿ ಹುಲಿ ಕಾಟ ಹೆಚ್ಚಿದೆ, ಹುಲಿ ಸೆರೆ ಹಿಡಿಯಲು ಹಿರಿಯ ಅಧಿಕಾರಿಗಳ ಅನುಮತಿಯೊಂದಿಗೆ ನಾಳೆಯಿಂದಲೇ ಕಾರ್ಯಾಚರಣೆ ಆರಂಭಿಸಲಾಗುವುದೆಂದು ಹುಣಸೂರು ವನ್ಯಜೀವಿ ವಿಭಾಗದ ಎಸಿಎಫ್ ಲಕ್ಷ್ಮಿಕಾಂತ್ ತಿಳಿಸಿದ್ದಾರೆ.

ಮಾನವ–ಪ್ರಾಣಿ ಸಂಘರ್ಷ ನಿಯಂತ್ರಣಕ್ಕೆ ಬಂದ ಮೇಲೆ ಮತ್ತೆ ಸಫಾರಿ ಆರಂಭ

ಗಿರಿಜನರ ಕುಂದು-ಕೊರತೆ ಆಲಿಸಿದ ಶಾಸಕ ಅನಿಲ್ ಚಿಕ್ಕಮಾದು



ಸರಗೂರು: ಮಾನವ–ಪ್ರಾಣಿಗಳ ಸಂಘರ್ಷ ನಿಯಂತ್ರಣಕ್ಕೆ ಬಂದ ನಂತರ ಅರಣ್ಯ ವ್ಯಾಪ್ತಿಯಲ್ಲಿ ಮತ್ತೆ ಸಫಾರಿ ಆರಂಭಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದ್ದಾರೆ.

ತಾಲೂಕಿನ ಚನ್ನಗುಂಡಿ ಕಾಲೋನಿಯ ವಾಲ್ಮೀಕಿ ಮಹರ್ಷಿ ಗಿರಿಜನ ಆಶ್ರಮ ಶಾಲೆಯಲ್ಲಿ ಗಿರಿಜನರ ಕುಂದು ಕೊರತೆ ಆಲಿಸಿ ಮಾತನಾಡಿದರು.

ಚನ್ನಗುಂಡಿ ಕಾಲೋನಿಯ ಆಶ್ರಮ ಶಾಲೆಯನ್ನು ಪದವಿ ಪೂರ್ವ ಶಿಕ್ಷಣದವರೆಗೆ ಮೇಲ್ದರ್ಜೆಗೆ ಏರಿಸಲಾಗಿದೆ ಶಾಲೆಯ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗುವುದು. ವಸತಿ ಇಲ್ಲದವರಿಗೆ ಮನೆ ನೀಡಲು ಕ್ರಮವಹಿಸಲಾಗುವುದು ಎಂದರು.

ಇನ್ನು ಆದಿವಾಸಿಗಳಿಗೆ ಆರು ತಿಂಗಳು ನೀಡುತ್ತಿದ್ದ ಪೌಷ್ಟಿಕ ಆಹಾರದ ಕಿಟ್‌ಗಳನ್ನು ವರ್ಷ ಪೂರ್ತಿ ನೀಡುವಂತೆ ಮುಖ್ಯಮಂತ್ರಿಗಳ ಗಮನಕ್ಕೆ ತಂದು ರಾಜ್ಯಾದ್ಯಂತ ಇರುವ ಆದಿವಾಸಿಗಳಿಗೆ ವರ್ಷಪೂರ್ತಿ ಪೌಷ್ಟಿಕ ಆಹಾರ ನೀಡಲಾಗುತ್ತಿದೆ ಎಂದರು.

ಕಾಡಿನಿಂದ ಪ್ರಾಣಿಗಳು ಹೊರಬರದಂತೆ ತಡೆಗಟ್ಟಲು ಸೂಕ್ತ ಪರಿಹಾರ ಸೂಚಿಸುವಂತೆ ಮೇಲಾಧಿಕಾರಿಗಳಿಗೆ ಸೂಚಿಸಿದ್ದೇನೆ. ಇದೆಲ್ಲವೂ ಹತೋಟಿಗೆ ಬಂದ ನಂತರ ಸರ್ಕಾರದ ನಿರ್ದೇಶನದಂತೆ ಸಫಾರಿ ಪ್ರಾರಂಭಿಸಲಾಗುವುದು ಎಂದರು. ಗ್ರಾಪಂ ಸದಸ್ಯರಾದ ಚಿಕ್ಕಕ್ಯಾತ, ಪ್ರಕಾಶ್, ಶಿವಲಿಂಗಯ್ಯ ಯಶವಂತಪುರ, ಪ್ರಕಾಶ್, ಮುಖಂಡರಾದ ಅಣ್ಣಯ್ಯಸ್ವಾಮಿ, ಬೀರ್ವಾಳು ಚಿಕ್ಕಣ್ಣ, ಸೌಮ್ಯ ಮಂಜುನಾಥ್, ವೆಂಕಟರಾಮು, ನಾಗೇಂದ್ರ, ಪುಟ್ಟಸ್ವಾಮಿ, ಶಿವಮೂರ್ತಿ, ಶಶಿಪಾಟೀಲ್, ಸಿದ್ದರಾಮು, ಅಶ್ರಫಲಿ ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಉತ್ತಮಗೊಳಿಸಲು ಸರ್ಕಾರಿ ಶಾಲೆಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ವಾಸ್ತವ್ಯ

ವಿದ್ಯಾರ್ಥಿಗಳ ಮನೆಗೆ ತೆರಳಿ ಓದಿನ ಬಗ್ಗೆ ಮನವರಿಕೆ, ಪೋಷಕರಿಗೆ ತಿಳುವಳಿಕೆ

ಹೆಚ್.ಡಿ.ಕೋಟೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಉತ್ತಮಪಡಿಸುವ ನಿಟ್ಟಿನಲ್ಲಿ ಗಡಿ ಭಾಗದ ಡಿಬಿ ಕುಪ್ಪೆ ಸರ್ಕಾರಿ ಪ್ರೌಢಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ವಾಸ್ತವ್ಯ ಹೂಡಿ ಗ್ರಾಮದ ಮನೆ ಮನೆಗೆ ತೆರಳಿ ಚರ್ಚಿಸಿದರು.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಡಿ.ಬಿ.ಕುಪ್ಪೆ ಸರ್ಕಾರಿ ಪ್ರೌಢಶಾಲೆಯಲ್ಲಿ ವಾಸ್ತವ್ಯ ಹೂಡಿ ಬಳಿಕ ಮಾತನಾಡಿದ ಅವರು, ಕಳೆದ ಎರಡು ವರ್ಷಗಳಿಂದಲೂ ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತಗೊಂಡಿದ್ದು ಜಿಲ್ಲೆಯಲ್ಲಿ ಕಡೆ ಸ್ಥಾನವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಫಲಿತಾಂಶ ಉತ್ತಮ ಪಡಿಸುವ ಸಂಬಂಧ ತಾಲೂಕಿನಲ್ಲಿ ಒಂದಲ್ಲ ಒಂದು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಫಲಿತಾಂಶ ಉತ್ತಮಪಡಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತಿದೆ ಎಂದರು.

ಶುಕ್ರವಾರ ಸಂಜೆ 6 ರಿಂದ ರಾತ್ರಿ 10 ಗಂಟೆವರೆಗೆ ಮಕ್ಕಳು ಮನೆಯಲ್ಲಿ ಓದುವ ಬಗ್ಗೆ ಹಾಗೂ ಪರೀಕ್ಷೆಯ ಬಗ್ಗೆ ಪೋಷಕರಿಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಯಿತು. ಡಿಬಿ ಕುಪ್ಪೆ ಸರ್ಕಾರಿ ಪ್ರೌಢಶಾಲೆಗೆ 10ನೇ ತರಗತಿಗೆ ಬರುತ್ತಿರುವ ವಿದ್ಯಾರ್ಥಿಗಳ ಗ್ರಾಮಗಳಾದ ಹೊಸೂರು, ಗೋಳೂರು, ಬಸವರಾಡಿ ಆನೆಮಾಳ, ಆನೆಮಾಳದ ಹಾಡಿ, ಭಾವಲಿ ಗ್ರಾಮದ ಮಕ್ಕಳ ಮನೆಗಳಿಗೆ ಭೇಟಿ ನೀಡಲಾಯಿತು. ಇದೇ ಸಂದರ್ಭದಲ್ಲಿ ನಾನು ಓದುತ್ತಿದ್ದೇನೆ ಕಾರ್ಯಕ್ರಮದಲ್ಲಿ ನೀಡಿರುವ ಕಾರ್ಡ್‌ಗಳನ್ನು ಪರಿಶೀಲಿಸಲಾಯಿತು ಹಾಗೂ ಮನೆಯಲ್ಲಿ ಓದುವ ವೇಳಾಪಟ್ಟಿಯಂತೆ ಮಕ್ಕಳು ಓದುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲಾಯಿತು. ಇದೆ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರಾದ ನಾರಾಯಣ ಸ್ವಾಮಿ, ಪ್ರವೀಣ್‌ಕುಮಾರ್ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ರಾಮು ಹಾಜರಿದ್ದರು.



ವಿದ್ಯಾರ್ಥಿಯಿಂದ ಮಾಹಿತಿ ಪಡೆಯುತ್ತಿರುವ ಕ್ಷೇತ್ರ ಶಿಕ್ಷಣಾಧಿಕಾರಿ

> ನ.18,19 ಎನ್.ಬೇಗೂರು, ನ.25 ಮಗ್ಗೆ ಹಾಗೂ ನ.28ರಂದು ಕೆ.ಬೆಳ್ತೂರಿನಲ್ಲಿ ವಾಸ್ತವ್ಯ ಹೂಡಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ ಮಗುವಿನ ಓದುವ ಹವ್ಯಾಸದ ಬಗ್ಗೆ ಮತ್ತು ಪರೀಕ್ಷೆಯ ಬಗ್ಗೆ ಪೋಷಕರಿಗೆ ಜಾಗೃತಿ ಮೂಡಿಸಲಾಗುವುದು. – ರಾಜು, ಕ್ಷೇತ್ರ ಶಿಕ್ಷಣಾಧಿಕಾರಿ

ಸ್ಮಶಾನ ಅಭಿವೃದ್ಧಿಗೆ ಆಗ್ರಹಿಸಿ ರೈತರ ಪ್ರತಿಭಟನೆ

ರಸ್ತೆ, ಚರಂಡಿ, ವಿದ್ಯುತ್ ದೀಪ, ಕೆರೆ ಅಭಿವೃದ್ಧಿ, ಕೆರೆ ಒತ್ತುವರಿ ತೆರವಿಗೆ ಆಗ್ರಹ

ನಂಜನಗೂಡು: ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ಮಶಾನ ಅಭಿವೃದ್ಧಿ ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ನಗರದ ತಾಲೂಕು ಪಂಚಾಯಿತಿ ಮುಂಭಾಗ ಪ್ರತಿಭಟನೆ ನಡೆಸಿದರು.

ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಮಾತನಾಡಿ, ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸ್ಮಶಾನ ಅಭಿವೃದ್ಧಿ ಕಾಣದೆ ಇನ್ನೂ ಕೂಡ ಗ್ರಾಮೀಣ ಜನರು ಪರಿತಪಿಸುವಂತಾಗಿದೆ. ಜೊತೆಗೆ ಕೆಲವು ಗ್ರಾಮಗಳಲ್ಲಿ ಸ್ಮಶಾನವಿಲ್ಲದೆ ಪರದಾಡುವಂತಾಗಿದೆ, ಹಲವಾರು ಗ್ರಾಮಗಳಲ್ಲಿ ರಸ್ತೆ ಚರಂಡಿ, ವಿದ್ಯುತ್ ದೀಪ ಮತ್ತು ಮೂಲಭೂತ ಸೌಕರ್ಯವಿಲ್ಲದೆ, ಚರಂಡಿಗಳ ಸ್ವಚ್ಛತಾ ಕಾರ್ಯವಿಲ್ಲದೆ ಪರದಾಡುತ್ತಿದ್ದಾರೆ, ಈ– ಖಾತೆಗೆ ರೂ. 50 ತೆಗೆದುಕೊಳ್ಳಬೇಕೆಂಬ ನಿಯಮವಿದ್ದರೂ ಸಹ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸಾವಿರಾರು ರೂಗಳ ಲಂಚ ಪಡೆಯುತ್ತಿದ್ದಾರೆ, ಗ್ರಾಮ ಪಂಚಾಯಿತಿ 13,14,15ನೇ ಹಣಕಾಸಿನಲ್ಲಿ ಕಾನೂನಾತ್ಮಕ ಅಭಿವೃದ್ಧಿಗೆ ಬಳಕೆಯಾಗಿಲ್ಲ. ಆದಕಾರಣ ಉನ್ನತ ಮಟ್ಟದ ತನಿಖೆಯನ್ನು ನಡೆಸಬೇಕು ಎಂದರು ಆಗ್ರಹಿಸಿದರು.

ಜೊತೆಗೆ ಕೆರೆ ಅಭಿವೃದ್ಧಿ, ಕೆರೆ ಒತ್ತುವರಿ ತೆರವು ಮಾಡುವಂತೆ ಹಲವಾರು ಬಾರಿ ಅಧಿಕಾರಿಗಳಿಗೆ ಮನವಿ ಮಾಡಿದ್ದರು ಸಹ ಏನು ಪ್ರಯೋಜನವಾಗಿಲ್ಲ, ಅಲ್ಲದೆ ಕೆರೆಗಳಿಗೆ ಚರಂಡಿ ಕೊಳಚೆ ನೀರು ಸೇರ್ಪಡೆಯಾಗುತ್ತಿದೆ, ಪ್ರಮುಖವಾಗಿ ಗ್ರಾಮೀಣ ಭಾಗದ ಚಿಲ್ಲರೆ ಅಂಗಡಿಗಳಲ್ಲೂ ಸಹ ಅಕ್ರಮ ಮದ್ಯ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ ಮದ್ಯ ಮಾರಾಟವನ್ನು ತಡೆಗಟ್ಟುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಈ ಕೂಡಲೇ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾಧ್ಯಕ್ಷ ಸತೀಶ್ ರಾವ್ ಮಾತನಾಡಿದರು.

ತಾಪಂ ಕಾರ್ಯನಿರ್ವಹಣಾಧಿಕಾರಿ ಜರಾಲ್ಡ್ ರಾಜೇಶ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಸಾಲುಮರದ ತಿಮ್ಮಕ್ಕ ರವರಿಗೆ ಶ್ರದ್ಧಾಂಜಲಿ ಸಮರ್ಪಿಸಲಾಯಿತು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಇಮ್ಮಾವು ರಘು, ಜನ ಸಂಗ್ರಾಮ ಪರಿಷತ್ ವಿಭಾಗಿಯ ಸಂಚಾಲಕ ನಗರ್ಲೆ ವಿಜಯಕುಮಾರ್, ಶಿವಣ್ಣ, ಮಹದೇವನಾಯಕ, ನಂಜುಂಡಸ್ವಾಮಿ, ಶಂಕರನಾಯಕ, ದೇವರಾಜು, ನಾಗೇಂದ್ರ, ತಿಮ್ಮನಾಯಕ, ಸಿದ್ದರಾಜು, ಶ್ವೇತ, ಸವಿತಾ, ದೊಡ್ಡಯ್ಯ, ನಾಗರಾಜು, ಸಿದ್ದಪ್ಪಾಜಿ, ಪುಟ್ಟಸ್ವಾಮಿ, ರವಿ, ಸೇರಿದಂತೆ ರೈತ ಮುಖಂಡರು ಉಪಸ್ಥಿತರಿದ್ದರು.



ನಂಜನಗೂಡಿನಲ್ಲಿ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ.

ವಿವೇಕ ವಿವೇಚನೆಯಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ

ತಿ.ನರಸೀಪುರ, ನ.15– ಕಾಲೇಜು ವಿದ್ಯಾರ್ಥಿಗಳು ವಿವೇಕ ಮತ್ತು ವಿವೇಚನೆಯನ್ನು ಮೈಗೂಡಿಸಿಕೊಂಡು ಶೈಕ್ಷಣಿಕ ವ್ಯಾಸಂಗದ ಅವಧಿಯಲ್ಲಿ ಪಾಠ–ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಿ, ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಕರೆ ನೀಡಿದರು.

ಪಟ್ಟಣದ ಹಳೇ ಸಂತೆಮಾಳದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಸಾಂಸ್ಕೃತಿಕ ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ರೇಂಜರ್ಸ್ ಮತ್ತು ರೋವರ್ಸ್, ಯೂತ್ ರೆಡ್ ಕ್ರಾಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಹಾಗೂ 2025–26ನೇ ಸಾಲಿನ ಕನ್ನಡ ಹಬ್ಬವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಹದಿ ಹರೆಯ, ಪ್ರೌಢಾವಸ್ಥೆ ಎರಡನ್ನೂ ದಾಟಿ ಕಾಲೇಜು ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಎಲ್ಲವನ್ನೂ ಆಕರ್ಷಿಸುವ ವಯಸ್ಸು ಆಗಿರುವುದರಿಂದ ಭವಿಷ್ಯದ ಬದುಕನ್ನು ಅರಿತು ಜಾಗ್ರತೆಯಿಂದ ಹೆಜ್ಜೆಗಳನ್ನು ಇಡಬೇಕೆಂದು ಸಲಹೆ ನೀಡಿದರು.

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕೆ.ಕಾಳಚನ್ನೇಗೌಡ ಮಾತನಾಡಿ, ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿರುವ ಕರ್ನಾಟಕ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿನ ಸಾಧನೆಗೆ ಹಲವಾರು ಮಹನೀಯರನ್ನು ಬಳುವಳಿಯಾಗಿ ನೀಡಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಎಚ್.ವಿ.ಉದಯ್ ಕುಮಾರ್ ಮಾತನಾಡಿದರು. ಹೆಚ್ಚು ಅಂಕ ಪಡೆದ ಪ್ರತಿಭಾವಂತ ಹಾಗೂ ಕ್ರೀಡೆಯಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು. ಪ್ರೊಫೆಸರ್ ಆಗಿ ಬಡ್ತಿ ಪಡೆದ ಡಾ.ಕವಿತಾ ಅವರನ್ನು ಹಾಗೂ ಎನ್‌ಆರ್ ಫೌಂಡೇಶನ್ ಮುಖ್ಯಸ್ಥ ಪುನಿತ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ.ಪುಟ್ಟಸ್ವಾಮಿ, ಎಂ.ರಾಜಣ್ಣ, ಡಾ.ಆರ್.ಕೆಂಪರಾಜು, ಪ್ರೊ.ಎನ್.ರಾಘವೇಂದ್ರ ಪ್ರಸಾದ್, ಪ್ರೊ.ಮಹೇಶ್, ಪ್ರೊ.ಬಿ.ಎಂ. ರಾಮಮೂರ್ತಿ, ಡಾ.ಅಮಿತ್, ಡಾ.ರೇಷ್ಮಾ ಚಂಗಪ್ಪ, ಡಾ.ಕೆ.ಕೆ.ಮುತ್ತಮ್ಮ, ಕಾಲೇಜಿನ ಸಿಡಿಸಿ ಸದಸ್ಯ ವೆಂಕಟರಮಣಸ್ವಾಮಿ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಇದ್ದರು.



ಕನ್ನಡ ಹಬ್ಬ ಉದ್ಘಾಟಿಸುತ್ತಿರುವ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್.

ಹಾಡ್ಯ ಪಿಎಸಿಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಮಲ್ಕುಂಡಿ: ಸಮೀಪದ ಹಾಡ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಶಶಿಧರ್, ಉಪಾಧ್ಯಕ್ಷರಾಗಿ ಬಸವರಾಜ್ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ 12 ಸದಸ್ಯರ ಸಮಬಲದ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಶಶಿಧರ್ ಮತ್ತು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಯರಾಂ ನಾಮಪತ್ರ ಸಲ್ಲಿಸಿದರು.

ಶಶಿಧರ್ 8 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ ಪ್ರತಿಸ್ಪರ್ಧಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಯರಾಂ 5 ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಬಸವರಾಜ್ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾದರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಸುಮಾ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ಶಶಿಧರ್ ಮಾತನಾಡಿ, ರೈತರು ಸಂಘದಲ್ಲಿ ಪಡೆದ ಸಾಲವನ್ನು ಮರುಪಾವತಿ ಮಾಡುವುದರ ಜೊತೆಗೆ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು. ಸಹಕಾರ ಸಂಘಕ್ಕೆ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪ್ರತಿಯೊಬ್ಬ ರೈತರಿಗೂ ತಲುಪಿಸುವ ನಿಟ್ಟಿನಲ್ಲಿ ಸಂಘದ ಎಲ್ಲಾ ಸದಸ್ಯರು ಶ್ರಮಿಸಬೇಕು. ನಮ್ಮ ಸಂಘದ ಎಲ್ಲಾ ಸದಸ್ಯರ ಒಮ್ಮತದಿಂದ ಅವರ ಸಹಕಾರ ಪಡೆದು ಸಂಘವನ್ನು ಹೆಚ್ಚಿನ ಅಭಿವೃದ್ಧಿಗೆ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ಈ ವೇಳೆ ನಿರ್ದೇಶಕರುಗಳಾದ ಹೆಚ್.ಎಂ.ಶಂಕರ್, ಅಶೋಕ್, ವಿರೂಪಾಕ್ಷಪ್ಪ, ಚಿನ್ನಸ್ವಾಮಪ್ಪ, ಪದ್ಮ, ಚಿಕ್ಕಣ್ಣ, ಮುಖಂಡರುಗಳಾದ ಪಾಪು, ಮಹೇಶ್, ಬಸವರಾಜ್, ಲೋಕೇಶ್, ಶಿವಲಿಂಗಪ್ಪ, ನಾಗೇಶ್, ಶಿವರುದ್ರ, ಮಹದೇವಯ್ಯ, ಮಹೇಶ್, ಸಿಇಓ ಎಂ.ಪಿ.ವೆಂಕಟರಾಜಯ್ಯ ಸೇರಿದಂತೆ ಪ್ರಮುಖರು ಹಾಜರಿದ್ದರು.



ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದ ನಿರ್ದೇಶಕರು, ಗ್ರಾಮಸ್ಥರು.

ತೊರವಳ್ಳಿ ಡೇರಿಗೆ ಮನು ಅಧ್ಯಕ್ಷ, ಮಲ್ಲೇಶಪ್ಪ ಉಪಾಧ್ಯಕ್ಷ

ನಂಜನಗೂಡು: ತಾಲೂಕಿನ ತೋರವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಮನು ಶಿವನಂಜಪ್ಪ, ಉಪಾಧ್ಯಕ್ಷರಾಗಿ ಮಲ್ಲೇಶಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರಿಬ್ಬರನ್ನು ಬಿಟ್ಟರೆ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ರಘು ಅವರು ಅವಿರೋಧ ಆಯ್ಕೆ ಘೋಷಿಸಿದರು.

ಕಳೆದ ವಾರ ನಡೆದ ಚುನಾವಣೆಯಲ್ಲಿ 10 ಮಂದಿ ನಿರ್ದೇಶಕರು ಗೆಲುವು ಸಾಧಿಸಿದ್ದರು. ನಂತರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನೂತನ ಅಧ್ಯಕ್ಷ ಮನು ಶಿವನಂಜಪ್ಪ ನನ್ನ ಮೇಲೆ ವಿಶ್ವಾಸವಿಟ್ಟು 15 ವರ್ಷಗಳಿಂದಲೂ ಆಯ್ಕೆ ಮಾಡಿದ ಉತ್ಪಾದಕರಿಗೆ ಅಭಿನಂದನೆ. ಅಭಿವೃದ್ಧಿಗೆ ಸರ್ವರು ಸಹಕರಿಸಬೇಕು. ಹಾಗಾದರೆ ಮಾತ್ರ ಸಂಘವನ್ನು ಅತಿ ಎತ್ತರಕ್ಕೆ ಬೆಳೆಸಲು ಸಾಧ್ಯ. ಪ್ರತಿಯೊಬ್ಬ ಉತ್ಪಾದಕರು ಗುಣಮಟ್ಟದ ಹಾಲನ್ನು ಹಾಕಬೇಕೆಂದು ಮನವಿ ಮಾಡಿದರು. ರೈತರಿಗೆ ಸರಕಾರದಿಂದ ಬರುವ ಸವಲತ್ತುಗಳನ್ನು ನೀಡುತ್ತಿದ್ದೇವೆ ಎಂದು ತಿಳಿಸಿದರು.



ಸಭೆಯಲ್ಲಿ ನೂತನ ನಿರ್ದೇಶಕರುಗಳಾದ, ಕಾಳಪ್ಪ ವೀರಣ್ಣ, ಬಸವಣ್ಣ, ನಾಗರಾಜಪ್ಪ, ಮಹಾದೇವ ಶೆಟ್ಟಿ, ನಾಗರಾಜು, ಮರಮ್ಮ, ಚಿನ್ನಮ್ಮ, ಸಂಘದ ಕಾರ್ಯನಿರ್ವಣಾಧಿಕಾರಿ ಬಸವಣ್ಣ, ಗ್ರಾಮದ ಮುಖಂಡರುಗಳು ಭಾಗವಹಿಸಿದ್ದರು.

ಕುರಿ, ಉಣ್ಣೆ ನಿಗಮಕ್ಕೆ ಲೋಕೇಶ್ ಕುಮಾರ್ ನಿರ್ದೇಶಕ



ಮೈಸೂರು,ನ.16–ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಮೈಸೂರಿನ ಎಂ.ಲೋಕೇಶ್ ಕುಮಾರ್ ಅವರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಅಧೀನ ಕಾರ್ಯದರ್ಶಿ ಎಸ್.ನಾರಾಯಣಸ್ವಾಮಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಎಲ್ಲಾ ಭಾಗ್ಯಕ್ಕಿಂತ ಆರೋಗ್ಯ ಭಾಗ್ಯ ಮುಖ್ಯ



ಗ್ರಾಮಸ್ಥರನ್ನು ತಪಾಸಣೆ ಮಾಡುತ್ತಿರುವ ವೈದ್ಯರ ತಂಡ.

ತಿ.ನರಸೀಪುರ, ನ.15– ನಂಜನಗೂಡು ತಾಲೂಕು ಸುತ್ತೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಜಿ ಮಾರಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಮೈಸೂರಿನ ಭಗವಾನ್ ಮಹಾವೀರ ದರ್ಶನ್ ಕಣ್ಣಿನ ಆಸ್ಪತ್ರೆಯ ವತಿಯಿಂದ ಮಹಾಜನ ಕಾಲೇಜಿನ ವಿದ್ಯಾರ್ಥಿಗಳ ಸಹಾಯದಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರವನ್ನು ಉದ್ಘಾಟಿಸಿದ ಸುತ್ತೂರು ಗ್ರಾಮ ಪಂಚಾಯತಿ ಅಧ್ಯಕ್ಷ ಜಿ.ಮರಳಿ ರಂಗಸ್ವಾಮಿ ಅವರು ಮಾತನಾಡಿ, ನಾವು ಎಷ್ಟೇ ಆಸ್ತಿ ಸಂಪಾದನೆ, ಹಣ, ಚಿನ್ನ ತುಂಬಿಕೊಂಡರು ನಾವು ಎಷ್ಟೇ ಶ್ರೀಮಂತರಾದರೂ ಮನುಷ್ಯನ ಆರೋಗ್ಯ ಕಾಪಾಡಿಕೊಳ್ಳುವಷ್ಟು ಬೆಲೆ ಬರುವುದಿಲ್ಲ. ಆರೋಗ್ಯವಂತರಾಗಿ ಬಾಳಿ ಬದುಕಲು ಪ್ರತಿಯೊಬ್ಬರಿಗೂ ಆರೋಗ್ಯ ಮುಖ್ಯ ಎಂದರು.

ಶಿಬಿರದಲ್ಲಿ ಸುತ್ತೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಜಿ ಮಾರಳ್ಳಿ, ಸುತ್ತೂರು ಹಾಗೂ ಬಿಳುಗಲಿ ಸುತ್ತಮುತ್ತ ಗ್ರಾಮಗಳ ನೂರಕ್ಕೂ ಹೆಚ್ಚು ಜನ ಭಾಗವಹಿಸಿ ಉಚಿತ ಕಣ್ಣಿನ ತಪಾಸಣೆ, ಬಿಪಿ, ಶುಗರ್, ಇತ್ಯಾದಿ ಕಾಯಿಲೆ ಬಗ್ಗೆ ಉಚಿತವಾಗಿ ತಪಾಸಣೆ ಮಾಡಿಸಿಕೊಂಡರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷ ರಂಗಸ್ವಾಮಿ, ಉಪಾಧ್ಯಕ್ಷ ಪ್ರತಿಮಾ, ಜಿ ಮಾರಳ್ಳಿ ಗ್ರಾಮದ ಗೌಡಿಕೆ ಶಿವಪ್ರಸಾದ್, ಸುತ್ತಮುತ್ತಲ ಗ್ರಾಮಗಳ ಮುಖಂಡರು ಹಾಜರಿದ್ದರು.

ರೈತರಿಗೆ ಹಗಲಿನಲ್ಲಿ ಗುಣಮಟ್ಟದ ವಿದ್ಯುತ್ ಪೂರೈಕೆ

ಮಾನವ-ಕಾಡು ಪ್ರಾಣಿಗಳ ಸಂಘರ್ಷ ತಡೆಯಲು ಸೋಲಾರ್ ವಿದ್ಯುತ್ ಉತ್ಪಾದನಾ ಘಟಕಕ್ಕೆ ಚಾಲನೆ ನೀಡಿದ ಶಾಸಕ ದರ್ಶನ್ ಧ್ರುವನಾರಾಯಣ್

ನಂಜನಗೂಡು: ಮಾನವ ಮತ್ತು ಕಾಡು ಪ್ರಾಣಿಗಳ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು, ರೈತರು ರಾತ್ರಿ ವೇಳೆ ಜಮೀನಿಗೆ ಹೋಗುವುದನ್ನು ತಪ್ಪಿಸಲು ಹಗಲಿನಲ್ಲೇ ಗುಣಮಟ್ಟದ ವಿದ್ಯುತ್ ಪೂರೈಸುವ ಸಲುವಾಗಿ ಖಾಸಗಿ ಸಂಸ್ಥೆಯ ಸಹಭಾಗಿತ್ವದ ಕುಸುಮ್ ಯೋಜನೆ ಅಡಿ 14 ಕೋಟಿ ವೆಚ್ಚದಲ್ಲಿ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕಕ್ಕೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲೂಕಿನ ರಾಜೂರು ಗ್ರಾಮದ ಬಳಿಯ 14 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿ ಮಾತನಾಡಿದರು.

ಕಾಡಂಚಿನ ಪ್ರದೇಶದ ಗ್ರಾಮಗಳಲ್ಲಿ ವಿದ್ಯುತ್ ಅನ್ನು ರಾತ್ರಿ ವೇಳೆ ಪೂರೈಸುವುದರಿಂದ ರೈತರು ಜಮೀನಿಗೆ ನೀರು ಹಾಯಿಸುವ ಸಲುವಾಗಿ ರಾತ್ರಿ ವೇಳೆ ತೆರಳುತ್ತಿದ್ದರು, ಇದರಿಂದ ಆನೆ, ಚಿರತೆ, ಹುಲಿ ಸೇರಿದಂತೆ ಕಾಡು ಪ್ರಾಣಿಗಳಿಂದ ಹಾನಿಯಾಗುವ ಆತಂಕ ರೈತರಲ್ಲಿತ್ತು. ಆದ್ದರಿಂದ ಕಾಡಂಚಿನ ಪ್ರದೇಶಗಳಲ್ಲಿ ಹಗಲಿನ ವೇಳೆಯೇ ಗುಣಮಟ್ಟದ ವಿದ್ಯುತ್ ಪೂರೈಸುವ ಸಲುವಾಗಿ ಕುಸುಮ್ ಯೋಜನೆ ಅಡಿ ಆರ್‌ಸಿಸಿಎಲ್ ಎಂಬ ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕವನ್ನು ತೆರೆಯಲಾಗುತ್ತದೆ ಎಂದರು.

ಶಾಶ್ವತ ಪರಿಹಾರ: ಮಾನವ ಮತ್ತು ಕಾಡುಪ್ರಾಣಿಗಳ ಸಂಘರ್ಷ ತಪ್ಪಿಸಲು ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈಗಾಗಲೇ ಯಡಿಯಾಲ ಭಾಗದ ಅರಣ್ಯ ಪ್ರದೇಶದ ಅಂಚಿನಲ್ಲಿ ಸುಮಾರು 12 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಮತ್ತು ಮೆಸ್ ಅಳವಡಿಕೆ ಮಾಡಲಾಗಿದೆ, ಇನ್ನು ಸುಮಾರು 8 ಕಿಮೀ ವ್ಯಾಪ್ತಿ ಪ್ರದೇಶದಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಕೆ ಮಾಡುವ ಕೆಲಸ ಬಾಕಿಯಿದ್ದು, ಈಗಾಗಲೇ ಯೋಜನೆ ಸಿದ್ಧಪಡಿಸಲಾಗಿದ್ದು ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ, ಶೀಘ್ರದಲ್ಲೇ ಆ ಕಾಮಗಾರಿ ಪೂರ್ಣಗೊಂಡು ಮಾನವ ಮತ್ತು ಕಾಡು ಪ್ರಾಣಿಗಳ ಸಂಘರ್ಷಕ್ಕೆ ತೆರೆ ಬೀಳಲಿದೆ ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಿಧಾನಸಭಾ ಉಸ್ತುವಾರಿ ಶ್ರೀಕಂಠು, ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಪ್ರದೀಪ್ ಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಮುಖಂಡರಾದ ಎಂ.ಮಾದಪ್ಪ ಮಹೇಶ್, ಸಂಗರಾಜು, ಆದರ್ಶ, ಪ್ರಭು, ಚಂದನ್‌ಗೌಡ, ಚೆಸ್ಕಾ ಮುಖ್ಯ ಕಾರ್ಯಪಾಲಕ ಇಂಜಿನಿಯರ್ ಆನಂದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಿರಣ್ ಕುಮಾರ್, ದೇವರಾಜಯ್ಯ, ಆರ್‌ಸಿ ಸಿಎಲ್ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕ ವಿ.ಶೇಖರ್, ವಲಯ ವ್ಯವಸ್ಥಾಪಕ ಜೀವನ್ ಉಪಸ್ಥಿತರಿದ್ದರು.

> **ಸುಳ್ಳು ವಿಡಿಯೋ ಬಳಸಿ ಆತಂಕ ಸೃಷ್ಟಿಸಿದಲ್ಲಿ ಕ್ರಮ**
>
> ಕೆಲ ದಿನಗಳ ಹಿಂದೆ ಬಸ್ ನಿಲ್ದಾಣದಲ್ಲಿ ಹುಲಿ ಓಡಾಡಿದ ಬಗ್ಗೆ ಸುಳ್ಳು ವಿಡಿಯೋ ಹರಿ ಬಿಡಲಾಗಿತ್ತು ಎಐ ತಂತ್ರಜ್ಞಾನವನ್ನು ಬಳಕೆ ಮಾಡಿ ಕಾಡು ಪ್ರಾಣಿಗಳು ಇರುವಂತೆ ವಿಡಿಯೋಗಳನ್ನು ಸೃಷ್ಟಿಸಿ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ವರದಿ ಬಿತ್ತರಿಸಿ ಸಾರ್ವಜನಿಕರಿಗೆ ಆತಂಕ ಸೃಷ್ಟಿಸಿದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ಸಾರ್ವಜನಿಕರು ಸಹ ಸೂಕ್ಷ್ಮತೆಯನ್ನು ಅರಿತು, ಯಾವುದು ಸತ್ಯವಾದ ವಿಡಿಯೋ, ಯಾವುದು ಎಐ ತಂತ್ರಜ್ಞಾನದ ಸುಳ್ಳು ವಿಡಿಯೋ ಎಂಬುದನ್ನು ತಿಳಿದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಬೇಕು ಎಂದು ಈ ಮೂಲಕ ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಎಂದು ಹೇಳಿದರು.



ಕುಸುಮ್ ಯೋಜನೆಯಡಿ ಸೋಲಾರ್ ವಿದ್ಯುತ್ ಘಟಕಕ್ಕೆ ಶಾಸಕರಿಂದ ಚಾಲನೆ.

ಸುರೇಶ್ ನಿಧನ



ತಿ.ನರಸೀಪುರ, ನ.15– ಸಿಲ್ಕ್ ಫ್ಯಾಕ್ಟರಿ ನಿವೃತ್ತ ಉದ್ಯೋಗಿ ಲೇ. ರಾಚೇಗೌಡರ ಪುತ್ರ ಮಿಲ್ ಮಾಲೀಕ ಆರ್ ಸುರೇಶ್ (57) ಇಂದು ಶನಿವಾರ ಮುಂಜಾನೆಯ ನಿಧನ ಹೊಂದಿದರು. ಮೃತರಿಗೆ ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿರುವ ಫ್ಯಾನ್ಸಿ ಅಂಗಡಿ ವಿಷಕಂಠ ಮೂರ್ತಿರವರ ಸಹೋದರರಾಗಿದ್ದು ಇವರ ಅಂತ್ಯಕ್ರಿಯೆಯನ್ನು ಸಂಜೆ ತೋಟಗೇರಿ ಮಾರಮ್ಮನ ದೇವಾಲಯದ ಹತ್ತಿರ ಕುರುಬ ಸಮುದಾಯದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಮೈಸೂರು ಮಿತ್ರ

ಸರ್ದಾರ್ ವಲ್ಲಭಭಾಯ್ ಪಟೇಲ್ ಜನ್ಮದಿನ; ಮೈಸೂರಿನಲ್ಲಿ ಏಕತಾ ನಡಿಗೆ

ಮೈಸೂರು ಅರಮನೆ ಮುಂದೆ ಸಂಸದ ಯದುವೀರ್ ಚಾಲನೆ



ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮೈ ಭಾರತ್ ಕೇಂದ್ರ ಶನಿವಾರ ಸಂಯುಕ್ತವಾಗಿ ಆಯೋಜಿಸಿದ್ದ ಏಕತಾ ನಡಿಗೆಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು, ನ.15(ಬಿಎಲ್‌ಯು)– ಉಕ್ಕಿನ ಮನುಷ್ಯ, ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ 150 ನೇ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಇಂದು ಏಕತಾ ನಡಿಗೆ ಆಯೋಜಿಸಲಾಗಿತ್ತು.

ಮೈಸೂರು ಅರಮನೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮೈ ಭಾರತ್ ಕೇಂದ್ರ ಸಂಯುಕ್ತವಾಗಿ ಆಯೋಜಿಸಿದ್ದ ಏಕತಾ ನಡಿಗೆ (ಯೂನಿಟಿ ಮಾರ್ಚ್)ಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಭಾರತದ ಮೊದಲ ಉಪ ಪ್ರಧಾನಿಯಾಗಿ ಜೊತೆಗೆ ಗೃಹ ಖಾತೆಯ ಜವಾಬ್ದಾರಿ ಹೊತ್ತ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು ಭಾರತದ ಏಕೀಕರಣದಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಈ ಹಿನ್ನೆಲೆಯಲ್ಲಿ ಅವರನ್ನು ಉಕ್ಕಿನ ಮನುಷ್ಯ ಎಂದೇ ಕರೆಯಲಾಗುತ್ತದೆ. ಇಂತಹ ಮಹನೀಯರ ಹುಟ್ಟುಹಬ್ಬವನ್ನು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಿ ಅವರ ಆದರ್ಶವನ್ನು ಜನರಿಗೆ ಮನವರಿಕೆ ಮಾಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಸುಬ್ಬಣ್ಣ, ಮಾಜಿ ಮೇಯರ್ ಶಿವಕುಮಾರ್ ಮೈ ಭಾರತ್ ಕೇಂದ್ರದ ಮುಖ್ಯಸ್ಥ ಅಖಿಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸುಮಾರು 400 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಇತರರಿದ್ದ ಏಕತಾ ನಡಿಗೆ ಅರಮನೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಹೊರಟು ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ದೇವರಾಜ ಅರಸ್ ರಸ್ತೆ ಮೂಲಕ ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನ ತಲುಪಿತು.

ಬಿಹಾರದಂತೆ ಕರ್ನಾಟಕದಲ್ಲೂ ಎನ್‌ಡಿಎ ಮೈತ್ರಿ ಕೂಟ ಸರ್ಕಾರ ರಚನೆ ಶತಸಿದ್ಧ

ಮೈಸೂರಿನಲ್ಲಿ ಸಂಸದ ಯದುವೀರ್ ಭವಿಷ್ಯ

ಮೈಸೂರು, ನ.15(ಬಿಎಲ್‌ಯು)– ಬಿಹಾರ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಕೂಟ ಅಧಿಕಾರಕ್ಕೆ ಬಂದಂತೆ 2028 ರಲ್ಲಿ ಕರ್ನಾಟಕದಲ್ಲಿ ಕೂಡ ಎನ್‌ಡಿಎ ಮೈತ್ರಿ ಕೂಟದ ಸರ್ಕಾರ ಅಧಿಕಾರಕ್ಕೆ ಬರುವುದು ಶತ ಸಿದ್ಧ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭವಿಷ್ಯ ನುಡಿದರು.

ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ನಡೆದ ಏಕತಾ ನಡಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಹಾರ ಚುನಾವಣೆಯ ಫಲಿತಾಂಶ ಪ್ರಧಾನ ಮಂತ್ರಿ ನರೇಂದ್ರ ಮೋದಿ ನಾಯಕ್ವತದ ಮೈತ್ರಿ ಕೂಟಕ್ಕೆ ದೊರೆತ ಉತ್ತಮ ಫಲಿತಾಂಶ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ವೋಟ್ ಚೋರಿ ಸೇರಿದಂತೆ ಇತರೆ ಅಪಪ್ರಚಾರ ನಡೆಸಿತು. ಆದರೆ ಕಾಂಗ್ರೆಸ್ ಪಕ್ಷದ ಈ ಕುತಂತ್ರಕ್ಕೆ ಬಿಹಾರದ ಜನರು ತಕ್ಕ ಪಾಠ ಕಲಿಸಿದ್ದಾರೆ. ವೋಟ್ ಚೋರಿ ಬಗ್ಗೆ ಸಾಕ್ಷ್ಯಾಧಾರವಿದ್ದರೆ ಚುನಾವಣಾ ಆಯೋಗಕ್ಕೆ ದೂರು ನೀಡಲಿ ಎಂದು ಸಲಹೆ ನೀಡುತ್ತಿದ್ದೇವೆ. ಆದರೆ ಈ ತನಕ ಚುನಾವಣಾ ಆಯೋಗಕ್ಕೆ ದೂರು ನೀಡಿಲ್ಲ ಎಂದು ಯದುವೀರ್ ತಿಳಿಸಿದರು.

ಚುನಾವಣಾ ತಂತ್ರದ ಭಾಗವಾಗಿ ಆರೋಪ ಮಾಡಿದ ವೋಟ್ ಚೋರಿಯಿಂದ ಚುನಾವಣೆಯಲ್ಲಿ ಯಾವುದೇ ಕಮಾಲ್ ಮಾಡಲು ಸಾಧ್ಯವಾಗಲಿಲ್ಲ. ಇಂತಹ ಕುತಂತ್ರ ಬಿಟ್ಟು ಚುನಾವಣೆಯಲ್ಲಿ ತಮಗೆ ಏಕೆ ಸೋಲಾಯಿತು ಎಂದು ಕಾಂಗ್ರೆಸ್ ನಾಯಕರು ಈಗಲಾದರೂ ಆತ್ಮಾವಲೋಕನ ಮಾಡಿಕೊಳ್ಳುವುದು ಒಳಿತು ಎಂದು ಸಲಹೆ ನೀಡಿದರು.

ಬಿಹಾರದ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ನಾಯಕರು ವಿದೇಶದಲ್ಲಿ ಪ್ರವಾಸದಲ್ಲಿರುವುದನ್ನು ನಾನು ನೋಡಿದ್ದೇನೆ. ಆದರೆ ನಮ್ಮ ಪಕ್ಷದ ಕಾರ್ಯಕರ್ತರು ಹಳ್ಳಿ ಹಳ್ಳಿಗೂ ಹೋಗಿ ಪ್ರಚಾರ ಮಾಡಿದರು. ಆದರೆ ಇಂತಹ ಯಾವುದೇ ಪ್ರಯತ್ನ ಮಾಡದೆ ಆಧಾರ ರಹಿತ ಆರೋಪ ಮಾಡಿದ ಕಾಂಗ್ರೆಸ್‌ಗೆ ಜನರು ತಕ್ಕ ಪಾಠ ಕಲಿಸಿದ್ದಾರೆ ಎಂದು ಹೇಳಿದರು.

ಕಳೆದ 75 ವರ್ಷದ ಅವಧಿಯಲ್ಲಿ ಕಾಂಗ್ರೆಸ್ ಅಭಿವೃದ್ಧಿ ಮಾಡಿಲ್ಲ. ಜಾತಿ ಹೆಸರಿನಲ್ಲಿ ಸಮಾಜ ವಿಭಜನೆ ಮಾಡಿ ಲಾಭ ಪಡೆದುಕೊಳ್ಳಲು ಮುಂದಾಗಿದೆ. ಆದರೆ ಇವರ ನಿಜ ಬಣ್ಣವನ್ನು ಜನರು ತಿಳಿದುಕೊಂಡಿದ್ದಾರೆ. ಇದರಿಂದ ದೆಹಲಿ, ಹರಿಯಾಣ, ಮಹಾರಾಷ್ಟ್ರ ಚುನಾವಣೆ ಸೇರಿದಂತೆ ಈಗಿನ ಬಿಹಾರದಲ್ಲಿ ಜನರು ಕಾಂಗ್ರೆಸ್‌ಗೆ ಶಾಕ್ ನೀಡಿದ್ದಾರೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆಯನ್ನು ಹಣಕಾಸಿನ ಮಿತಿಯಲ್ಲಿ ರೂಪಿಸಬೇಕು. ಆದರೆ ಹಣಕಾಸಿನ ಲಭ್ಯತೆ ಪರಿಗಣಿಸದೆ ಗ್ಯಾರಂಟಿ ಯೋಜನೆ ಜಾರಿ ಮಾಡಿ ಅಭಿವೃದ್ಧಿ ಶೂನ್ಯಗೊಳಿಸಿದ್ದಾರೆ ಎಂದು ಯದುವೀರ್ ಆರೋಪಿಸಿದರು.

ಇಂದು ಉಚಿತ ಕಣ್ಣಿನ ತಪಾಸಣಾ ಶಿಬಿರ



ಮೈಸೂರು, ನ.15– ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ ಮೈಸೂರು ಹಾಗೂ ಶ್ರೀ ಭಗವಾನ್ ಮಹಾವೀರ ದರ್ಶನ್ ಕಣ್ಣಿನ ಆಸ್ಪತ್ರೆ, ಮೈಸೂರು ಸಹ ಯೋಗದೊಂದಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ನ.16 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಮೈಸೂರಿನ ಧನ್ವಂತರಿ ರಸ್ತೆ ಜಿಲ್ಲಾ ಶಾಖೆ, ರಾಜ್ಯ ಸರ್ಕಾರಿ ನೌಕರರ ಸಂಘದಲ್ಲಿ ಆಯೋಜಿಸಲಾಗಿದೆ. ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬದ ಸದಸ್ಯರು ಇದರ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. ಮಾಹಿತಿಗಾಗಿ 9448208750/ 9880260239, 9916155428/ 9945899209 ಸಂಪರ್ಕಿಸಬಹುದು ಎಂದು ಜಿಲ್ಲಾಧ್ಯಕ್ಷ ಡಾ. ಅರುಣಕುಮಾರ.ಸಿ.ಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಪ್ರತಿನಿಧಿ ನ್ಯಾಯಾಲಯಕ್ಕೆ ತನಿಖಾ ವರದಿ ಸಲ್ಲಿಕೆ

ಮೈಸೂರು, ನ.15(ಬಿಎಲ್ ಯು) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಡಾ ಪ್ರಕರಣ ಸಂಬಂಧ ಲೋಕಾಯುಕ್ತ ವಿಶೇಷ ಸರ್ಕಾರಿ ಅಭಿಯೋಜಕರಾದ ವೆಂಕಟೇಶ್ ಅರಬಟ್ಟಿ ಅವರು ಇಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ತನಿಖಾ ಪ್ರಗತಿಯ ವರದಿ ಸಲ್ಲಿಸಿದರು. ಜಾರಿ ನಿರ್ದೇಶನಾಲಯದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರು ಈ ವೇಳೆ ಹಾಜರಿದ್ದರು. ವೆಂಕಟೇಶ್ ಅರಬಟ್ಟಿ ಅವರು ಸಲ್ಲಿಸಿದ ತನಿಖಾ ಪ್ರಗತಿ ವರದಿಯನ್ನು ಸ್ವೀಕರಿಸಿದ ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಡಿಸೆಂಬರ್ 4 ಕ್ಕೆ ಮುಂದೂಡಿತು.

ಕಲಿಕೆಗೆ ವಯಸ್ಸಲ್ಲ ಮುಖ್ಯ; ಕಲಿಯುವ ಮನಸ್ಸು ಬೇಕಷ್ಟೇ

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಮತ



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಕ್ಕಳ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಚಿಗುರು' ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಉದ್ಘಾಟಿಸಿದರು.

ಮೈಸೂರು, ನ.15(ಎಸ್‌ಪಿಎನ್)– ಕಲಿಕೆಗೆ ವಯಸ್ಸು ಮುಖ್ಯವಲ್ಲ. ಮನಸ್ಸು, ಆಸಕ್ತಿ ಮುಖ್ಯ. ನಾನು ಈಗಲೂ ಪ್ರತಿಯೊಂದು ಕಾರ್ಯಕ್ರಮದಲ್ಲೂ ಹೊಸತನವನ್ನು ನೋಡಿ ಕಲಿಯುತ್ತೇನೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಕ್ಕಳ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಚಿಗುರು' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು, ಈ ವೇದಿಕೆಯಲ್ಲಿ ಕೇಳಿಸಿಕೊಂಡ ಭಾಷಣದ ತುಣುಕುಗಳನ್ನು ಬೇರೊಂದು ವೇದಿಕೆಯಲ್ಲಿ ನನ್ನದೇ ದಾಟಿಯಲ್ಲಿ ಮಾತನಾಡುತ್ತೇನೆ. ಹಾಗಾಗಿ ಮಕ್ಕಳ ಕಲಿಕೆಯಲ್ಲಿ ಆಸಕ್ತಿ ಬೆಳೆಸಲು ಎಲ್ಲರೂ ಪ್ರೋತ್ಸಾಹಿಸಬೇಕು ಎಂದು ಕಿವಿಮಾತು ಹೇಳಿದರು.

ಪೋಷಕರು ಮಕ್ಕಳಿಗೆ ಬುದ್ದಿವಾದ ಹೇಳಲು ಶಿಕ್ಷೆ ಮಾರ್ಗ ಅನುಸರಿಸದೇ ಅವರ ಆತ್ಮಕ್ಕೆ ಮುಟ್ಟುವಂತೆ ತಿಳಿಹೇಳುವುದೇ ಸೌಖ್ಯ. ತಂದೆ–ತಾಯಿ, ತಮ್ಮ ಮಕ್ಕಳಿಗೆ ವಿದ್ಯೆ, ವಿನಯ ಕಲಿಸಿ ಮಕ್ಕಳನ್ನು ಸಮಾಜದ ನಿರ್ಮಾತೃಗಳಾಗಿ ರೂಪಿಸಬೇಕು. ಅದಕ್ಕೆ ಶಿಕ್ಷಾ ಮಾರ್ಗವನ್ನೇ ಅವಲಂಭಿಸಬೇಕಿಲ್ಲ. ಬದಲಿಗೆ ಮನಮುಟ್ಟುವಂತೆ ಹೇಳುವ ವಿಧಾನ ರೂಢಿಸಿಕೊಳ್ಳಬೇಕು. ಮತ್ತೆ ನೀವು ಹೇಳಿದ್ದನ್ನು ಮಕ್ಕಳು ಪಾಲಿಸುವ ಮನಸ್ಥಿತಿ ರೂಪಿಸಬೇಕು. ಇನ್ನುಳಿದದ್ದನ್ನು ಸಮಾಜ ಕಲಿಸುತ್ತದೆ ಎಂದು ಹೇಳಿದರು.

ಒಂದು ಮನೆಯಲ್ಲಿ ಅಮ್ಮ ತನ್ನ ಸೀರೆ ಉಡುವಾಗ ಹೆಣ್ಣು ಮಕ್ಕಳು ನೋಡುತ್ತಿದ್ದರೆ, ಅವರು ಸಹಾ ಕನ್ನಡಿ ಮುಂದೆ ನಿಂತು ಸೀರೆ ಉಡುವ ಪ್ರಯತ್ನ ಮಾಡುತ್ತಾರೆ. ಹಾಗಾಗಿ ಮಕ್ಕಳಿಗೆ ಹೇಳಿಕೊಟ್ಟು ಕಲಿಸುವುದಕ್ಕಿಂತ ಅವರ ಮುಂದೆ ಒಳ್ಳೆಯ ಕೆಲಸಗಳನ್ನು ಮಾಡಿದರೆ, ಮುಂದೆ ಅವರು ಸಹ ಅದನ್ನೇ ಕಲಿಕೆಗೆ ಮುಂದಾಗುತ್ತಾರೆ ಎಂದು ಕೆಲವು ಘಟನೆಗಳನ್ನು ಉಲ್ಲೇಖಿಸಿದರು.


ಪ್ರಸ್ತುತ ಕಾರ್ಯಕ್ರಮದಲ್ಲಿ 6ರಿಂದ 16 ವರ್ಷದ ಮಕ್ಕಳು ತಮ್ಮ ಪ್ರತಿಭೆ ಅನಾವರಣಗೊಳಿಸಲು ವೇದಿಕೆ ಕಲ್ಪಿಸಿರುವುದು ಶ್ಲಾಘನೀಯ. ಇದರಿಂದ ಮಕ್ಕಳು ಪ್ರೇರಣೆಗೊಂಡು ಪರಿಣಾಮಕಾರಿಯಾಗಿ ಮತ್ತಷ್ಟು ಕಲಿಯುತ್ತಾರೆ. ಮಾತ್ರವಲ್ಲದೇ ಪೋಷಕರೂ ಮಕ್ಕಳು ಗುರಿ ಮುಟ್ಟಲು ಇನ್ನಷ್ಟು ಶ್ರಮಿಸುತ್ತಾರೆ ಎಂದರು.

ಗಿಡ ನೆಟ್ಟಾಗ ಅದಕ್ಕೆ ಆಧಾರವಾಗಿರಲೆಂದು ಒಂದು ಕಡ್ಡಿ ಒತ್ತು ಕೊಡುತ್ತೇವೆ. ಮಾತ್ರವಲ್ಲದೇ ರಕ್ಷಣೆಗೆ ಆ ಗಿಡದ ಸುತ್ತಲೂ ಬೇಲಿ ಹಾಕುತ್ತೇವೆ. ಅದೇ ರೀತಿ ಮಕ್ಕಳಿಗೆ ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಕಡ್ಡಿಯಂತೆ ಈ ವೇದಿಕೆ ನೆರವಾಗಿದೆ. ಅವರ ಕ್ರಿಯಾಶೀಲತೆಗೆ ಪೋಷಕರು ಬೇಲಿಯಂತೆ ರಕ್ಷೆಯಾಗಿ ನಿಲ್ಲಬೇಕೆಂದು ಕಿವಿಮಾತು ಹೇಳಿದರಲ್ಲದೆ, ನೋಡುತ್ತಾ ವಿದ್ಯೆಯನ್ನು ಕಲಿ, ತಾಯಿಯಿಂದ ವಿನಯ ಕಲಿ, ತಂದೆಯಿಂದ ಬದುಕನ್ನು ಕಲಿ, ಮುಂದೆ ಸಮಾಜವೇ ನೀನು ಬದುಕುವುದಕ್ಕೆ ಆಸರೆಯಾಗುತ್ತದೆ ಎಂಬ ಸೂಕ್ತಿಯನ್ನು ಉಚ್ಛರಿಸಿ ಚಪ್ಪಾಳೆ ಗಿಟ್ಟಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಸಾಮಾನ್ಯವಾಗಿ ತಮ್ಮ ಮಕ್ಕಳನ್ನು ಯಾವ ಕ್ಷೇತ್ರದಲ್ಲಿ ತೊಡಗಿಸಿದರೆ ಮೇಲೆ ಬರುತ್ತಾರೆ ಎಂದು ನಿರ್ಧರಿಸುವುದೇ ಸವಾಲಿನ ಕೆಲಸ. ಕಾರ್ಯಕ್ರಮದಲ್ಲಿರುವ ಪೋಷಕರು ಆ ಕೆಲಸವನ್ನು ಸಮರ್ಥವಾಗಿ ನಿರ್ವಹಣೆ ಮಾಡಿದ್ದಾರೆ ಎಂದರು.

ಈ ವೇಳೆ ಮಕ್ಕಳ ದಿನಾಚರಣೆ ಅಂಗವಾಗಿ ಸಾತ್ವಿಕ್ ಮತ್ತು ತಂಡದಿಂದ ಶಾಸ್ತ್ರೀಯ ಸಂಗೀತ, ಆಯುಷಿ, ಸಂತೋಷ್ ಮತ್ತು ತಂಡದಿಂದ ಸುಗಮ ಸಂಗೀತ, ಜಿ.ರಮ್ಯ ಮತ್ತು ತಂಡದಿಂಥ ಜಾನಪದ ಗೀತೆ, ನಿಸರ್ಗ ಮತ್ತು ತಂಡದಿಂದ ನೃತ್ಯರೂಪಕ, ಅರ್ಜುನ್ ಕೃಷ್ಣ ಅವರಿಂದ ಏಕಾಪಾತ್ರಾಭಿನಯ, ಶ್ರಮಂತ್ ಗೌಡ ಮತ್ತು ತಂಡದಿಂದ ಕವಿರತ್ನ ಕಾಳಿದಾಸ ನಾಟಕ ಪ್ರದರ್ಶಿಸಿ ಎಲ್ಲರ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಪೋಷಕರು ಸೇರಿದಂತೆ ಇತರರಿದ್ದರು.

ರಾಹುಲ್ ಗಾಂಧಿಗೆ ರಾಹುಕಾಲ ಶುರು; ಸಿದ್ದರಾಮಯ್ಯಗೆ ಇನ್ನು ಶುಕ್ರದೆಶೆ!



ಬೆಂಗಳೂರು, ನ.15– ವೋಟ್ ಚೋರಿ ಕಾಂಗ್ರೆಸ್‌ನವರ ಬ್ರ್ಯಾಂಡ್ ಆಗಿತ್ತು, ಆದರೆ ಜನ ಈ ಡೈಲಾಗ್‌ನ್ನು ನಂಬಲ್ಲ. ಇನ್ಮುಂದೆ ರಾಹುಲ್ ಗಾಂಧಿಗೆ ರಾಹುಕಾಲ ಶುರು. ಹೀಗಾಗಿ ಸಿದ್ದರಾಮಯ್ಯ ಹೇಳಿದಂತೆ ಕೇಳಬೇಕಾಗುತ್ತೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಲೇವಡಿ ಮಾಡಿದ್ದಾರೆ.

ಟನಲ್ ರೋಡ್ ವಿರೋಧಿಸಿ ಸ್ಯಾಂಕಿ ಟ್ಯಾಂಕ್ ಪಾರ್ಕ್‌ನಲ್ಲಿ ಬಿಜೆಪಿ ನಾಯಕರು ಇಂದು ಅಭಿಯಾನ ನಡೆಸಿದರು. ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸೋತ ಮೇಲೆ ಮತಚೋರಿ ಅಂತಾ ಪಕ್ಷದ ನಾಯಕರು ಡೈಲಾಗ್ ಹೊಡೆಯುತ್ತಾರೆ. ಈ ಡೈಲಾಗ್ ಅನ್ನು ಜನ ನಂಬಲ್ಲ. ಇನ್ಮುಂದೆ ರಾಹುಲ್ ಗಾಂಧಿಗೆ ರಾಹುಕಾಲ ಶುರುವಾಯ್ತು ಎಂದರು.

ಬಿಹಾರ ಫಲಿತಾಂಶದಿಂದ ಕಾಂಗ್ರೆಸ್ ಹೈಕಮಾಂಡ್ ಮಂಕಾಗಿದೆ. ಆದರೆ, ಸಿದ್ದರಾಮಯ್ಯ ಸ್ಟ್ರಾಂಗ್ ಆಗಿದ್ದಾರೆ. ಇಷ್ಟು ದಿನ ರಾಹುಲ್ ಗಾಂಧಿ ಮಾತನ್ನು ಸಿದ್ದರಾಮಯ್ಯ ಕೇಳುತ್ತಿದ್ದರು. ಈಗ ಸಿದ್ದರಾಮಯ್ಯ ಮಾತನ್ನು ರಾಹುಲ್ ಗಾಂಧಿ ಕೇಳಬೇಕು. ರಾಹುಲ್ ಗಾಂಧಿಯನ್ನು ಸಿದ್ದರಾಮಯ್ಯ ಹಾವಾಡಿಗರ ರೀತಿ ಆಡಿಸ್ತಾರೆ. ಈ ಫಲಿತಾಂಶ ಕಾಂಗ್ರೆಸ್ ಹೈಕಮಾಂಡ್‌ಗೆ ಶಾಕ್ ಕೊಟ್ಟಿದೆ.

ಕಠಿಣ ಅಧ್ಯಯನ, ಪರಿಪೂರ್ಣ ವ್ಯಕ್ತಿತ್ವದಿಂದ ಸಾಧನೆ ಸಾಧ್ಯ

- ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಮತ
- ಮಹಾರಾಣಿ ವಾಣಿಜ್ಯ ಕಾಲೇಜಲ್ಲಿ ನಾನಾ ಕಾರ್ಯಕ್ರಮಕ್ಕೆ ಚಾಲನೆ



ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯಕ್ರಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ. ಸವಿತಾ ಚಾಲನೆ ನೀಡಿದರು.

ಮೈಸೂರು, ನ15(ಎಂಟಿವೈ)– ವಿದ್ಯಾರ್ಥಿಗಳು ಕಠಿಣ ಅಧ್ಯಯನದೊಂದಿಗೆ ಪರಿಪೂರ್ಣ ವ್ಯಕ್ತಿತ್ವ ರೂಢಿಸಿಕೊಂಡಾಗ ಮಾತ್ರ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ. ಸವಿತಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಕಾಲೇಜಿನ ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ 'ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್‌ಕ್ರಾಸ್, ಎನ್‌ಸಿಸಿ, ರೇಂಜರ್ಸ್, ಸಾಂಸ್ಕೃತಿಕ ಚಟುವಟಿಕೆ ಮತ್ತು ಸಂಶೋಧನಾ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಸಾಧನೆ ಮಾಡಬೇಕಾದರೆ ಯಾವುದೇ ರೀತಿಯ ಅಡ್ಡದಾರಿ ಹಿಡಿಯಬಾರದು. ಕಠಿಣ ಶ್ರಮಪಟ್ಟು ಅಧ್ಯಯನದಲ್ಲಿ ನಿರತರಾದರೆ ಸಾಧನೆ ಮಾಡಲು ಸಾಧ್ಯ. ಕಲಿಕೆಯಲ್ಲಿ ಹಿಂಜರಿಕೆ ಇರಬಾರದು. ಆಸಕ್ತಿಯಿಂದ ಕಲಿಯುವ ಹಂಬಲ ವ್ಯಕ್ತಪಡಿಸಬೇಕು. ನಮ್ಮ ಪ್ರತಿಭೆ ಮತ್ತು ಪರಿಶ್ರಮ ಮಾತ್ರ ನಮ್ಮನ್ನು ಯಶಸ್ವಿನ ದಾರಿಯಲ್ಲಿ ಕೊಂಡೊಯ್ಯುತ್ತವೆ. ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ದಾಸರಾಗದೆ ಗ್ರಂಥಾಲಯ, ಪುಸ್ತಕ ಮತ್ತು ಶಿಕ್ಷಕರೊಂದಿಗೆ ನಿರಂತರ ಒಡನಾಟದಿಂದ ಮಾತ್ರ ಜ್ಞಾನಾರ್ಜನೆ ಮಾಡಿಕೊಳ್ಳಲು ಸಾಧ್ಯ ಎಂದರು.

ವಿದ್ಯಾರ್ಥಿಗಳು ಕೇವಲ ಪಠ್ಯ ವಿಷಯ ಆಧರಿತ ಕಲಿಕೆಯಿಂದ ಕೆಲಸ ಪಡೆದುಕೊಂಡು ಜೀವನ ರೂಢಿಸಿಕೊಳ್ಳಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಮುಂದೇನು ಎಂಬ ಚಿಂತೆ ಆರಂಭವಾಗುತ್ತದೆ. ಆದ್ದರಿಂದ ಓದುವ ವೇಳೆ ಮೊಬೈಲ್ ಸೇರಿದಂತೆ ಇನ್ನಿತರ ಮನರಂಜನಾ ಚಟುವಟಿಕೆಗಳ ಮೂಲಕ ವ್ಯರ್ಥವಾಗಿ ಕಾಲಹರಣ ಮಾಡದೇ ಇಂಗ್ಲಿಷ್ ಕಲಿಕೆ, ಕಂಪ್ಯೂಟರ್ ತರಬೇತಿ ಸೇರಿದಂತೆ ಇನ್ನಿತರ ಕೌಶಲಾಧಾರಿತ ಕಲಿಕೆಗೆ ಒತ್ತು ನೀಡಬೇಕು. ಆಗ ಮಾತ್ರ ಒಬ್ಬ ಪರಿಪೂರ್ಣ ವಿದ್ಯಾರ್ಥಿಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಮಾತ್ರವಲ್ಲದೇ ಇದರಿಂದ ಉತ್ತಮ ಭವಿಷ್ಯವೂ ರೂಪುಗೊಳ್ಳುತ್ತದೆ ಎಂದರು.

ವಿದ್ಯಾರ್ಥಿಗಳು ತಮ್ಮನ್ನು ತಾವು ಅರಿತುಕೊಂಡು, ತಮ್ಮಲ್ಲಿರುವ ಪ್ರತಿಭೆಗೆ ಮತ್ತಷ್ಟು ಕರಾರುವಾಕ್ಕಾದ ತರಬೇತಿ ಪಡೆದುಕೊಂಡಾಗ ಅದೇ ನಮ್ಮ ಜೀವನಕ್ಕೆ ದಾರಿದೀಪವಾಗುತ್ತದೆ. ನಾವು ಅವಕಾಶಕ್ಕಾಗಿ ಕಾಯದೆ ಅವಕಾಶಗಳೇ ನಮ್ಮನ್ನು ಹುಡುಕಿಕೊಂಡು ಬರುವಂತೆ ನಮ್ಮನ್ನು ನಾವು ಮಾರ್ಪಾಡು ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗಾಯಕಿ ರಶ್ಮಿ ಧರ್ಮೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಪ್ರಾಧ್ಯಾಪಕ ಪ್ರೊ.ಬಿ. ನಾಗರಾಜು, ಕಾಲೇಜು ಶಿಕ್ಷಣ ಇಲಾಖೆ ಮೈಸೂರು ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕಿ ಪ್ರೊ.ಡಿ.ಎಸ್. ಪ್ರತಿಮಾ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಪ್ರಾಂಶುಪಾಲ ಪ್ರೊ.ಸಿ.ನಟರಾಜ್, ಸಾಂಸ್ಕೃತಿಕ ವೇದಿಕೆ ಪದಾಧಿಕಾರಿಗಳಾದ ಪಿ. ಶಿವಣ್ಣ, ಪ್ರೊ.ಪಿ. ರಾಘವೇಂದ್ರ, ಪತ್ರಾಂಕಿತ ವ್ಯವಸ್ಥಾಪಕಿ ಲಲಿತಾ ಕುಮಾರಿ, ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷೆ ಎಸ್.ಜೆ.ಸಿಂಚನ, ಉಪಾಧ್ಯಕ್ಷೆ ತುಳಸಿ, ಕಾರ್ಯದರ್ಶಿ ಸೈಯದ್ ನೊರೈನ್ ಹಾಗೂ ಇತರರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಾವೂದ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದೇ ದೇ ಪ್ಯಾರ್ ದೇ–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬ್ರ್ಯಾಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಅದರ್ಸ್ (ತ)	4 ಪ್ರದರ್ಶನಗಳು
ಸಂಗಂ	
ಗತವೈಭವ (ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.25ಕ್ಕೆ, ಸಂ.4.45ಕ್ಕೆ
	ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ.11.00ಕ್ಕೆ, ರಾ.8.05, ರಾ.10.25ಕ್ಕೆ
ಸ್ಕ್ರೀನ್ 2	ಡೈಸ್ ಇರೇ (ಮ): ಬೆ.10.40ಕ್ಕೆ, ಆರೊಮಲೆ (ತ): ಮ.1.25ಕ್ಕೆ, ಬ್ರ್ಯಾಟ್(ಕ): ಸಂ.4.05ಕ್ಕೆ, ಸಂ.7.15ಕ್ಕೆ ಜಟಾಧರ (ತೆ): ರಾ.10.20ಕ್ಕೆ
ಸ್ಕ್ರೀನ್ 3	ಹಕ್ (ಹಿ): ಬೆ.10.35ಕ್ಕೆ, ಮ. 1.25ಕ್ಕೆ, ಸಂ. 7.15ಕ್ಕೆ ಲವ್ ಯು ಮುದ್ದು(ಕ): ಸಂ. 4.20ಕ್ಕೆ, ಇನ್ನೊಸೆಂಟ್ (ಮ): ರಾ.10.10ಕ್ಕೆ,
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಸಂ. 7.00ಕ್ಕೆ, ಬ್ರಾಟ್(ಕ): ಬೆ.10.20ಕ್ಕೆ, ಯಜಮಾನ(ಕ): ಮ.1.30ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಸಂ.4.10ಕ್ಕೆ, ರಾ. 10.20ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಕಾಂತಾರ –1(ಕ): ಬೆ.10.30, ಮ.1.35, ರಾ.7.15ಕ್ಕೆ
- ಬ್ರ್ಯಾಟ್ (ಕ): ಬೆ.10.45ಕ್ಕೆ, ಮ.1.45, ಸಂ.4.45, ರಾ.7.45ಕ್ಕೆ
- ನಿಷಿದ್ಧ (ಕ): ಬೆ.10.50ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಬೆ.11, ಸಂ.6.30, ರಾ.9.15ಕ್ಕೆ
- ಕೋಣ (ಕ): ಮ.1.15ಕ್ಕೆ, ಐ ಆ್ಯಮ್ ಗಾಡ್ (ಕ): ಸಂ.3.40ಕ್ಕೆ,
- ಲವ್ ಯು ಮುದ್ದು(ಕ): ಸಂ.6.40ಕ್ಕೆ, ಡೈಸ್ ಇರೇ (ಮ): ರಾ. 9.15ಕ್ಕೆ,

ನೆಕ್ಸಸ್ ಮಾಲ್

- ಕಾಂತಾರ ಚಾಪ್ಟರ್ 1(ಕ) : ಬೆ: 10.00ಕ್ಕೆ, ಸಂ.4.15ಕ್ಕೆ, ರಾ.10.30ಕ್ಕೆ.
- ಬ್ರ್ಯಾಟ್ (ಕ): ಬೆ: 9.45ಕ್ಕೆ, ಸಂ.4.05ಕ್ಕೆ.
- ದಿ ಗರ್ಲ್‌ಫ್ರೆಂಡ್ (ತೆ): ಬೆ: 9.55ಕ್ಕೆ, ಮ.12.50ಕ್ಕೆ, ಸಂ.6.55, ರಾ: 9.50ಕ್ಕೆ
- ಹಕ್ (ಹಿ): ಬೆ: 10.05ಕ್ಕೆ, ಮ.1.25, ಸಂ.7.40, ರಾ.10.00ಕ್ಕೆ
- ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.05ಕ್ಕೆ, ಮ.12.30, ಸಂ.7.15, ರಾ.9.40ಕ್ಕೆ
- ದಿ ತಾಜ್ ಸ್ಟೋರಿ (ಹಿ): ಬೆ: 10.05, ಮ: 3.50ಕ್ಕೆ,
- ಯಜಮಾನ (ಕ): ಮ: 12.40ಕ್ಕೆ, ಜಟಾಧರ (ತೆ): ಮ: 1.00ಕ್ಕೆ,
- ಡೈಸ್ ಇರೇ (ಮ): ಮ. 1.35ಕ್ಕೆ, ರಾ: 7.40ಕ್ಕೆ, ಬಾಹುಬಲಿ (ಹಿ): ಮ. 2.55ಕ್ಕೆ,
- ತಮ್ಮಾ (ಹಿ): ಮ.3.45ಕ್ಕೆ, ಚೆನ್ನೈ ಎಕ್ಸ್‌ಪ್ರೆಸ್ (ಹಿ): ಸಂ. 4.05ಕ್ಕೆ,
- ಆರೊಮಲೆ (ತ): ಸಂ.7.15ಕ್ಕೆ, ಏಕ್ ದಿವಾನೆ ಕಿ ದೀವಾನಿಯಾತ್ (ಹಿ): ಸಂ.7.15ಕ್ಕೆ
- ಇನ್ನೋಸೆಂಟ್(ಮ): ರಾ.10.10ಕ್ಕೆ, ಮರ್ಡರ್ ರಿಪೋರ್ಟ್(ಕೋ): ರಾ.10.20ಕ್ಕೆ,

ಗರುಡ ಮಾಲ್

- ಕಾಂತಾರ ಚಾಪ್ಟರ್ 1(ಕ) : ಬೆ: 9.50ಕ್ಕೆ, ಮ.1.10ಕ್ಕೆ, ಸಂ.7.05
- ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.00ಕ್ಕೆ, ಸಂ.4.45, ರಾ.10.20ಕ್ಕೆ
- ದಿ ಗರ್ಲ್‌ಫ್ರೆಂಡ್ (ತೆ): ಬೆ: 10.10ಕ್ಕೆ, ಸಂ.7.05, ರಾ.10.00ಕ್ಕೆ
- ಹಕ್ (ಹಿ): ಬೆ: 10.40ಕ್ಕೆ, ಸ.4.15, ರಾ.10.30ಕ್ಕೆ
- ಬಾಹುಬಲಿ (ತೆ): ಮ. 12.25ಕ್ಕೆ,
- ಬ್ರ್ಯಾಟ್ (ಕ): ಮ. 1.05ಕ್ಕೆ, ಸಂ.7.10ಕ್ಕೆ
- ಜಟಾಧರ (ತೆ): ಮ: 1.30ಕ್ಕೆ,
- ಲವ್ ಯು ಮುದ್ದು(ಕ): ಸಂ.4.20ಕ್ಕೆ, ಡೈಸ್ ಇರೇ (ಮ): ಸಂ.4.35, ರಾ.10.10ಕ್ಕೆ
- ಐ ಆ್ಯಮ್ ಗಾಡ್ (ಕ): ಸಂ.7.05ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದೆಹಲಿ ಕಾರು ಬಾಂಬ್ ಸ್ಫೋಟ ಖಂಡಿಸಿ ಮೈಸೂರಲ್ಲಿ ಹಿಂದೂ ಜಾಗರಣ ವೇದಿಕೆ ಪ್ರತಿಭಟನೆ



ದೆಹಲಿಯಲ್ಲಿ ಸಂಭವಿಸಿದ ಕಾರು ಬಾಂಬ್ ಸ್ಫೋಟ ಘಟನೆ ಖಂಡಿಸಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಶನಿವಾರ ಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು,ನ.15(ಜಿಎ)–ದೆಹಲಿಯಲ್ಲಿ ಸಂಭವಿಸಿದ ಕಾರು ಬಾಂಬ್ ಸ್ಫೋಟ ಘಟನೆ ಖಂಡಿಸಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಶನಿವಾರ ಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಗಳಿಗೆ ಧಿಕ್ಕಾರ', 'ಜೈಷ್ ಇ ಮೊಹಮ್ಮದ್ ಭಯೋತ್ಪಾದಕ ಸಂಘಟನೆಗೆ ಧಿಕ್ಕಾರ', 'ಕೋಡ್‌ವರ್ಡ್ ಬಳಸಿ ಸಂವಹನ ನಡೆಸುತ್ತಿದ್ದ ಉಗ್ರರಿಗೆ ಧಿಕ್ಕಾರ', 'ಕುಡಿಯುವ ನೀರಿನಲ್ಲಿ ವಿಷ ಬೆರೆಸಿ ಸಾಮೂಹಿಕ ಹತ್ಯೆಗೆ ಸಂಚು ರೂಪಿಸಿದ್ದ ಮತಾಂಧರ ವಿರುದ್ಧ ಕ್ರಮವಹಿಸಿ' ಎಂಬ ವಿವಿಧ ಘೋಷಣೆ ಕೂಗಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆಯ ದಕ್ಷಿಣ ಪ್ರಾಂತ ಸಹ ಸಂಚಾಲಕ ಮಹೇಶ್ ಕಣಕದಾಳು ಮಾತನಾಡಿ, 'ಬುರ್ಖಾವು ಭವಿಷ್ಯದಲ್ಲಿ ಆಂತರಿಕ ಸುರಕ್ಷತೆಗೆ ಬೆದರಿಕೆಯೊಡ್ಡಲಿದೆ. ಅದನ್ನು ಧರಿಸಿ ಬಂದರೆ ಪುರುಷ, ಮಹಿಳೆ, ಭಯೋತ್ಪಾದಕ ಯಾರೆಂದು ತಿಳಿಯುವುದಿಲ್ಲ ಎಂಬ ಮಾತು ಇತ್ತು. ಆದರೆ ಈಗ ಇಸ್ಲಾಂ ಧರ್ಮದ ಮಹಿಳೆಯರೂ ಭಯೋತ್ಪಾದನೆಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಗೊತ್ತಾಗುತ್ತಿದೆ. ಅವರು ಬುರ್ಖಾ ಹಾಕಿ ಈ ದೇಶಕ್ಕೆ ಮಾರಕವಾಗುವ ಸಾಧ್ಯತೆಯಿದ್ದು, ಬುರ್ಖಾ ನಿಷೇಧ ಮಾಡಬೇಕು ಎಂದು ಒತ್ತಾಯಿಸಿದರು.

ದೇವಸ್ಥಾನ, ದೇವಾಲಯ ಉತ್ತಮ ವಿಚಾರಗಳನ್ನು ತಿಳಿಸುವ ಕೇಂದ್ರಗಳಾಗಿವೆ. ಇಸ್ಲಾಂ ಧಾರ್ಮಿಕ ಮುಖಂಡರು ಮಸೀದಿ, ಮದರಸದಲ್ಲೂ ಒಳ್ಳೆಯ ವಿಚಾರ ತಿಳಿಸುತ್ತಿದ್ದೇವೆ. ನಮ್ಮ ಧರ್ಮ ಶಾಂತಿಯನ್ನು ಬಯಸುತ್ತದೆ. ಕೊಲ್ಲುವ ವಿಚಾರ ಒಪ್ಪುವುದಿಲ್ಲ ಎನ್ನುತ್ತಾರೆ. ಹಾಗಿದ್ದರೆ ಹಿಂದುತ್ವದ ಕಾರ್ಯಕರ್ತರನ್ನು ವ್ಯವಸ್ಥಿತವಾಗಿ ಹತ್ಯೆ ಮಾಡಲಾದ ಪ್ರಕರಣಗಳಲ್ಲಿ ಪತ್ತೆಯಾದ ಆರೋಪಿಗಳು ಮಸೀದಿಯಲ್ಲಿ ಪತ್ತೆಯಾಗಿದ್ದು ಹೇಗೆ, ಇಸ್ಲಾಮಿಕ್ ಭಯೋತ್ಪಾದನೆಯ ಬಗ್ಗೆ ಸಮಗ್ರ ತನಿಖೆ ಮಾಡಬೇಕು ಎಂದು ಆಗ್ರಹಿಸಿದರು.

ಸಂಘಟನೆ ಪದಾಧಿಕಾರಿಗಳಾದ ವಸಂತ್ ಕುಮಾರ್, ಚಂದ್ರು ಸ್ವಾಮಿ, ರಾಜನ್, ಮಂಜುನಾಥ್ ಸಿಂಗ್ ಪಾಲ್ಗೊಂಡಿದ್ದರು.

भारतीय प्रेस परिषद PRESS COUNCIL OF INDIA

ಮೈಸೂರು ಮಿತ್ರ 46

On this National Press Day

Our Newspaper reiterates its commitment to free, fair and ethical journalism.

November 16, 2025